ಅ) ಇಲ್ಲ.
ಆ) ಇಲ್ಲ.
ಇ) ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವಾಗುವ ದೃಷ್ಟಿಯಿಂದ ವಿದ್ಯಾರ್ಥಿವೇತನ ಬಿಡುಗಡೆ ಮಾಡಲಾಗುತ್ತಿದೆ. ವಿದ್ಯಾರ್ಥಿ : ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನ ಬಿಡುಗಡೆಗಾಗಿ ಬೇಕಾಗಿರುವ ನಿಗದಿತ ಹಾಜರಾತಿ ಹೊಂದಿದ ಕೂಡಲೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಈ ಬಗ್ಗೆ ವಿಳಂಬ ಮಾಡಬಾರದೆಂದು ಸಂಬಂಧಿಸಿದವರಿಗೆ ಸೂಚನೆಗಳನ್ನು ನೀಡಲಾಗಿದೆ.
ಈ) ಹೌದು.
ಉ)

ವರ್ಷ	ಬಹುಮಾನ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ಖರ್ಚು (ಲಕ್ಷ ರೂ. ಗಳಲ್ಲಿ)
ಅ) <u>ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು :</u>		
1989-90	1306	6.62
1990-91	2018	10.39
1991-92	3271	16.59
ಆ) <u>ಕಾಲೇಜು ವಿದ್ಯಾರ್ಥಿಗಳು :</u>		
1989-90	710	6.54
1990-91	816	7.52
1991-92	1628	10.67

<u>ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.</u>

ವಿಷಯ :- <u>ಕುಷ್ಟಗಿ ತಾಲ್ಲೂಕಿನ ಮಲಘಟ್ಟ ಗ್ರಾಮದ ದೇವದಾಸಿ ಕರಿಯಕ್ಕನ ಮಗಳು ಶರಣಮ್ಮ (20 ವರ್ಷ) ಎಂಬುವಳ ಮೇಲೆ ಅತ್ಯಾಚಾರದ ಬಗ್ಗೆ ಕುರಿತು.</u>

* ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಕೂಡ ತಲೆತಗ್ಗಿಸುವ ವಿಚಾರ ಏನು ನಡೆದಿದೆ, ಆ ವಿಚಾರದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ನಾನು, ಮಾನ್ಯ ಈಶ್ವರಪ್ಪನವರು ಮತ್ತು ಬಸವರಾಜರಾಯ ರೆಡ್ಡಿ ನಾವೆಲ್ಲರೂ ಸಹಿತ ಕಳಿಸಿದ್ದೇವೆ. ಇದನ್ನು ಇಂದು ಪ್ರಶ್ನೋತ್ತರ ವೇಳೆಯಲ್ಲಿ ಪ್ರಸ್ತಾಪಿಸಿದ್ದೇವೆ. ನಮ್ಮ ಜೊತೆಯಲ್ಲಿ ಈ ಕಡೆ ಸಾಲಿನಲ್ಲಿ ಕುಳಿತಿರತಕ್ಕಂಥ ವಾಟಾಳ್ ನಾಗರಾಜರು, ಸನ್ಮಾನ್ಯ ಯಡಿಯೂರಪ್ಪನವರು, ಸನ್ಮಾನ್ಯ ಬೈರೇಗೌಡರು- ಹೀಗೆ ನಾವೆಲ್ಲರೂ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಮಾನ್ಯ ಅಧ್ಯಕ್ಷರೇ, ಶರಣಮ್ಮ ಎಂಬ 20 ವರ್ಷದ, ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮಲಘಟ್ಟ ಗ್ರಾಮದ ದೇವದಾಸಿ ಕರಿಯಕ್ಕನ ಮಗಳು. ಈಕೆ ಒಬ್ಬ ಅಂಗನವಾಡಿ ಕಾರ್ಯಕರ್ತೆ. ಈಕೆಯನ್ನು ಕುಷ್ಟಗಿ ತಾಲ್ಲೂಕಿನ, ಸರ್ಕಾರದ ಮೂರು ಜನ

ಅಧಿಕಾರಿಗಳು, ಯಾರು ಸರ್ಕಾರದ ಪ್ರತಿನಿಧಿಗಳಾಗಿ, ಸರ್ಕಾರದ ಕೆಲಸವನ್ನು ಮಾಡುವುದಕ್ಕೆ ನೇಮಕವಾಗಿದ್ದಾರೆಯೋ, ಈ ಅಧಿಕಾರಿ ಮಿತ್ರರು ಅಲ್ಲಿರತಕ್ಕ ಕೆಲವು ಮುಖಂಡರ ಶಾಮೀಲು ಮತ್ತು ಆಶೀರ್ವಾದವನ್ನು ಪಡೆದು, ಸಾಮೂಹಿಕವಾಗಿ ಈ ಹೆಣ್ಣುಮಗಳ ಮೇಲೆ ಅತ್ಯಾಚಾರ ಮಾಡಿದ್ದಾರೆ. ಇದು ನಿಜವಾಗಿಯೂ ಸಹಿತ ನಾವೆಲ್ಲರೂ ತಲೆತಗ್ಗಿಸತಕ್ಕ ವಿಚಾರ ಮತ್ತು ಇಲ್ಲಿ ಸರ್ಕಾರ ಇದೆಯೇ ಎಂದು ಪ್ರಶ್ನೆ ಮಾಡತಕ್ಕ ಸಂದರ್ಭ ಬಂದಿದೆ. ಈಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ, ಕೊಲೆಯನ್ನು ಮಾಡಿ, ಆ ಕೊಲೆಯನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಇಡೀ ಸರ್ಕಾರಕ್ಕೇ ಅಪಮಾನಕರವಾದ ವಿಚಾರವೆಂದು ಬಹಳ ನೊಂದ ಮನಸ್ಸಿನಿಂದ ನಾನು ಹೇಳುತ್ತಿದ್ದೇನೆ. ಫೆಬ್ರವರಿ 10ನೇ ತಾರೀಖು ರಾತ್ರಿ 12 ಗಂಟೆಗೆ ಶರಣಮ್ಮನನ್ನು ಸರ್ಕಾರದ ಅಧಿಕೃತ ನಿವಾಸಕ್ಕೆ ಅಧಿಕಾರಿಗಳು ಕರೆಯಿಸಿಕೊಳ್ಳುತ್ತಾರೆ. ಈ ಅಧಿಕಾರಿಗಳೆಲ್ಲರೂ ಪಾನಮತ್ತರಾಗಿದ್ದಾರೆ, ಅಲ್ಲಿರತಕ್ಕ ಕೆಲವು ಮುಖಂಡರೂ ಸಹಿತ ಇದರಲ್ಲಿ ಸೇರಿಕೊಂಡಿದ್ದಾರೆ. ಇವರೆಲ್ಲರೂ ಸಾಮೂಹಿಕವಾಗಿ ಅವಳ ಮೇಲೆ ಅತ್ಯಾಚಾರ ಎಸಗಿದ ಮೇಲೆ ಆಕೆ ಪ್ರಜ್ಞೆ ತಪ್ಪುತ್ತಾಳೆ. ಆಕೆ ಪ್ರಜ್ಞೆ ತಪ್ಪಿ, ರಕ್ತಸ್ರಾವವಾದ ಮೇಲೆ ಇವರಿಗೆ ಅರ್ಥವಾಗುತ್ತದೆ. ಆಕೆಯನ್ನು ಕುಷ್ಟಗಿ ಆಸ್ಪತ್ರೆಯಲ್ಲಿ ಸೇರಿಸಿದರೆ ಬಯಲಾಗಬಹುದು ಎಂದು ಪ್ರಜ್ಞೆ ಇಲ್ಲದಿರತಕ್ಕ ಆಕೆಯನ್ನು ಕಾರಿನಲ್ಲಿ ಹುಬ್ಬಳ್ಳಿಗೆ ಎತ್ತಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ದಾರಿಯಲ್ಲಿ ಹೋಗುವಾಗ, ಆಕೆ ಕೊನೆಯುಸಿರೆಳೆಯುತ್ತಾಳೆ. ಇದಾದ ತಕ್ಷಣ ಆ ಅಧಿಕಾರಿಗಳು ಬಂದು, ಆಕೆಯ ತಾಯಿ ಯಾರು ಕರಿಯವ್ವ ಇದ್ದಾಳೆ, ಅವಳಿಗೆ ಒಂದಷ್ಟು ಹಣವನ್ನು ತೋರಿಸಿ, ಆಕೆಯ ಜೀವಕ್ಕೂ ಸಹಿತ ಭಯ ಹಾಕಿದ್ದಾರೆ. ಏನಾದರೂ ನೀನು ಇದನ್ನು ಹೊರಗಡೆ ಹೇಳುವುದಾದರೆ, ನಿನಗೂ, ನಿನ್ನ ಮಗಳ ಗತಿಯೇ ಆಗುತ್ತದೆ ಎಂಬ ಭಯದ ವಾತಾವರಣವನ್ನು ಸೃಷ್ಟಿ ಮಾಡಿ, ಹಣವನ್ನು ಆಕೆಗೆ ಕೊಟ್ಟಿದ್ದಾರೆ. ಅದಾದ ನಂತರ, ಅವರ ಸಂಪ್ರದಾಯ ಮತ್ತು ಪದ್ಧತಿ ಪ್ರಕಾರ, ಅವಳನ್ನು ಮಣ್ಣುಮಾಡುವಂಥಾದ್ದು, ಅಂದರೆ, ಆಕೆಯ ಶವವನ್ನು ಮಣ್ಣಿನಲ್ಲಿ ಹಾಕತಕ್ಕಂಥದ್ದು : ಮಾಡಬೇಕಾಗಿತ್ತು. ಆದರೆ, ಅದು ನಾಳೆ ಗೊತ್ತಾದರೆ, ಹೊರಗಡೆ ತೆಗೆಯಬಹುದು ಎಂದು ಹೇಳಿ, ಅದನ್ನು ಸುಟ್ಟುಹಾಕಿದ್ದಾರೆ. ಇಂತಹ ಬರ್ಬರ, ಅಮಾನುಷ, ನಾಗರೀಕತೆಗೆ ಅವಮಾನವಾಗಿರತಕ್ಕ ದಾರುಣ ಅಕೃತ್ಯಕ್ಕೆ ಕಾರಣರು ಈ ಸರ್ಕಾರದ ಪ್ರತಿನಿಧಿಗಳಾಗಿರತಕ್ಕ ಅಧಿಕಾರಿಗಳು. ಇದನ್ನು ಹೇಳಿಕೊಳ್ಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ . 20 ವರ್ಷದ ಒಬ್ಬ ಹೆಣ್ಣು ಮಗಳ ಮೇಲೆ ಆಗಿರತಕ್ಕ ಅತ್ಯಾಚಾರವನ್ನು ಹೇಳಿಕೊಳ್ಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ ಮತ್ತು ಇದನ್ನು ಮಾಡಿರತಕ್ಕವರು ಸರ್ಕಾರದ ಅಧಿಕಾರಿಗಳು ಎಂದು ಹೇಳಿಕೊಳ್ಳುವುದಕ್ಕೂ ನಮಗೆ ನಾಚಿಕೆಯಾಗುತ್ತದೆ. ಇಂತಹ ಪ್ರಕರಣ ಕರ್ನಾಟಕದಲ್ಲಿ ನಡೆದಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಸರ್ಕಾರಿ ಅಧಿಕಾರಿಗಳೇ, ಸರ್ಕಾರಿ ಅಧಿಕೃತ ನಿವಾಸದಲ್ಲಿ ಈ ಕೃತ್ಯ ಮಾಡಿ, ಇದನ್ನು ಮುಚ್ಚಿಡುವ ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಕರಣ ಇವತ್ತಿಗೆ 23 ದಿನಗಳ ಹಿಂದೆ ಆಯಿತು. ಇದು ಇವತ್ತಿಗೂ ಇಡೀ ಕುಷ್ಟಗಿಯಲ್ಲಿ ಮನೆಮಾತಾಗಿರತಕ್ಕ ವಿಚಾರ. ಆದರೆ, ನಮ್ಮ ಸರ್ಕಾರದ ಗಮನಕ್ಕೆ ಪ್ರಜಾವಾಣಿ ಪತ್ರಿಕೆ ಹೊರಗಡೆ ತರುವವರೆಗೆ ಬಂದಿರಲಿಲ್ಲ. ಜಿಲ್ಲಾಪರಿಷತ್, ಕಂದಾಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಹಾಗೂ ಒಬ್ಬರು ವಕೀಲರು ಸೇರಿ ಈ ಹೆಣ್ಣುಮಗಳ ಮೇಲೆ ಮಾಡಿರತಕ್ಕ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ. ಇದಕ್ಕೆ ಯಾರು ಹೊಣೆ. ಈ ದುಷ್ಕೃತ್ಯ ತೀರಾ ಖಂಡನೀಯವಾಗಿರತಕ್ಕಂಥಾದ್ದು. ಜೊತೆಗೆ, ಇವರು ಈ ಗ್ಯಾಂಗ್ ರೇಪನ್ನು ಮಾಡಿರುವುದು ಇದೇನು ಮೊಟ್ಟಮೊದಲ ಸಾರಿ ಅಲ್ಲ. ಈ 4 ಜನರು ಹಲವಾರು ಬಾರಿ ಈ ಗ್ಯಾಂಗ್ ರೇಪನ್ನು ಮಾಡಿದ್ದಾರೆ. ಯಾರು ದೊರೆಗೆ ದೂರನ್ನು ಮುಟ್ಟಿಸತಕ್ಕವರೋ, ಅವರೇ ಈ ಕೆಲಸವನ್ನು ಮಾಡಿದ್ದಾರೆ. ಇವತ್ತು, ನೈತಿಕ ಹೊಣೆ ಹೊತ್ತಿರತಕ್ಕ ನೀವು ಮಾಡಿರತಕ್ಕ ಪ್ರತಿಕ್ರಿಯೆ

ಯಾದರೂ ಏನು? ಮಾನ್ಯ ಯಡಿಯೂರಪ್ಪನವರು ಜವಾಬ್ದಾರಿ ಪಕ್ಷದ ಅಧ್ಯಕ್ಷರು, ವಾಟಾಳ್ ನಾಗರಾಜ್‌ರವರು ಹೀಗೆ ನಾವೆಲ್ಲರೂ ಪ್ರತಿಭಟನೆ ಮಾಡಿದ್ದೇವೆ. ನಿಮ್ಮ ಜವಾಬ್ದಾರಿ ಏನು? ಮೊದಲನೆಯ ಸಾಲಿನಲ್ಲಿರತಕ್ಕ ಮಂತ್ರಿಗಳು ಮೋಜು ಮಾಡುವುದಕ್ಕೆ ಹೋಗಿದ್ದಾರೆಯೇ? ಅವರಿಗೆ ಕೇಳುವುದಕ್ಕೆ ಕರುಣೆ ಇಲ್ಲವೇ? ಈ ಪೋಲೀಸ್ ಅಧಿಕಾರಿಗಳನ್ನು ಕರೆಯಿಸಿ ಕೇಳತಕ್ಕಂತಹ ಸೌಜನ್ಯ ನಿಮ್ಮ ಸರ್ಕಾರಕ್ಕೆ ಇಲ್ಲವೇ? ನಾಚಿಕೆಯಾಗಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಕನಿಷ್ಟ ಪಕ್ಷ ಗೃಹ ಇಲಾಖೆಗೆ ಒಬ್ಬ ಸಚಿವರು ಇದ್ದಾರೆ, ಅವರೂ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಈ ನರರಾಕ್ಷಸರನ್ನು ನೀವು ಬಂಧಿಸಿದ್ದೀರಾ? ಅವರನ್ನು ವಿಚಾರಣೆ ಮಾಡದೇ ಇರುವುದಕ್ಕೆ ಕಾರಣವೇನು? ಇದಕ್ಕೆ ಯಾವುದಾದರೂ ಮುಖಂಡರ ಕೈವಾಡ ಇದೆಯೇ? ಇದಕ್ಕೆ ಸರ್ಕಾರದ ಆಶೀರ್ವಾದ ಇದೆಯೇ? ಮಾನ್ಯ ಅಧ್ಯಕ್ಷರೇ, ನನಗೆ ತಿಳಿದ ಹಾಗೆ, ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ಈ ವಿಚಾರ ಬಂದಿದ್ದರೂ ಸಹ ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕರಿಯಣ್ಣನವರೇ, ತಾವು ಯೋಚನೆ ಮಾಡಿ. ದಲಿತರ ಹೆಸರಿನಲ್ಲಿ ಅವರನ್ನು ರಕ್ಷಣೆ ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದಂತಹ ಸರ್ಕಾರ ಇದು. ಮಾನ್ಯ ಜಾಲಪ್ಪನವರು ಗೃಹಸಚಿವರಾಗಿದ್ದರು. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದರು ಬಸವಣ್ಣನವರು. ಶಿವಮೊಗ್ಗ ಜಿಲ್ಲೆಯಲ್ಲಿ ಮಲ ತಿನ್ನಿಸಿದ ಪ್ರಕರಣ ನಡೆದಾಗ ಇಡೀ ಸರ್ಕಾರದ ಕೆಲಸವನ್ನು ನಿಲ್ಲಿಸಿ ಹೆಲಿಕಾಪ್ಟರ್‌ನಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇವೆ. ದಲಿತರ ಮೇಲೆ ದೌರ್ಜನ್ಯ ಈ ಸಮಾಜಕ್ಕೆ ಒಂದು ಶಾಪ, ಈ ದೇಶಕ್ಕೆ ಒಂದು ಶಾಪ. ಇದರಿಂದ ನಾವೆಲ್ಲಾ ತಲೆತಗ್ಗಿಸಬೇಕು. ಆದರೆ ಇಂತಹ ಒಂದು ಹೀನ ಕೃತ್ಯ ನಡೆದಿರುವಾಗ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳದೆ ಇರುವಂತಹ ಸರ್ಕಾರಕ್ಕೆ ನಾವು ಏನು ಹೇಳಬೇಕು ಎನ್ನುವುದನ್ನು ನನಗಂತೂ ಅರ್ಥವಾಗುತ್ತಿಲ್ಲ. ಈ ಶರಣಮ್ಮನ ತಾಯಿಗೆ ಹಣ ಕೊಟ್ಟು ಆಕೆಯ ಬಾಯಿ ಮುಚ್ಚಿಸಲು ಪ್ರಯತ್ನ ಮಾಡುತ್ತಿರತಕ್ಕಂತಹ ಸರ್ಕಾರ ಇದು. ಆಕೆಯ ಪ್ರಾಣಕ್ಕೆ ಅಪಾಯವಿದೆಯೆಂದು ತಿಳಿದಿದ್ದರೂ ಸಹ ಸುಮ್ಮನೆ ಇದ್ದೀರಿ.ಅವರ ಮೇಲೆ ಸರ್ಕಾರ ಇದುವರೆಗೂ ಯಾವುದೇ ಕೇಸ್ ದಾಖಲು ಮಾಡಿಲ್ಲ. ಆದ್ದರಿಂದ ನಾವು ನಿಲುವಳಿ ಸೂಚನೆ ಕಳುಹಿಸಿರತಕ್ಕಂಥಾದ್ದು. ಈ ಸದನದ ಅಮೂಲ್ಯವಾದ ವೇಳೆಯನ್ನು ಹಾಳು ಮಾಡಬೇಕೆಂಬ ಉದ್ದೇಶದಿಂದ ಅಲ್ಲ, ಈ ಕೃತ್ಯ ನಡೆದಿರತಕ್ಕಂಥ ಸಂದರ್ಭದಲ್ಲಿ ಇದರ ಧ್ವನಿಯನ್ನು ಇಲ್ಲಿ ಎತ್ತದೆ ಹೋದರೆ ನಾವು ಆ ಪಾಪಕ್ಕೆ ಶಾಮಿಲಾಗುತ್ತೇವೆ. ಆ ಕಾರಣದಿಂದ ನೊಂದು ನಾವೆಲ್ಲರೂ ಇದನ್ನು ಪ್ರಸ್ತಾಪ ಮಾಡಬಯಸುತ್ತೇವೆ. ತಾವು ಈ ನಿಲುವಳಿ ಸೂಚನೆಗೆ ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಬಹಳ ಕಳಿಕಳಿಯಿಂದ ನಾನು ಈ ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇನೆ. ನೀವು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಯಾರು ಈ ಕೃತ್ಯ ಎಸಗಿದ್ದಾರೆ , ಅವರನ್ನು ಅಮಾನತ್ತಿನಲ್ಲಿಡಬೇಕು. ನಿಮಗೆ ನೈತಿಕವಾಗಿ ಆ ಸ್ಥಾನದಲ್ಲಿ ಇರುವುದಕ್ಕೆ ಅಧಿಕಾರವಿಲ್ಲವೆಂದು ನಾನು ಹೇಳುತ್ತೇನೆ. ಇಂತಹ ಪ್ರಕರಣ ಬಿಹಾರಿನಲ್ಲಿ ಆದಾಗ ಅಲ್ಲಿ ಗೃಹಸಚಿವರು ರಾಜೀನಾಮೆ ಕೊಟ್ಟಿದ್ದಾರೆ. ಇವತ್ತು ಇಡೀ ಕರ್ನಾಟಕ ರಾಜ್ಯದ 4 ಕೋಟಿ ಜನ ತಲೆ ತಗ್ಗಿಸತಕ್ಕಂಥ ಕೆಲಸ ಈ ಸರ್ಕಾರದ ಆದೇಶದಲ್ಲಿ ಆಗಿದೆ ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು. ಇದರಲ್ಲಿ ಸ್ಥಳೀಯ ಅಧಿಕಾರಿಗಳು ಶಾಮಿಲಾಗಿದ್ದಾರೆ. ಆದ್ದರಿಂದ ಸಿ.ಬಿ.ಐ. ಎನ್‌ಕ್ವೈಯರಿ

ಆಗಬೇಕೆಂದು ನಾನು ಕೇಳುತ್ತೇನೆ. ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈಯರಿ ಆಗಬೇಕು. ಸಿ.ಬಿ.ಐ. ಎನ್‌ಕ್ವೈಯರಿ ಆದೇಶ ಕೊಟ್ಟರೆ ಅಲ್ಲಿರತಕ್ಕಂಥ ಅಧಿಕಾರಿಗಳ ವೃಂದಕ್ಕೆ ಅಂದರೆ ನಮ್ಮಲ್ಲಿ ಒಳ್ಳೆಯ ಉತ್ತಮ ದಕ್ಷ ಅಧಿಕಾರಿಗಳು ಇದ್ದಾರೆ. ಅವರಲ್ಲಿ ಪ್ರಾಮಾಣಿಕರು ಇದ್ದಾರೆ. ಆದರೆ ಅಧಿಕಾರಿ ವೃಂದಕ್ಕೆ ಅವಮಾನಕರವಾದ ಪ್ರಸಂಗ ಇದು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ನೀವು ತಕ್ಷಣ ಅಮಾನತ್ತಿನಲ್ಲಿಡಬೇಕು ಇದನ್ನು ಸಿ.ಬಿ.ಐ. ಎನ್‌ಕ್ವೈಯರಿಗೆ ರೆಫರ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ಬೆಳಿಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಈ ಪ್ರಕರಣವನ್ನು ಓದಿದ ತಕ್ಷಣ ನಮ್ಮ ಪಕ್ಷದ ಸದಸ್ಯರಾದ ಬಸವರಾಜರಾಯರೆಡ್ಡಿಯವರು ಫೋನ್ ಮೂಲಕ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನ ಮಾಡಿದಾಗ ಅಧಿಕಾರಿಗಳ ದಂಡು ಈಗ ಕುಷ್ಟಗಿಗೆ ಮಲಘಟ್ಟಕ್ಕೆ ಹೊರಟಿದೆ. ಈ ಸದನ ಮುಗಿಯುವುದರೊಳಗಾಗಿ ಅಲ್ಲಿರತಕ್ಕಂಥ ರಿಕಾರ್ಡ್‌ಗಳನ್ನು ತಿದ್ದುಪಡಿಮಾಡುತ್ತಾರೋ ಗೊತ್ತಿಲ್ಲ. ಆಕೆಯ ತಾಯಿಯ ಜೀವಕ್ಕೆ ಭಯ ಇದೆ ಎಂದು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಏಕೆಂದರೆ ಆಕೆ ಒಬ್ಬಳೇ ಉಳಿದಿರತಕ್ಕಂಥ ಸಾಕ್ಷಿ. ಅದಕ್ಕೆ ಅವಳನ್ನು ಸಂಪೂರ್ಣವಾಗಿ ನಾಶ ಮಾಡತಕ್ಕಂಥ, ಆಕೆಯನ್ನು ಮುಗಿಸತಕ್ಕಂಥ ಪ್ರಯತ್ನವೂ ಕೂಡ ನಡೆದಿದೆ. ಏಕೆಂದರೆ ಬೇಲಿಯೇ ಎದ್ದು ಹೊಲ ಮೇಯುತ್ತಿದೆ. ಇವತ್ತು ಕುಷ್ಟಗಿಯಲ್ಲಿ ಸರ್ಕಾರ ಇಲ್ಲ. ಅಲ್ಲಿ ರಾಕ್ಷಸರು ಆಳುತ್ತಿದ್ದಾರೆ. ಈ ಕೃತ್ಯಕ್ಕೆ ಕಾರಣಕರ್ತರಾಗಿರತಕ್ಕಂಥ ನೀವು ನೈತಿಕವಾದ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ನಾನು ಬಹಳ ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ ನಿಮ್ಮ ಸರ್ಕಾರಕ್ಕೆ ಗೌರವ ಬರಬೇಕು. ಇನ್ನು ಮುಂದೆ ಇಂತಹ ಕೆಲಸಗಳು ಆಗಬಾರದು ಎಂದು ಏನಾದರೂ ಇದ್ದರೆ ದಯವಿಟ್ಟು ಇದನ್ನು ನೀವು ಸಿ.ಬಿ.ಐ.ಗೆ ರೆಫರ್ ಮಾಡಿ ಆ ಅಧಿಕಾರಿಗಳನ್ನು ತುರ್ತಾಗಿ ಸಸ್ಪೆಂಡ್ ಮಾಡಿ ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವು ನನಗೆ ಸಮಯ ಕೊಟ್ಟಿದ್ದಕ್ಕೆ ಧನ್ಯವಾದಗಳು. ಈ ವಿಚಾರದಲ್ಲಿ ಇನ್ನೂ ಅನೇಕ ವಿಚಾರಗಳನ್ನು ಹೇಳತಕ್ಕಂಥಾದ್ದು ಇದೆ. ಇನ್ನು ನಮ್ಮ ಪಕ್ಷದ ಹಂಪನಗೌಡರು, ಬಸವರಾಜರಾಯ ರೆಡ್ಡಿಯವರು ಇತರರು ಮಾತನಾಡುವವರು ಇದ್ದಾರೆ. ಆದ್ದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡಲು ಇವತ್ತಿನ ಸಭೆಯ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ನಮ್ಮ ನಿಲುವಳಿ ಸೂಚನೆಗೆ ಅವಕಾಶ ಮಾಡಿ ಕೊಡಬೇಕು ಎಂದು ಹೇಳಿ ತಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ತಮಗೆ ಧನ್ಯವಾದಗಳು.

* ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ಒಂದು ರೀತಿ ಮಾನವ ಕುಲಕ್ಕೆ ಕಳಂಕತರುವಂತಹ ಅಮಾನುಷ ಕೃತ್ಯ ರಾಯಚೂರು ಜಿಲ್ಲೆಯ ಕುಷ್ಟಗಿಯಲ್ಲಿ ನಡೆದಿರುವಂಥಾದ್ದು. ಪ್ರಜಾವಾಣಿ ಪತ್ರಿಕೆ ಸೇರಿ ಎಲ್ಲಾ ಪತ್ರಿಕೆಗಳ ಮುಖ ಪುಟದಲ್ಲಿ ಬಂದಿದೆ ಸ್ವಾಮಿ. ನಾನು ಪ್ರಾರಂಭದಲ್ಲಿ ತಮ್ಮಲ್ಲಿ ಅತ್ಯಂತ ವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ನಮ್ಮನ್ನು ಅಪಾರ್ಥಮಾಡಿಕೊಳ್ಳಬೇಡಿ. ಇವತ್ತು ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಿ ಈ ವಿಷಯವನ್ನು ಚರ್ಚೆಗೆ ತರಲೇಬೇಕೆಂದು ಹೇಳಿ ನಾವು ವಾಕ್ ಔಟ್ ಮಾಡಿದ್ದು ತಮಗೆ ಅಗೌರವ ತರಬೇಕೆಂದಲ್ಲ. ಯಾವ ದೇಶದಲ್ಲಿ ಒಬ್ಬ ಸ್ತ್ರೀಗೆ ತಾಯಿಯ ಸ್ಥಾನ ನೀಡಿದ್ದೇವೆಯೋ ಅಂಥಾ ನಾಡಿನಲ್ಲಿ ಒಬ್ಬ ಕಡು ಬಡವೆ ಪರಿಶಿಷ್ಟಜಾತಿಗೆ ಸೇರಿದವರು, ಅಂಗನವಾಡಿ ಕಾರ್ಯಕರ್ತೆಯಾಗಿ ಎರಡು ಹೊತ್ತಿನ ಗಂಜಿಗಾಗಿ ಜೀತದಾಳಿನಂತೆ ದುಡಿಯುತ್ತಿದ್ದ ಆ ಹೆಣ್ಣು ಮಗಳನ್ನು ಯಾರು ರಕ್ಷಣೆ ಕೊಡಬೇಕಾಗಿತ್ತೋ, ಯಾವ ಸರ್ಕಾರಿ

ಕಛೇರಿಯನ್ನು ದೇವರ ಗುಡಿಯೆಂದು ನಾವು ಭಾವಿಸುತ್ತೇವೆಯೊ, ಅಂಥಾ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವಂಥ ಉನ್ನತ ಅಧಿಕಾರಿಗಳು, ಅವರ ಮನೆಯಲ್ಲೆ ಸಾಮೂಹಿಕ ಅತ್ಯಾಚಾರವನ್ನು ನಡೆಸಿದರು. ಅದಕ್ಕೆ ನೀವು ಜವಾಬ್ದಾರರೆಂದು ನಾವು ಹೇಳುತ್ತಿಲ್ಲ. ಆದರೂ ಏಕೆ ಹೇಳುತ್ತಿದ್ದೇನೆ ಎಂದರೆ ಈ ಘಟನೆ ನಡೆದು 25 ದಿವಸ ಆಯಿತಲ್ಲ. ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಇವತ್ತು ಬರದೇ ಇದ್ದಿದ್ದರೆ ಈ ಘಟನೆ ಹೊರಗಡೆ ಬರುತ್ತಾ ಇತ್ತೋ? ಈ ಸದನ ಪ್ರಾರಂಭವಾಗಿ ಇಷ್ಟು ದಿವಸಗಳಾದರೂ ಸಹ ಈ ರಾಜ್ಯದ ನಾಲ್ಕೂವರೆ ಕೋಟಿ ಜನರ ಜವಾಬ್ದಾರಿ ಹೊತ್ತಿರುವ ಮುಖ್ಯ ಮಂತ್ರಿ ವೀರಪ್ಪಮೊಯಿಲಿಯವರು ಹೋಮ್ ಡಿಪಾರ್ಟ್‌ಮೆಂಟನ್ನು ವಹಿಸಿಕೊಂಡಿರುವಂಥ ಈ ಸಂದರ್ಭದಲ್ಲಿ ಈ ಘಟನೆ ನಡೆದಿರುವುದು ತಿಳಿದ ತಕ್ಷಣ ಈ ಸದನದಲ್ಲಿ ಸ್ಟೇಟ್‌ಮೆಂಟನ್ನು ಮಾಡುವ ಕರ್ತವ್ಯ ಇತ್ತೇ ಇರಲಿಲ್ಲವೇ? ಈ ಘಟನೆ ನಡೆದ ಆ ಕ್ಷಣ 4 ಜನ ಉನ್ನತ ಅಧಿಕಾರಿಗಳು ಯಾರಿದ್ದಾರೊ ಅವರನ್ನು ಸಸ್ಪೆಂಡ್ ಮಾಡುತ್ತೇವೆ, ಕ್ರಿಮಿನಲ್ ಕೇಸ್ ದಾಖಲೆ ಮಾಡಿದ್ದೇವೆ, ಸರ್ಕಾರದ ಕಡೆಯಿಂದ ಏನು ಮಾಡಬೇಕೋ ಅದಕ್ಕೆ ಒಂದು ಕೂದಲು ಎಳೆಯಷ್ಟು ಚ್ಯುತಿ ಬರದ ಹಾಗೆ ಕೆಲಸ ಮಾಡಿದ್ದೇವೆ ಎಂದರೆ ಈ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೆ. ಆದರೆ ಇವತ್ತು ಯಾವ ಸ್ಥಿತಿಗೆ ಬಂದಿದ್ದೇವೆ? ವಿಧಾನ ಮಂಡಲದಲ್ಲಿ ರಾಜ್ಯದ ಎಲ್ಲಾ ಕಡೆ ಹೆಣ್ಣು ಮಕ್ಕಳ ಮೇಲೆ ನಡೆದಿರುವ ಘಟನೆಗಳನ್ನು ಚರ್ಚೆಗೆ ತರಲು ಸಾಧ್ಯವೇನು? ನಾನು ಈ ಎಸ್.ಪಿ. ಬಗ್ಗೆ ಕೇಳುತ್ತೇನೆ. ಕೇವಲ ಈ 4 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಲ್ಲ. ಯಾವ ಪೋಲೀಸ್ ಅಧಿಕಾರಿ ಅಲ್ಲಿ ಕೆಲಸ ಮಾಡುತ್ತಿದ್ದಾನೆ, ಅವನು ಈ ಉನ್ನತ ಅಧಿಕಾರಿಗಳೊಡನೆ ಶಾಮಿಲಾಗಿ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈ ಎಸ್.ಪಿ.ಯನ್ನು ಸಸ್ಪೆಂಡ್ ಮಾಡುತ್ತೀರಾ? ಖಾಕಿ ಬಟ್ಟೆಗೆ ಅವಮಾನ ಮಾಡುತ್ತಿರುವಂಥ ಇಂಥ ಉನ್ನತ ಅಧಿಕಾರಿಗಳನ್ನು ಇಟ್ಟುಕೊಂಡು ನೀವು ಸರ್ಕಾರ ನಡೆಸುತ್ತೀರಾ ಸ್ವಾಮಿ? ಇಂಥ ಅಮಾನುಷ ಘಟನೆ ನಡೆದಿದೆ ಎಂದು ಪತ್ರಿಕೆಗಳ ಮುಖ ಪುಟದಲ್ಲಿ ಬಂದಿದೆ. ಮುಂದಿನ ಸಾಲಿನಲ್ಲಿ ಇರಬೇಕಾದ ಕ್ಯಾಬಿನೆಟ್ ಸಚಿವರು ಎಲ್ಲಿ ಹೋಗಿದ್ದಾರೆ ಸ್ವಾಮಿ? ಎಲ್ಲಿಹೋಗಿದ್ದಾರೆ ನಿಮ್ಮ ಡೆಪ್ಯುಟಿ ಹೋಮ್ ಮಿನಿಸ್ಟರ್? ಗೂಟದ ಕಾರು ತೆಗೆದುಕೊಂಡು ಮೋಜು ಮಾಡುವುದಕ್ಕೆ ಹೋಗಿದ್ದಾರೋ? ಡೆಪ್ಯೂಟಿ ಚೀಫ್ ಮಿನಿಸ್ಟರ್ ಎಲ್ಲಿ ಹೋಗಿದ್ದಾರೆ ಸ್ವಾಮಿ? ನನಗೆ ಈ ಪ್ರಶ್ನೆ ಕೇಳುವುದಕ್ಕೆ ಹಕ್ಕಿಲ್ಲವೆಂದರೆ ನಾನು ಕೇಳುವುದಿಲ್ಲ ಸ್ವಾಮಿ. ಇದಕ್ಕಿಂತ ಬೇರೆ ಕೆಲಸ ನಿಮಗೆ ಏನಿದೆ? ಏತಕ್ಕೋಸ್ಕರ ಮಂತ್ರಿಮಂಡಲ ಇರುವುದು? ಇಂಥ ಅಪಮಾನ ಸಹಿಸಿಕೊಂಡು ನಾವು ಸದನದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ಸ್ವಾಮಿ. ಅದಕ್ಕಾಗಿ ಕ್ವೆಶ್ಚನ್ ಅವರ್ ಸಸ್ಪೆಂಡ್ ಮಾಡಿ, ಏನು ಉನ್ನತ ಅಧಿಕಾರಿಗಳು ಕೆಲವರು ರಾಜ್ಯಕ್ಕೆ ಅಪಮಾನಕರವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇಂಥಾ ಘಟನೆಗಳು ನಡೆಯಬಾರದು ಎಂದಿದ್ದರೆ, ಇಡೀ ಸರ್ಕಾರಿ ನೌಕರರಿಗೆ ಅಪಮಾನ ಮಾಡುವಂಥ ಕೆಲಸವನ್ನು ಈ ದುಷ್ಟ ಅಧಿಕಾರಿಗಳು ಏನು ಮಾಡಿದ್ದಾರೆ, ಅವರ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡು ಮಾನ್ಯ ಯಡಿಯೂರಪ್ಪನವರೇ ನಿಲುವಳಿ ಸೂಚನೆ ಅಗತ್ಯ ಇಲ್ಲ, ನಾವು ಈಗಾಗಲೇ ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಸರ್ಕಾರ ಹೇಳಬೇಕಾಗಿತ್ತು. ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾರೆ. ಅವರು ಎಲ್ಲಿಗಾದರೂ ಹೋಗಲಿ ಅದರ ಬಗ್ಗೆ ನಾವು ಚರ್ಚೆ ಮಾಡುವುದಿಲ್ಲ. ಎಲ್ಲಿ ನಿಮ್ಮ ಡೆಪ್ಯುಟಿ ಚೀಫ್ ಮಿನಿಸ್ಟರ್? ಎಲ್ಲಿ ನಿಮ್ಮ ಡೆಪ್ಯುಟಿ ಹೋಮ್ ಮಿನಿಸ್ಟರ್? ಎಲ್ಲಿ ಹೋಗಿದ್ದಾರೆ ಮುಂದಿನ ಸಾಲಿನ ಮಂತ್ರಿಗಳು? ಇದಕ್ಕಿಂತ ಬೇರೆ ಜವಾಬ್ದಾರಿ ಕೆಲಸ ಇದೆ ಹೋಗಿದ್ದಾರೆಂದು ಹೇಳಬಹುದು. ಈ ಸದನಕ್ಕೆ ಮಹತ್ವ ಇದೆ. ಸ್ವಾಮಿ, ಇದನ್ನು ಸಹಿಸಲಿಕ್ಕೆ ಸಾಧ್ಯವಿಲ್ಲ. ಇದರಲ್ಲಿ ಮಾನ್ಯ ಸಿಂಧ್ಯಾರವರಿಗಾಗಲೀ, ನಮಗಾಗಲೀ ಭಿನ್ನಾಭಿಪ್ರಾಯವಿಲ್ಲ.

ನಮ್ಮ ಹಿರಿಯ ಮುಖಂಡರಾದಂಥ ಸನ್ಮಾನ್ಯ ಮಲ್ಲಾರೀಗೌಡ ಪಾಟೀಲ್‌ರವರ ಬಗ್ಗೆ ನನಗೆ ಅಪಾರ ಗೌರವವಿದೆ. ನಾನು ಈ ಸದನದಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಅವಕಾಶ ಇಲ್ಲವೇ? ಸ್ವಾಮಿ, ನಾನು ನಿಮ್ಮ ಪೀಠಕ್ಕೆ ಅಗೌರವ ತಂದಿದ್ದೇನೆಯೆ? ಇಲ್ಲ.

11.15 ಎ.ಎಂ.

* ಶ್ರೀ ಎಂ. ಎಸ್. ಪಾಟೀಲ್ : ನಾನು ಕೂಡ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಬ್ಬ ಮಂತ್ರಿಯಾಗಿ ಕೆಲಸ ಮಾಡಿರತಕ್ಕಂಥ ನೀವು ಕರ್ತವ್ಯಲೋಪವನ್ನು ಮಾಡಲು ಹೊರಟಿದ್ದೀರಾ?...

ಶ್ರೀ ಎಂ. ಎಸ್.ಪಾಟೀಲ್ : ನಾನು ಕೂಡ ನೋಟೀಸ್ ಕೊಟ್ಟಿದ್ದೇನೆ. ನನ್ನ ಬಗ್ಗೆ ಮಾತನಾಡಲು ನಿಮಗೆ ಅಧಿಕಾರವಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಮ್ಮ ನಾಡಿನಲ್ಲಿ ಈ ಅಪಮಾನದ ಸಂಗತಿಗಳು ನಡೆದರೂ ಕೂಡ ಅದನ್ನು ಸಹಿಸಿಕೊಂಡು ಕುಳಿತಿರುವ ಸಂದರ್ಭವಲ್ಲಿ ನಾನು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ನಿಮ್ಮ ಮಾನ್ಯ ಅಧ್ಯಕ್ಷಪೀಠಕ್ಕೆ ಅಗೌರವ ತರುವ ಕೆಲಸವನ್ನು ನಾನು ಮಾಡುವುದಿಲ್ಲ. ಆ ಬಗ್ಗೆ ತಮ್ಮ ಕ್ಷಮಾಪಣೆಯನ್ನು ಕೇಳುತ್ತೇನೆ. ತಮ್ಮ ಕೊಠಡಿಗೆ ಬಂದು, ನಿಲುವಳಿ ಸೂಚನೆ ಚರ್ಚೆ ಮಾಡುತ್ತೇವೆ ಎಂದು ಕೇಳಿದೆವು., ಮಾಡಿ ಎಂದು ಹೇಳಿದಿರಿ. ಆದರೆ ಸರ್ಕಾರ ಮುಂದೆ ಬಂದು ಇವೊತ್ತು ಇದಕ್ಕಿಂತ ಬೇರೆ ಮುಖ್ಯವಾದ ವಿಚಾರಗಳು ಇಲ್ಲ, ಪ್ರಶ್ನೋತ್ತರ ವೇಳೆಯನ್ನು ಸ್ಥಗಿತಗೊಳಿಸಿ, ಈ ಬಗ್ಗೆ ಚರ್ಚೆಯಾಗಲಿ, ಸರಕಾರ ಇದಕ್ಕೆ ಉತ್ತರ ಕೊಡಲು ಸಿದ್ಧವಿದೆ . ಇಂಥ ಅಮಾನುಷ ಕೃತ್ಯವನ್ನು ನಮ್ಮ ರಾಜ್ಯದಲ್ಲಿ ನಡೆಯಲು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳಬೇಕಾದಂಥ ನೀವು, ನಾನು ನನ್ನ ಕರ್ತವ್ಯವನ್ನು ಮಾಡಿರುವ ಸಂದರ್ಭದಲ್ಲಿ ನನ್ನ ಬಗ್ಗೆ ಟೀಕೆ ಮಾಡುತ್ತೀರಾ? ವಿರೋಧ ಪಕ್ಷದಲ್ಲಿ ನಾವುಗಳು 25-30 ಜನರು ಇರಬಹುದು. ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದೇ ಅಪರಾಧವಾಯಿತೇನು? ನಿನ್ನೆ ಅಂಗನವಾಡಿ ಕಾರ್ಯಕರ್ತರ ವಿಚಾರ ಬಂತು. ಯಾವ ಬಡ ಜನರು ತಮ್ಮ 20-25 ವರ್ಷ ವಯಸ್ಸಿನ ಅವಧಿಯಲ್ಲಿ ಹೊಟ್ಟೆಪಾಡಿಗೋಸ್ಕರ ದುಡಿದು ಗೌರವದಿಂದ ಬದುಕಲು ವ್ಯವಸ್ಥೆ ಮಾಡಿಕೊಡದ ನೀವು ಅವರ ರಕ್ಷಣೆ ಮಾಡುವುದಿಲ್ಲವೇ? ಅಧಿಕಾರಿಗಳು ಅವರನ್ನು ಭೋಗ ವಸ್ತುಗಳನ್ನಾಗಿ ಮಾಡಿಕೊಂಡಿದ್ದಾರೆ. ಇಂಥ ಘಟನೆಗಳು ಅನೇಕವು ನಡೆಯುತ್ತಾ ಇದೆ. ಪತ್ರಿಕೆಗಳಲ್ಲಿ ಬಂದಿವೆ, ಈ ರೀತಿಯಲ್ಲಿ ಎಷ್ಟು ಘಟನೆಗಳು ಆಗಿರಬಹುದು ? ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದ್ದು, ಅದನ್ನು ಸಹಿಸಿಕೊಂಡು ಅವರು ಕೆಲಸ ಮಾಡಬೇಕೆಂದು ಇಚ್ಛೆಪಡುತ್ತೀರಾ? ಆದ್ದರಿಂದ ಈ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು. ಆ ಎಸ್.ಪಿ.ಯೂ ಸೇರಿದಂತೆ ಯಾರ್ಯಾರು ಈ ಕೃತ್ಯದಲ್ಲಿ ತೊಡಗಿದ್ದಾರೆ ಅಂಥವರು ಇಂಥ ಜವಾಬ್ದಾರಿಯುತ ಸ್ಥಾನಗಳಲ್ಲಿ ಮುಂದುವರಿಯಲು ಹಕ್ಕಿಲ್ಲ. ಅವರನ್ನು ಸಸ್ಪೆಂಡ್ ಮಾಡಬೇಕು. ಈ ರೀತಿಯಲ್ಲಿ ದಿಟ್ಟವಾದ ಕ್ರಮವನ್ನು ನೀವು ತೆಗೆದುಕೊಳ್ಳಲಿಲ್ಲ. ಈ ಬಗ್ಗೆ ಯಾವ ಸರಕಾರವು

ಸ್ಟೇಟ್‌ಮೆಂಟ್ ಮಾಡಿಲ್ಲ, ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲವೋ, ಅಂಥವರು ಒಂದು ಕ್ಷಣವೂ ಕೂಡ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕನ್ನು ಪಡೆಯುವುದಿಲ್ಲ. ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದು ಇಲ್ಲಿಯ ಗೃಹಸಚಿವರಾದವರಿಗೆ ಗೊತ್ತಿಲ್ಲವೆ? ಇಲ್ಲಿ ಗೃಹಸಚಿವರು ಹೇಳುತ್ತಾ ಇದರ ಬಗ್ಗೆ ವರದಿಯನ್ನು ತರಿಸಿಕೊಳ್ಳುತ್ತಾ ಇದ್ದೇವೆ ಎಂದು ಹೇಳಿದರು. ಯಾವಾಗ ತರಿಸಿಕೊಳ್ಳುತ್ತೀರಿ? ನಾವು ಇಲ್ಲಿ ಪ್ರಸ್ತಾಪ ಮಾಡಿದ ಮೇಲೆ ತರಿಸಿಕೊಳ್ಳುತ್ತೀರಾ? ನಾವು ಇನ್ನೂ ಅನೇಕ ವಿಷಯಗಳನ್ನು ಹೇಳುವುದಿದೆ. ನೀವು ಸ್ಟೇಟ್‌ಮೆಂಟ್ ಮಾಡಿ. ನೀವು ಇದರ ಬಗ್ಗೆ ಈಗ ಕ್ರಿಮಿನಲ್ ಕೇಸ್ ಹಾಕಿದ್ದೀರಾ, ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಾ, ಪೋಲೀಸ್ ಅಧಿಕಾರಿಗಳಿಂದ ಇದರ ಬಗ್ಗೆ ವರದಿ ಬಂದಿದೆಯೇ? ಈ ಬಗ್ಗೆ ವಿವರಗಳನ್ನು ಕೊಟ್ಟಮೇಲೆ ನಾನು ಮುಂದಿನ ಕ್ರಮಗಳ ಬಗ್ಗೆ ಹೇಳುತ್ತೇನೆ. ಇದು ಸ್ತ್ರೀಯರ ಗೌರವದ ಪ್ರಶ್ನೆ. ಬಡತನದಲ್ಲಿರುವ ಹೆಣ್ಣುಮಕ್ಕಳ ಮಾನಹರಣ ಮಾಡಿ, ಆ ಹೆಣ್ಣುಮಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದು. ಸತ್ತಮೇಲೆ ಅವಳ ಹೆಣವನ್ನು ಮನೆಯವರ ವಶಕ್ಕೆ ಕೊಡುವುದರ ಬದಲು ತಾವೇ ಸುಟ್ಟು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರಲ್ಲ? ಇದಕ್ಕೆಲ್ಲಾ ಏನು ಸಾಕ್ಷಿಯಿದೆ? ಮೆಡಿಕಲ್ ಸರ್ಟಿಫಿಕೇಟ್ ಇದೆಯೇ? ಕೋರ್ಟ್‌ನಲ್ಲಿ ಈ ಕೇಸ್ ನಿಲ್ಲುತ್ತದೆಯೇ? ನಾನು ಸದಸ್ಯನಾಗಿ ಹೇಳುತ್ತೇನೆ, ಇದು ಯಾವುದೇ ಕೋರ್ಟ್‌ನಲ್ಲಿ ತೀರ್ಮಾನ ಆಗುವುದಿಲ್ಲ. ಈ ದುಷ್ಟ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಈಗ ತಾವು ಉಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಆದುದರಿಂದ ಈ ರಾಜ್ಯದ ನಾಲ್ಕೂವರೆ ಕೋಟಿ ಜನರ ರಕ್ಷಣೆ ಮಾಡುವ ನೈತಿಕ ಹಕ್ಕು ನಿಮ್ಮಲ್ಲಿ ಇಲ್ಲ. ಅದಕ್ಕಾಗಿ ನೀವು ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರೆಯುವ ಹಕ್ಕಿಲ್ಲ. ನನ್ನದು ಎರಡು ಬೇಡಿಕೆಗಳು. ಸಿಬಿಐ ತನಿಖೆ ಮಾಡಿಸಬೇಕು, ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು, ಸಂಬಂಧಪಟ್ಟ ಎಸ್. ಪಿ.ಯನ್ನು ಸಸ್ಪೆಂಡ್ ಮಾಡಬೇಕು, ಹಾಗೆ ಮಾಡಿಲ್ಲ ಅಂದರೆ ಬಹುಶಃ ನಮ್ಮದೇ ಆದ ಕಾರ್ಯಕ್ರಮವನ್ನು ನಾವು ಮಾಡಬೇಕಾಗುತ್ತದೆ. ರಾಜ್ಯದ ಉದ್ದಗಲಕ್ಕೂ ಈ ಹೆಣ್ಣುಮಕ್ಕಳಿಗೆ ಆಗುತ್ತಿರುವಂಥ ಅಪಮಾನದ ರಕ್ಷಣೆಯನ್ನು ಮಾಡಲಾರದ ಸರಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ, ಅದಕ್ಕೆ ಅವಕಾಶ ಮಾಡಿಕೊಡಬೇಡಿ. ಅದಕ್ಕಾಗಿ ನಿಮ್ಮ ಕರ್ತವ್ಯವನ್ನು ಮಾಡಿ ನಿಮ್ಮ ಧೈರ್ಯವನ್ನು ವ್ಯಕ್ತಪಡಿಸಬೇಕಾಗಿದೆ. ಈ ಬಗ್ಗೆ ನಿಮ್ಮಿಂದ ಹೇಳಿಕೆ ಬಾರದಿದ್ದರೆ ಒಂದು ಕ್ಷಣವೂ ನಿಮಗೆ ಅಧಿಕಾರದಲ್ಲಿ ಮುಂದುವರಿಯಲು ಹಕ್ಕಿಲ್ಲ ಎಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಿಗೆ ಕೇಳುತ್ತೇನೆ. ನಿಮಗೆ ಕಳಕಳಿ ಇದೆ, ಇಲ್ಲ ಎಂದು ನಾವು ಹೇಳುವುದಿಲ್ಲ. ಆದರೆ ಈಗ ಒಗ್ಗಟ್ಟಾಗೋಣ, ಇಲ್ಲಿ ಕಾಂಗ್ರೇಸ್, ಜನತಾದಳದ ಪ್ರಶ್ನೆ ಬರುವುದಿಲ್ಲ. ಒಬ್ಬ ಹೆಣ್ಣುಮಗಳ ಮರ್ಯಾದೆ ಪ್ರಶ್ನೆ. ಈ ಸಂದರ್ಭದಲ್ಲಿ ಯಡಿಯೂರಪ್ಪ ಹೇಳುತ್ತಿರುವುದು ಸತ್ಯ ಇದೆ ಎಂದು ಹೇಳಿದರೆ ನೀವೂ ಧೈರ್ಯಮಾಡಿ ಡಿಮ್ಯಾಂಡ್ ಮಾಡಿ, ನಮ್ಮ ಮುಖ್ಯಮಂತ್ರಿ ಇದುವರೆಗೆ ತೀರ್ಮಾನ ತೆಗೆದುಕೊಂಡಿರದೇ ಇದ್ದರೆ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯುವುದಕ್ಕೆ ಬಿಡುವುದಿಲ್ಲ, ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳುತ್ತೇವೆಂದು ನೀವು ಹೇಳುತ್ತೀರೇನು? ಇಲ್ಲ ಅಂದರೆ ಬಹುಶಃ ನಿಮಗೆ ಜನರ ಹಿತ ಮುಖ್ಯವಲ್ಲ, ನಿಮಗೆ ಕುರ್ಚಿ ಮುಖ್ಯ ನಿಮ್ಮ ಪಕ್ಷ ಮುಖ್ಯ ಎಂದು ಹೇಳಬೇಕಾಗುತ್ತದೆ. ಈಗ ಈ ಎಚ್ಚರಿಕೆ ಕೊಟ್ಟು, ಉತ್ತರ ಕೊಟ್ಟ ಮೇಲೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆ.

* ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಶರಣಮ್ಮ ಎನ್ನುವವರ

ಮೇಲೆ ನಡೆದಿರುವ ಅತ್ಯಾಚಾರ ಇಡೀ ದೇಶದ ಹೆಣ್ಣು ಕುಲಕ್ಕೇ ಅಪಮಾನ, ಇಡೀ ನಾಡಿನ ಜನತೆಗೆ ಅಪಮಾನ, ಪ್ರಜಾತಂತ್ರವಾದಿಗಳಿಗೆ ಅಪಮಾನ. ಇಂತಹ ಒಂದು ಬರ್ಬರ ಅಮಾನುಷ ಕೃತ್ಯ ಇತ್ತೀಚಿನ ದಿನಗಳಲ್ಲಿ ನಡೆದಿರಲಿಲ್ಲ.ನಾಲ್ಕು ಜನ ಅಧಿಕಾರಿಗಳು ಒಬ್ಬ ಹೆಣ್ಣುಮಗಳ ಮೇಲೆ ಪಾನಮತ್ತರಾಗಿ ಅತ್ಯಾಚಾರವೆಸಗಿ ಆಕೆ ಸತ್ತದ್ದನ್ನು ಮುಚ್ಚಿಹಾಕುವಂಥ ಒಂದು ಹೀನಕೃತ್ಯಕ್ಕೆ ಕೈಹಾಕಿ ಇದು ಯಾರಿಗೂ ಪರಿಚಯವಾಗದಿರಲಿ ಎಂದು ಜಗತ್ತಿನ ಕಣ್ಣು ಮುಚ್ಚಿ ಹಾಕುವುದಕ್ಕಾಗಿ ಅವರನ್ನು ಸುಟ್ಟುಹಾಕಿದ್ದಾರೆ. ಇದರ ಹಿಂದಿರುವ ಪಿತೂರಿಯಲ್ಲಿ ಯಾರ್ಯಾರು, ಯಾವ ಅಧಿಕಾರಿಗಳಿದ್ದಾರೆ? ಅವರೆಷ್ಟೇ ಉನ್ನತ ಅಧಿಕಾರಿಗಳಿರಲಿ, ಕೆಲವು ನಮ್ಮ ಸ್ನೇಹಿತರು ಹೇಳಿದರು., ಅವರನ್ನು ಸಸ್ಪೆಂಡ್ ಮಾಡಿ ಎಂದು. ಸಸ್ಪೆಂಡ್ ಅಲ್ಲ ಕೆಲಸದಿಂದಲೇ ವಜಾ ಮಾಡಬೇಕು. ಅವರ ಖಾಕಿ ಬಟ್ಟೆ ಕಳೆದು ಸೇಷನ್‌ನಲ್ಲಿಟ್ಟು ಯಾವ ಸ್ಟೇಶನ್‌ನಲ್ಲಿ ಕಂಬಿ ಎಣಿಸುವ ಲಾಕಪ್ಪಿನಲ್ಲಿ ಅವರನ್ನು ಇಡಬೇಕೆಂಬುದು ನನ್ನ ಸಂಪೂರ್ಣವಾದ ಒತ್ತಾಯ. ತಮಗೂ ಗೊತ್ತು , 1967ರ ಹಿಂದೆ ಇದೇ ಸದನದಲ್ಲಿ ಪ್ರಸ್ತಾಪವಾಗಿದೆ. ನಮ್ಮ ಬೆಂಗಳೂರು ಸಿಟಿ ವೈಯಾಳಿಕಾವಲ್ ಪೋಲೀಸ್ ಸ್ಟೇಶನ್‌ನಲ್ಲಿ ಮುನಿಯಮ್ಮ ಎಂಬ ಹೆಣ್ಣುಮಗಳನ್ನು ಅತ್ಯಾಚಾರ ಮಾಡಿ ಮರ್ಮಾಂಗದ ಮೇಲೆ ಲಾಠಿ ಪ್ರಯೋಗ ಮಾಡಿ ಆ ಹೆಣ್ಣು ಮಗಳು ಸತ್ತಳು. ತದನಂತರ ಮಧುಗಿರಿಯ ಪ್ರಕರಣ ನಡೆಯಿತು. ಪೋಲೀಸರು ಹೆಣ್ಣುಮಕ್ಕಳ ಮಾನಭಂಗ ಮಾಡಿದರು, ಸೀರೆಯನ್ನು ಎಳೆದರು, ಅತ್ಯಂತ ಘೋರ ಕೃತ್ಯವನ್ನು ಎಸಗಿದರು. ಇದೇ ಸದನದಲ್ಲಿದ್ದ ಅಂದು ಮುಖ್ಯಮಂತ್ರಿಯಾಗಿದ್ದ ಶ್ರೀ ನಿಜಲಿಂಗಪ್ಪನವರು ಕುಳಿತಿದ್ದರು. ಪಕ್ಕದಲ್ಲಿ ಗೃಹಮಂತ್ರಿಯಾಗಿ ರಾಮರಾಯರು ಕುಳಿತಿದ್ದರು. ಈ ಸದನದಲ್ಲಿದ್ದ ಶ್ರೀ ಗೋಪಾಲಗೌಡರು ಒಂದು ಮಾತು ಕೇಳಿದರು.ಈ ಪ್ರಕರಣ ನಿಮ್ಮ ಮನೆಯ ಹೆಣ್ಣುಮಗಳ ಮೇಲೆ ನಡೆದಿದ್ದರೆ ಏನು ಮಾಡುತ್ತಿದ್ದಿರಿ, ನಿಮ್ಮ ಮಾನ ಏನಾಗುತ್ತಿತ್ತು ಎಂದು ಕೇಳಿದರು. ಗೋಪಾಲಗೌಡರ ಮಾತಿಗೆ ಬೆಲೆ ಕೊಟ್ಟು ನನ್ನ ಕರ್ತವ್ಯ ಚ್ಯುತಿಯಾಗಿದೆ ಎಂದು ಈ ಸದನದಲ್ಲೇ ರಾಜೀನಾಮೆ ನೀಡಿದರು. ಈ ಸದನ ಅಂತಹ ಚರಿತ್ರೆ ಸಾರುತ್ತದೆ. ಶ್ರೀಮಾನ್ ಕಿತ್ತೂರ್‌ನವರು ನಮಗೆ ಗೊತ್ತು, ಸುಮಿತ್ರದೇಸಾಯಿ ಎಂಬ ಒಬ್ಬ ಹೆಣ್ಣುಮಗಳು ಕಿತ್ತೂರರನ್ನು ನೋಡಲು ಹೋದರು ಎಂಬ ಒಂದು ಪ್ರಕರಣ ಬೃಹದಾಕಾರವಾಗಿ ಬೆಳೆದಾಗ ತಾತ್ವಿಕ ದೃಷ್ಟಿಯಿಂದ ನಾನು ಗೃಹಮಂತ್ರಿಯಾಗಿದ್ದೇನೆ. ನನ್ನ ಮೇಲೆ ಹಗರಣ ಆರೋಪ ಬಂದಿದೆ ಎಂದು ಆ ಕ್ಷಣದಲ್ಲೇ ರಾಜೀನಾಮೆ ಕೊಟ್ಟರು. ಇವತ್ತು ಈ ಪ್ರಕರಣವನ್ನೂ ನಾವೆಲ್ಲರೂ ವರ್ಷಾತೀತವಾಗಿ ವಿಚಾರಮಾಡಬೇಕು. ನಮ್ಮ ಮನೆಯ ಹೆಂಗಸರ ಮೇಲೆ ಈ ಪ್ರಕರಣ ನಡೆದಿದ್ದರೆ ನಮ್ಮ ಹೃದಯ ಎಲ್ಲಿಗೆ ಹೋಗುತ್ತಿತ್ತು? ನಾವು ನಿಜವಾಗಿಯೂ ಈ ಪ್ರಕರಣವನ್ನು ಯಾವುದೋ ಒಂದು ಪರಿಶಿಷ್ಟ ವರ್ಗದ ಹೆಣ್ಣುಮಗಳು, ಯಾವುದೋ ಒಂದು ದೇವಯಾನಿಯ ಮಗಳು, ಯಾವುದೋ ಒಂದು ಕೆಲಸಕ್ಕೆ ಬಾರದ ಅಂಗನವಾಡಿ ಕಾರ್ಯಕರ್ತೆಯಾಗಿ 250 ರೂಪಾಯಿಯನ್ನು ಸಂಬಳವಾಗಿ ಪಡೆಯತಕ್ಕಂಥ ಹೆಣ್ಣುಮಗಳು, ಅವಳ ಮೇಲೆ 4 ಜನ ಅತ್ಯಾಚಾರವನ್ನು ನಡೆಸಿದ್ದಾರೆಂದು ಹೇಳಿದರೆ ಇದು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳುವಂತಹ ಪ್ರಶ್ನೆ ಅಲ್ಲವೇ ಅಲ್ಲ. ಈ ಸದನ ದೇಶಕ್ಕೆ, ರಾಜ್ಯಕ್ಕೆ ಆದರ್ಶವಾದಂತಹ ತೀರ್ಪನ್ನು ಕೊಡಬೇಕಾಗಿದೆ. ನಮ್ಮನ್ನು ಮತ್ತೆ ಜನರು ಎದುರು ನೋಡುತ್ತಿದ್ದಾರೆ, ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತಿದ್ದೇನೆ. ಈ ಪ್ರಕರಣ ನಡೆದು 23 ದಿವಸ ಆಗಿದೆ. ಈ ಕ್ಷಣದವರೆಗೂ ಸರ್ಕಾರಕ್ಕೆ ಇದರ ಬಗ್ಗೆ ಏನಾದರೂ ವರದಿ ಇದೆಯೇ? ಪ್ರಕರಣ ನಡೆದು 23 ದಿವಸಗಳಿಂದ ಇಲ್ಲಿಯವರೆಗೆ ವರದಿ ಇಲ್ಲ ಎಂದರೆ ಇಲ್ಲಿ ಸರ್ಕಾರದ ಆಡಳಿತ ಇದೆಯೇ? ನನ್ನ ದೃಷ್ಟಿಯಲ್ಲಿ ಅವರು ಹೇಳಬೇಕಾಗಿತ್ತು. ಸರ್ಕಾರ ಅದರಲ್ಲಿಯೂ ಈ ಶಾಸನ ಸಭೆಯು ನಡೆಯುವಾಗ ಶಾಸನ ಸಭೆಯ ಮುಂದೆ ಇದಕ್ಕೆ ಏನೇನು ಮಾಡಬೇಕೆಂದು ಇದ್ದೇವೆ ಎಂದು ಈ

ಸದನವನ್ನು ಅವರು ನಂಬಿಕೆಗೆ ತೆಗೆದುಕೊಂಡು ಸದನದ ಮುಂದೆ ಹೇಳಿಕೆಯನ್ನು ಈಗಾಗಲೇ ಇಡಬೇಕಾಗಿತ್ತು. ಇದನ್ನು ಒಂದು ರೀತಿಯಲ್ಲಿ ಮುಚ್ಚಿಹಾಕತಕ್ಕಂಥ ತಂತ್ರ ನಡೆದಿದೆ. ಈ ಸದನಕ್ಕೂ ಮೋಸ, ಸರ್ಕಾರವನ್ನು ಸಹ ಯಾವುದೋ ಒಂದು ಯಂತ್ರ ಶಕ್ತಿ, ಕಾಣದ ಕೈ, ಇದನ್ನು ಮುಚ್ಚಿಹಾಕುವಂತಹ ವ್ಯವಸ್ಥೆಗೆ ಹೋಗಿದೆ. ಇದನ್ನು ಅಷ್ಟೊಂದು ಸುಲಭವಾಗಿ ಬಿಡತಕ್ಕಂಥದ್ದು ಅಲ್ಲ. ಮಾನ, ಗೌರವ ಮರ್ಯಾದೆ ಮತ್ತು ಆತ್ಮಸ್ಥೈರ್ಯ ಈ ಸರ್ಕಾರಕ್ಕೆ ಇರುವುದಾದರೆ ಇನ್ನು ಹೇಳಿಕೆ ಗೀಳಿಕೆ ಕೊಟ್ಟು ನಾವು ಅಲ್ಲಿ ಯಾರೋ ಒಬ್ಬ ಕಾನ್‌ಸ್ಟೇಬಲನ್ನು ಸಸ್ಪೆಂಡ್ ಮಾಡಿದ್ದೇವೆ, ಅವನನ್ನು ವರ್ಗ ಮಾಡಿದ್ದೇನೆ ಎನ್ನತಕ್ಕ ಸೋಗನ್ನು ಈ ಸದನದಲ್ಲಿ ಹೇಳದೆ, ಗೌರವವಾಗಿ ಇಡೀ ಸರ್ಕಾರ ರಾಜೀನಾಮೆಯನ್ನು ಕೊಟ್ಟಿದೆ ಎಂದು ಹೇಳತಕ್ಕದ್ದು ಒಂದೇ ಮರ್ಯಾದೆಯ ಪ್ರಶ್ನೆ. ಈ ಸರ್ಕಾರ ಉಳಿಯಬೇಕೆಂದು ಬಹಿರಂಗವಾಗಿ ಹೇಳುವವರು, ಈ ಸರ್ಕಾರ ಇರಬೇಕೆಂದು ಹೇಳಿ ನಾವು ನೂರಕ್ಕೆ ನೂರರಷ್ಟು ಪ್ರತಿಪಾದನೆಯನ್ನು ಮಾಡಿದವರು. ಈ ಸರ್ಕಾರವನ್ನು ಕೆಳಗಿಳಿಸತಕ್ಕಂಥ ವ್ಯವಸ್ಥೆ ಏನು ನಡೆಯುತ್ತಿದೆ ಅದಕ್ಕೆ ನನ್ನ ಬೆಂಬಲ ಇಲ್ಲ. ಇವತ್ತು ನಡೆದಿರತಕ್ಕಂಥ ಈ ಬರ್ಬರ ಕೃತ್ಯ ಇದು ಬಹಳ ಅತ್ಯಂತ ಹೀನಕೃತ್ಯ. ಇದು ಇಡೀ ದೇಶದ ಸಮಗ್ರ ಜನತೆಗೆ ಮಾಡಿರತಕ್ಕಂಥ ಒಂದು ಅಪಮಾನ. ಪರಿಶಿಷ್ಟ ವರ್ಗದವರಿಗೆ ಇವತ್ತು ರಕ್ಷಣೆ ಎಲ್ಲಿದೆ? ಈ ನಾಲ್ಕು ಜನ ಅಧಿಕಾರಿಗಳು ಏನಿದ್ದಾರೆ ಅವರು ಮನುಷ್ಯರೋ, ಮೃಗಗಳೋ, ದೆವ್ವಗಳೋ, ಭೂತಗಳೋ. ಈ ಅನೀತಿವಂತ ಜನ ಒಬ್ಬಳು ಗರ್ಭಿಣಿಯ ಹೆಣ್ಣುಮಗಳ ಮೇಲೆ ಇಂತಹ ಕೃತ್ಯವನ್ನು ನಡೆಸಿದ್ದಾರೆ ಮತ್ತು ಇದರ ಹಿಂದೆ ಏನು ಜಾಲ ಇದೆ, ಇದನ್ನು ಸಮಗ್ರವಾಗಿ ಪತ್ತೆಹಚ್ಚಬೇಕು. ಅವರನ್ನು ವಜಾ ಮಾಡಿ ಅವರನ್ನು ಕೈಕೋಳ ಹಾಕಿ 20 ಜಿಲ್ಲೆಗಳ ಪ್ರಮುಖ ಪಟ್ಟಣಗಳಲ್ಲಿ ಮೆರವಣಿಗೆ ಮಾಡಬೇಕು. ಇದಕ್ಕೆ ಯಾರು ಬೆಂಬಲವನ್ನು ಕೊಟ್ಟಿದ್ದಾರೆ ,ಇದರ ಹಿಂದೆ ಯಾರಿದ್ದಾರೆ ಎನ್ನತಕ್ಕದ್ದನ್ನು ನೋಡಬೇಕು. ಇದು ಸಿ.ಬಿ.ಐ. ಗೆ ಒಪ್ಪಿಸತಕ್ಕಂಥದ್ದು ಅಲ್ಲ, ಸಿ.ಓ.ಡಿ.ಗೆ ವಹಿಸತಕ್ಕಂಥದ್ದಲ್ಲ. ಸಮಗ್ರ ನ್ಯಾಯಾಂಗ ತನಿಖೆಯಾಗಬೇಕು. ಹೈಕೋರ್ಟಿನ ನ್ಯಾಯಾಧೀಶರಿಂದ ಈ ಕೂಡಲೇ ನ್ಯಾಯಾಂಗ ತನಿಖೆ ನಡೆಸಬೇಕು. ತಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಈ ಸದನದ ಸಮಿತಿಯನ್ನು ತಾವು ಈ ಕೂಡಲೇ ರಚನೆ ಮಾಡಬೇಕು. ಸದನದ ಸಮಿತಿಯಲ್ಲಿ ನಾಳೆ ದಿವಸವೇ ಬೇಕಾದರೆ ನಾವು ಎಲ್ಲಾ ಹೋಗುವುದಕ್ಕೆ ತಯಾರಿದ್ದೇವೆ. ಈ ಸದನದ ಸಮಿತಿಯನ್ನು ತಾವು ಕಳುಹಿಸಿ ಕೊಡಿ. ನಮ್ಮ ಕಡೆ ಆ ಕಡೆ ಎಲ್ಲರನ್ನೂ ಪಕ್ಷಾತೀತವಾಗಿ ತಾವು ಸೇರಿಸಿ, ನಾಳೆ ಹೋಗಿ ಅಲ್ಲಿಂದ ನಾವು ವರದಿಯನ್ನು ತಂದು ಕೊಡುತ್ತೇವೆ. ದಯಮಾಡಿ ತಮ್ಮನ್ನು ಕೈಮುಗಿದು ಪ್ರಾರ್ಥನೆ ಮಾಡಿ ಕೊಳ್ಳುತ್ತಿದ್ದೇನೆ. ಈ ಸದನದ ಸಮಿತಿಗೆ ತಾವು ಒಪ್ಪಬೇಕು. ನಾವು ತಮ್ಮ ಪೀಠಕ್ಕೆ ಅಗೌರವ ಮಾಡುವುದಿಲ್ಲ. ಈ ಪರಿಸ್ಥಿತಿ ನಮ್ಮ ಹೃದಯವನ್ನು ಛಿದ್ರ ಛಿದ್ರ ಮಾಡಿದೆ, ಮನಸ್ಸಿಗೆ ನೋವನ್ನು ಉಂಟುಮಾಡಿದೆ. ಪ್ರಾಮಾಣಿಕವಾಗಿ ನಾನು ಇವತ್ತು ಅದನ್ನು ಮತ್ತೆ ಮತ್ತೆ ಹೇಳುತ್ತಿದ್ದೇನೆ. ಇವತ್ತು ನಾವು ರಾಜಕಾರಣದಲ್ಲಿ ಶಾಸಕರುಗಳಾಗಿ, ಮಂತ್ರಿಗಳಾಗಿ, ಬೇರೆ ರಾಜಕಾರಣಿಗಳಾಗಿ, ಅಧಿಕಾರಿಗಳಾಗಿ ಇದ್ದೇವೆ. ಒಳ್ಳೆಯ ಮೃಗಗಳ ರೀತಿಯಲ್ಲಿದ್ದೇವೆ. ನಮ್ಮ ಮನೆಯ ಹೆಂಗಸರ ಮೇಲೆ ಕೃತ್ಯ ಆಗಿದ್ದರೆ ನಮ್ಮ ಮನಸ್ಸು ಏನಾಗುತ್ತಿತ್ತು ಎನ್ನುವ ಒಂದು ಚಿಂತೆ ನಿಮಗೆ ಇಲ್ಲ ಎನ್ನುವುದಾದರೆ ನೀವು ಮನುಷ್ಯರಾಗಿ ರಾಜಕಾರಣಿಗಳಾಗಿ, ಅಧಿಕಾರಿಗಳಾಗಿರುವುದಕ್ಕಿಂತ ನಾಯಿಗಳಾಗತಕ್ಕದ್ದು ಒಳ್ಳೆಯದು ಎನ್ನತಕ್ಕ ಮಾತನ್ನು ಅತ್ಯಂತ ನೋವಿನಿಂದ ಇವತ್ತು ಹೇಳುತ್ತಿದ್ದೇನೆ. ಇದು ಯಾರಿಗೆ ಬೇಕಾಗಿದೆ. ಒಬ್ಬ ಹೆಣ್ಣುಮಗಳ ಮೇಲೆ ಇಷ್ಟೊಂದು ಕೃತ್ಯ ನಡೆದಿರುವಾಗ 23 ದಿನಗಳಿಂದ ಯಾವುದೂ ಯೋಚನೆ ಇಲ್ಲದೆ ಕುಳಿತಿರತಕ್ಕಂಥ ಈ ನಾಯಿ ಸರ್ಕಾರ ಎಂದು ಕೆಟ್ಟ ಮಾತಿನಿಂದ ಹೇಳಬೇಕಾಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾಯಿ ಎನ್ನತಕ್ಕಂಥದ್ದು ಪ್ರಾಮಾಣಿಕ ಪ್ರಾಣಿ. ಅದರ ಹೆಸರನ್ನು ಏತಕ್ಕೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ನಾಲಗೆಯನ್ನು ಬಿಗಿ ಹಿಡಿದು ಮಾತನಾಡಬೇಕು. ತಾವು ಹೇಳಿರತಕ್ಕಂಥ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮತ್ತೊಮ್ಮೆ ಈ ಸರ್ಕಾರ ನಾಯಿ ಸರ್ಕಾರ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಶಿವಕುಮಾರ್‌ರವರು ಏತಕ್ಕೆ ಇದನ್ನು ವಿರೋಧ ಮಾಡಿದರು ಎಂದು ಹೇಳಿದರೆ ನಮ್ಮ ಸರ್ಕಾರವನ್ನು ನಾಯಿಗೆ ಹೋಲಿಸಿ ನಾಯಿಗೆ ಅಪಮಾನ ಮಾಡಬೇಡಿ. ಅದಕ್ಕಿಂತಲೂ ಹೋಪ್‌ಲೆಸ್ ಸರ್ಕಾರ ಎಂದು ಹೇಳಬಹುದು. ನೀವುಗಳು ಏತಕ್ಕೆ ಈ ರೀತಿ ಕೂಗಾಡುತ್ತೀರಿ? ಮಾನ ಮರ್ಯಾದೆ ಇರತಕ್ಕಂಥ ಸರ್ಕಾರವಾದರೆ ಯಾರಾದರೂ ಸೀನಿಯರ್ ಮಂತ್ರಿಗಳು ಕುಳಿತುಕೊಂಡು ಜವಾಬ್ದಾರಿ ತೆಗೆದುಕೊಂಡು ಇದಕ್ಕೆ ಉತ್ತರ ಕೊಡತಕ್ಕಂಥ ಯೋಗ್ಯತೆ ಇದೆಯೇ? ಇದೆಂಥ ಸರ್ಕಾರ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾಯಿ ನಿಷ್ಠೆ ಇರತಕ್ಕಂಥ ಪ್ರಾಣಿ. ಅದಕ್ಕೆ ಅಪಮಾನವಾಗಬಾರದು. ದಯಮಾಡಿ ಮಾನ್ಯ ವಾಟಾಳ್ ನಾಗರಾಜ್‌ರವರು ಆ ಶಬ್ದವನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ನಿಜವಾಗಿಯೂ ಆವೇಶದ ಭರದಲ್ಲಿ ಒಳ್ಳೆಯ ಪ್ರಾಣಿಯ ಹೆಸರನ್ನು ಹೇಳಿಬಿಟ್ಟೆ .

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ನೀವು ಕೂಡ ಅದೇ ಪ್ರಾಣಿಯೇ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರು ವಿಷಯವನ್ನು ಪ್ರಸ್ತಾಪಮಾಡುವಾಗ ಬಹಳ ಗಂಭೀರವಾಗಿ ನಾವು ಕೇಳುತ್ತಿದ್ದೆವು. ಯಾರಿಗೂ ಈ ವಿಷಯವನ್ನು ಮುಚ್ಚಿ ಹಾಕಬೇಕು ಎನ್ನುವುದಾಗಲಿ ಅಥವಾ ಇದನ್ನು ಮರೆಮಾಚಬೇಕು ಎನ್ನುವುದಾಗಲಿ ಆ

ರೀತಿ ಇಲ್ಲ. ಇದರ ಬಗ್ಗೆ ಕಳಕಳಿ ಇದೆ. ಆದರೆ ನಾಯಿ ಸರ್ಕಾರ ಎಂಬ ಭಾಷೆ ಬಳಸಿ ಹೇಳಿದ್ದದು ಒಳ್ಳೆಯ ಮಾತಲ್ಲ. ಏಕೆಂದರೆ ಅವರು ಅದರ ಮಾತಿನಿಂದ ಎಷ್ಟು ಹರಿತವಾಗಿ ನಾಜೂಕಾಗಿ ಹೇಳಬೇಕೋ ಅದನ್ನೆಲ್ಲಾ ಹೇಳಲಿ. ಆದರೆ ನಾಯಿ ಸರ್ಕಾರ ಎಂದು ಹೇಳಿದ್ದರಿಂದ ಅದು ತೂಕ ಬರುವುದಿಲ್ಲ. ಜೊತೆಗೆ ಏನೆಲ್ಲಾ ಭಾಷೆಯನ್ನು ಬಳಸಿ ಹೇಳಿದ್ದೀರಲ್ಲಾ ಅದೆಲ್ಲಾ ಕೂಡ ತೊಳೆದುಹೋಯಿತು. ವಿಷಯ ಸಮರ್ಥನೆ ಮಾಡುವಾಗ ಬಹಳ ಅಂತಸ್ತು ಗೌರವ ಇಟ್ಟುಕೊಂಡು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಕಡೆಯಿಂದಲೂ ಒಂದು ಅಭಿಪ್ರಾಯ ಬಂದಿದೆ ನಾನು ಆವೇಶ ಭರದಲ್ಲಿ ಒಂದು ಕೆಟ್ಟ ಪ್ರಾಣಿಯ ಹೆಸರನ್ನು ಹೇಳುವ ಬದಲಿಗೆ ನಾಯಿ ಎನ್ನತಕ್ಕಂಥ ಒಳ್ಳೆಯ ಪ್ರಾಣಿಯ ಹೆಸರನ್ನು ಹೇಳಿಬಿಟ್ಟೆ. ಆದ್ದರಿಂದ ಆ ಒಳ್ಳೆಯ ಪ್ರಾಣಿಗಿಂತಲೂ ಇವರು ನಾಲಾಯಕ್ಕು ಎಂದು ಹೇಳಿ ಆ ಪ್ರಾಣಿಯ ಹೆಸರನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇನೆ.

(ಗೊಂದಲ)

Dr. N. B. NANJAPPA : I take objection. Don't talk like that.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ನಾಯಿ ಹೆಸರು ಹೇಳುವುದು ಬೇಡ ಎಂದು ಹೇಳುತ್ತೀರಿ. ವಾಪಸ್ ತೆಗೆದುಕೊಂಡರೆ ವಾಪಸ್ ತೆಗೆದುಕೊಳ್ಳುವುದೂ ಬೇಡ ಎಂದು ಹೇಳುತ್ತೀರಿ.

(ಗೊಂದಲ)

ಡಾ : ಎನ್. ಬಿ. ನಂಜಪ್ಪ : ಈಗ ವಾಟಾಳ್ ನಾಗರಾಜ್ ಅವರು ಒಪ್ಪಿಕೊಳ್ಳುತ್ತಾರೆಯೇ?

(ಗೊಂದಲ)

ಅಧ್ಯಕ್ಷರು :- ಡಾಕ್ಟರೇ ಕುಳಿತುಕೊಳ್ಳಿ.

ಡಾ : ಎನ್. ಬಿ. ನಂಜಪ್ಪ :- ನಾಯಿ ಸರ್ಕಾರ ಎಂದು ಹೇಳಿಸಿಕೊಳ್ಳುವುದಕ್ಕೆ ನಮಗೆ ಏನು ತೀಟೆ ಇದೆಯೇ? ಅವರು ನಾಯಿಗಳು , ಕತ್ತೆಗಳು ಎಂದು ಹೇಳುವುದಕ್ಕೆ ನಾವು ಹುಚ್ಚು ನಾಯಿ ಎಂದರೆ ಒಪ್ಪಿಕೊಳ್ಳುತ್ತಾರೆಯೇ ಅವರು. ಹುಚ್ಚು ನಾಯಿ ಎಲ್ಲರನ್ನೂ ಕಡಿಯುವುದಕ್ಕೆ ಬರುತ್ತದೆ.

MR. SPEAKER : I am not allowing you. ವಾಟಾಳ್ ನಾಗರಾಜ್ ಕುಳಿತುಕೊಳ್ಳಿ.

ಶ್ರೀ ಬಸವರಾಜರಾಯರೆಡ್ಡಿ : ಈಗ ನಿಲುವಳಿ ಸೂಚನೆ ಬಗ್ಗೆ ವಿರೋಧಪಕ್ಷದ ನಾಯಕರು, ಉಪನಾಯಕರೂ ಸಹ ಹೇಳಿದ್ದಾರೆ...

ಶ್ರೀ ವಾಟಾಳ್ ನಾಗರಾಜ್ : ನಮ್ಮ ಸ್ನೇಹಿತರು ನಾಲಿಗೆಯನ್ನು ಬಹಳ ಉದ್ದುದವಾಗಿ ಚಾಚುತ್ತಿದ್ದಾರೆ. ಕೆಟ್ಟದಾಗಿ ಮಾತನಾಡುತ್ತಿದ್ದಾರೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

Dr. N.B. NANJAPPA :- It is a rabid dog. It is a rabid dog. Whoever has called dog, are they not rabid dogs? They cannot talk in the Assembly like that. They cannot insult the government like that. They cannot insult. I don't want to take such things. Why should we?

(INTERRUPTIONS)

ಶ್ರೀ ಬಸವರಾಜರಾಯರೆಡ್ಡಿ : ರಾಯಚೂರು ಜಿಲ್ಲೆಯ ಕುಷ್ಟಗಿಯಲ್ಲಿ ಫೆಬ್ರವರಿ 10ನೇ ತಾರೀಖಿನ ದಿವಸ ರಾತ್ರಿ 11.30 ಗಂಟೆಗೆ ನಡೆದ ಪ್ರಕರಣ ನಾಗರೀಕರೆಂದು ಕರೆಸಿಕೊಳ್ಳುವಂಥ ಪ್ರಕರಣ ನಾವೆಲ್ಲರೂ ತಲೆ ತಗ್ಗಿಸುವಂತೆ ಆಗಿದೆ.

Dr. N. B. NANJAPPA : Where is the necessity ? Why should we stop ? Why should he call us dogs?

(INTERRUPTIONS)

ಶ್ರೀ ಜೆ. ಪಿ. ಮಾಧುಸ್ವಾಮಿ :- ನಂಜಪ್ಪನವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಇವರೊಬ್ಬರಿಗೇನಾ ದೊಡ್ಡ ಗಂಟಲು ಇರುವುದು?..

(INTERRUPTIONS)

ಅಧ್ಯಕ್ಷರು :- ಡಾಕ್ಟರೇ ಕುಳಿತುಕೊಳ್ಳಿ..

(ಗೊಂದಲ)

SRI AZEEZ SAIT :- Speaker Sir, this is a very serious matter. I am here. Please ask my two friends here. When Mr. Vatal Nagaraj started his speech , I said I am wondered as to how

Mr. Vatal Nagaraj has become such a good parliamentarian to-day. It is at the starting of his speech. In the end he was too radical and the word he used " is very derogatory and you want all of us to sit quiet, whereas you have not taken that gentleman to task or asked him to withdraw or apologise. That sort of the word has to be removed from the debate. You want us to sit quiet. Rightly my friend said that if he feels that this government is " ನಾಯಿ ಸರ್ಕಾರ ." he said " ಹುಚ್ಚು ನಾಯಿ " What is that? I am surprised a Senior politician like Mr. Jallappa, Who was once a Home Minister, comes to the rescue of such a derogatory word used by Mr. Vatal Nagaraj.

(INTERRUPTIONS)

SRI R. L. JALAPPA : He is the senior Ex-Minister who is supporting that government. He must feel sorry for that. He must be ashamed of it. If he is really against it, he must resign and get out of this House.

SRI AZEEZ SAIT : I Will tell you.

(INTERRUPTIONS)

SRI R. L. JALAPPA : I will prove how, I am justified. Give me one opportunity to prove that I am justifying.

(INTERRUPTIONS)

SRI AZEEZ SAIT : Mr. Jallappa......

SRI R. L. JALAPPA : I know my responsibility. I know my limitations also. You need not teach me. I am requesting the Hon.Speaker to give me two minutes. I will justify whatever I have said.

SRI AZEEZ SAIT : You have proved your ignorance. You have proved your ignorance. If you can prove " ನಾಯಿ ಸರ್ಕಾರ''you

are part and parcel of it. You are also part and parcel of it.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

SRI R. L. JALAPPA : You are the part and parcel. We are not part and parcel of it. We are not. That shows your ignorance.

(INTERRUPTIONS)

SRI AZEEZ SAIT :- I have not yielded.

ಶ್ರೀ ಬಸವರಾಜರಾಯರೆಡ್ಡಿ :- ಕುಷ್ಟಗಿಯಲ್ಲಿ ನಡೆದಿರುವ ಬರ್ಬರ ಕೃತ್ಯದ ಬಗ್ಗೆ ಈಗಾಗಲೇ ನಮ್ಮ ಮಾನ್ಯ ನಾಯಕರು ಹಾಗೂ ಉಪನಾಯಕರು ತಿಳಿಸಿದ್ದಾರೆ.

(INTERRUPTIONS)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ದಿನ ಮುಂದಿನ ಪೀಠದಲ್ಲಿ ಒಬ್ಬ ಜವಾಬ್ದಾರಿ ಸಚಿವರೂ ಕುಳಿತಿಲ್ಲ. ಈ ಒಂದು ವಿಷಯದ ಮಹತ್ವವನ್ನು ಹಾಳು ಮಾಡುವುದಕ್ಕೋಸ್ಕರ ಅಜೀಜ್ ಸೇಠ್‌ರವರು ಸದನದ ಗಮನವನ್ನು ಬೇರೆ ಕಡೆ ಸೆಳೆಯುತ್ತಿದ್ದಾರೆ. ಇದು ಸರಿಯಿಲ್ಲ. ಇದು ಜವಾಬ್ದಾರಿ ಸರ್ಕಾರವೇ? ಮೊದಲನೆಯ ಸಾಲಿನಲ್ಲಿ ಕುಳಿತುಕೊಳ್ಳುವಂಥ ಸಚಿವರುಗಳನ್ನು ಸಚಿವ ಸಂಪುಟದಿಂದ ಕಿತ್ತು ಹಾಕಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಬೇಕು. ಈಗ ಪರಸ್ಪರ ತಾವೇ ಸಂಭಾಷಣೆಗಳನ್ನು ನಡೆಸಿದರೆ, ಸದನದ ಕಲಾಪ ನಡೆಸುವುದು ಕಷ್ಟವಾಗುತ್ತದೆ. ಆದುದರಿಂದ, ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಬೇಕು.

* ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಹಿರಿಯ ಸದಸ್ಯರಾದಂಥ ಸಿಂಧ್ಯರವರು ಮತ್ತು ಇನ್ನಿತರ ಅನೇಕ ಸ್ನೇಹಿತರು ಈ ಕೃತ್ಯದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಕುಷ್ಟಗಿಯಲ್ಲಿ ನಡೆದ ಘಟನೆ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಈ ಘಟನೆ ಫೆಬ್ರವರಿ 10ನೇ ತಾರೀಖಿನ ರಾತ್ರಿ 11.30 ಗಂಟೆಗೆ ನಡೆದಿದೆ. ಈ ಘಟನೆಗೆ ಕಾರಣರಾದವರು ಮೂವರು ಅಧಿಕಾರಿಗಳು ಹಾಗೂ ಒಬ್ಬ ವಕೀಲರು. ಇವರೆಲ್ಲರೂ ಒಟ್ಟಿಗೆ ಅಂದು ಪಾನಮತ್ತರಾಗಿದ್ದರು. ಇವರು ಯಾರೆಂದರೆ, ಮೊದಲನೆಯದಾಗಿ ತಹಶೀಲ್ದಾರ್, ಕಂದಾಯ ಇಲಾಖೆ, ಕುಷ್ಟಗಿ, ಇವರ ಹೆಸರು ಶಿವರಾಜ್ ಎಂದು. ಎರಡನೆಯವರು ಜಿಲ್ಲಾ ಪರಿಷತ್ತಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಮೂರನೆಯವರು ಪಿಡಬ್ಲ್ಯೂಡಿಯ ಜ್ಯೂನಿಯರ್ ಇಂಜಿನಿಯರ್ ಹಾಗೂ

ನಾಲ್ಕನೆಯವರು ವಕೀಲರು. ಇವರುಗಳು ರಾತ್ರಿ 8 ಗಂಟೆಯಿಂದ ಒಟ್ಟಿಗೆ ಕುಡಿಯುತ್ತಿದ್ದಾರೆ. ಅವರುಗಳಿದ್ದ ಮನೆ ಖಾಸಗಿ ಮನೆಯಾಗಿದ್ದು, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13ರಲ್ಲಿ ಒಂದು ಭವ್ಯವಾದಂಥ ಬಂಗಲೆಯನ್ನು ಈ ಅಧಿಕಾರಿಗಳು ತೆಗೆದುಕೊಂಡಿದ್ದಾರೆ. ಈ ಮೂರು ಅಧಿಕಾರಿಗಳಿಗೆ ಸರ್ಕಾರಿ ಕ್ವಾರ್ಟಸ್ ಇದ್ದು,ಆ ಬಂಗಲೆಯಲ್ಲಿ ಮೋಜು ಮಾಡುವುದಕ್ಕೋಸ್ಕರ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಬಾಡಿಗೆ ಕೊಟ್ಟು ತೆಗೆದುಕೊಂಡಿದ್ದಾರೆ. ಈ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಮದುವೆಯಾಗಿದ್ದರೂ ತನ್ನ ಹೆಂಡತಿಯ ಜೊತೆ ಕುಷ್ಠಗಿಯಲ್ಲಿ ವಾಸ ಮಾಡುತ್ತಿಲ್ಲ. ತಹಶೀಲ್ದಾರರಿಗೂ ಕೂಡ ಮದುವೆಯಾಗಿ ಮಕ್ಕಳಿದ್ದರೂ ಅವರನ್ನು ಕುಷ್ಠಗಿಗೆ ಕರೆದುಕೊಂಡು ಬಂದಿಲ್ಲ, ಅವರು ಏಕಾಂಗಿಯಾಗಿದ್ದಾರೆ. ಇವರುಗಳು ಕುಡಿದು ಏನು ಮಾಡುತ್ತಿದ್ದರು ಇದೇನೂ ಹೊಸ ಪ್ರಕರಣವಲ್ಲ. ಈ ರೀತಿ ಕುಷ್ಠಗಿಯಲ್ಲಿ ಈ ಅಧಿಕಾರಿಗಳು ನಡೆಸುತ್ತಲೇ ಇದ್ದಾರೆ. ಆದರೆ, ಅಂದು ಅವರೆಲ್ಲರೂ ಜಾಸ್ತಿ ಕುಡಿದು ಅಮಲೇರಿದಾಗ ಮೋಜು ಮಾಡಬೇಕೆನ್ನಿಸಿ, ಯಾವ ಹೆಣ್ಣು ಮಗಳೂ ಸಿಗಲಿಲ್ಲವಾದ್ದರಿಂದ ಒಬ್ಬ ಮಹಿಳಾ ಅಂಗನವಾಡಿ ಕಾರ್ಯಕರ್ತೆಯನ್ನು ಎಳೆದುಕೊಂಡು ಬಂದಿದ್ದಾರೆ.ಆಕೆ ಎಷ್ಟೇ ಪ್ರತಿಭಟಿಸಿದರೂ ಕೂಡ ಅವರೆಲ್ಲರೂ ಕೂಡಿ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ. ಈಗಾಗಲೇ ಆಕೆ ಗರ್ಭಿಣಿ ಸ್ತ್ರೀಯಾಗಿದ್ದು, ಆ ಸಮಯದಲ್ಲಿ ಅಬಾರ್ಷನ್ ಆಗಿ ಪ್ರಜ್ಞಾಹೀನಳಾಗಿದ್ದಾಳೆ. ಆದನಂತರ ಈಕೆಯನ್ನು ಕುಷ್ಠಗಿಯಲ್ಲಿ ಅಥವಾ ಸುತ್ತಮುತ್ತಲಿರುವ ಆಸ್ಪತ್ರೆಯಲ್ಲಿ ದಾಖಲು ಮಾಡಿದರೆ ಬೇರೆಯವರಿಗೆ ಗೊತ್ತಾಗಿ ಬಿಡುತ್ತದೆಂಬ ಕಾರಣಕ್ಕಾಗಿ ಸುಮಾರು 140 ಕಿ.ಮೀ ದೂರದಲ್ಲಿರುವ ಹುಬ್ಬಳ್ಳಿ ಆಸ್ಪತ್ರೆಗೆ ಜಿಲ್ಲಾ ಪರಿಷತ್ತಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರವರ ಹೊಸ ಅಂಬಾಸಿಡರ್ ಕಾರಿನಲ್ಲಿ ಆ ಹೆಣ್ಣು ಮಗಳನ್ನು ಸಾಗಿಸಿದರು.

11.45 ಎ.ಎಂ

ಆ ಕಾರನ್ನು ಆ ರಾತ್ರಿ ಏಕೆ ಅಲ್ಲಿಗೆ ತೆಗೆದುಕೊಂಡು ಹೋದರೆಂದರೆ ಈ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಏನು ಇದ್ದಾರೆ ಇವರು ಹೊಸಪೇಟೆಯಲ್ಲಿ ಒಂದು ದೊಡ್ಡ ಬಂಗಲೆಯನ್ನು ಕಟ್ಟಿಸಿದ್ದಾರೆ. ಅದನ್ನು 12ನೇ ತಾರೀಖಿನ ದಿವಸ ಉದ್ಘಾಟನೆ ಮಾಡಬೇಕಾಗಿತ್ತು. ಅದಕ್ಕಾಗಿ ಆ ಕಾರನ್ನು ತರಿಸಿಕೊಂಡು ಅವತ್ತು ದೊಡ್ಡ ಪಾರ್ಟಿಯನ್ನು ಮಾಡಿ ಅವರುಗಳೆಲ್ಲಾ ಗೃಹಪ್ರವೇಶವನ್ನು ಮಾಡುವುದರ ಬದಲು ಬೇರೆ ಪ್ರವೇಶವನ್ನು ಮಾಡುವುದಕ್ಕೆ ಹೋಗಿದ್ದಾರೆ. ಆ ಹೆಣ್ಣುಮಗಳು ಪ್ರಜ್ಞಾಹೀನಳಾಗಿ ಗದಗಿನ ಸಮೀಪ ಹೋಗುವಾಗ ಅವಳು ಸತ್ತು ಹೋಗಿದ್ದಾಳೆ. ಆಗ ಆ ಕಾರನ್ನು ಜ್ಯೂನಿಯರ್ ಇಂಜಿನಿಯರ್‌ರವರೇ ನಡೆಸುತ್ತಿದ್ದರು. ಆ ನಾಲ್ಕು ಜನರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಈ ರೀತಿ ಸತ್ತದ್ದು ಗೊತ್ತಾದ ಮೇಲೆ ರಾತ್ರೋರಾತ್ರಿ ಆ ಹೆಣವನ್ನು ಕುಷ್ಠಗಿಗೆ ತಂದರೆ ಜನರಿಗೆ ಗೊತ್ತಾಗುತ್ತದೆ ಎಂದು ಕುಷ್ಠಗಿಗೆ ಸಮೀಪವಿರುವ ಮದಲಗಟ್ಟಿ ಎನ್ನತಕ್ಕ ಹಳ್ಳಿಗೆ ಆ ಹೆಣವನ್ನು ತೆಗೆದುಕೊಂಡು ಹೋಗುತ್ತಾರೆ. ಆಕೆಯ ತಾಯಿ ಒಬ್ಬ ದೇವದಾಸಿ, ಅವಳಲ್ಲಿ ಒಂದು ಎಕರೆ ಜಮೀನು ಸಹ ಇಲ್ಲ. ಅವರುಗಳು ಆ ಹೆಣ್ಣುಮಗಳ ತಾಯಿಗೆ 20 ಸಾವಿರವನ್ನು ಕೊಟ್ಟು ನಿನ್ನ ಮಗಳು ಏನೋ ಆಗಿ ಸತ್ತುಹೋಗಿದ್ದಾಳೆ, ನೀನು ಈ 20 ಸಾವಿರವನ್ನು ತೆಗೆದುಕೊಂಡು ಆರಾಮವಾಗಿ ಜೀವನ ಮಾಡು, ಇದನ್ನು ಯಾರಿಗೂ ಹೇಳುವುದಕ್ಕೆ ಹೋಗಬೇಡ, ಏನಾದರೂ ಹೇಳಿದರೆ ನಿನಗೂ ಸಹ ಇದೇ ರೀತಿ ಆಗುತ್ತದೆಂದು ಅವಳಿಗೆ ಬೆದರಿಕೆಯನ್ನು ಒಡ್ಡಿ ಸಮಾಧಾನ

ಮಾಡಿದ್ದಾರೆ. ಹೇಗಾದರೂ ನಿನ್ನ ಮಗಳು ಸತ್ತುಹೋಗಿದ್ದಾಳೆ, ಈ 20 ಸಾವಿರದಲ್ಲಿ ಜೀವನ ಮಾಡಬಹುದು ಎಂದು ಹೇಳಿ ಆಕೆಗೂ ಸಮಾಧಾನ ಮಾಡಿದ್ದಾರೆ. ಮತ್ತು ಈ ಹೆಣವನ್ನು ರಾತ್ರೋರಾತ್ರಿ ಮುಗಿಸಿಬಿಡಲು ಪ್ರಯತ್ನ ಮಾಡಿದ್ದಾರೆ.ತಮಗೆ ಗೊತ್ತಿರುವ ಹಾಗೆ, ಹಿಂದುಳಿದ ವರ್ಗಗಳಲ್ಲಿ ಮತ್ತು ವೀರಶೈವ ಸಮಾಜದಲ್ಲಿ ಹೆಣವನ್ನು ಸುಡುವುದಿಲ್ಲ. ಅದರ ಬದಲು ಹೂಳುತ್ತಾರೆ. ಆದರೆ ಹೆಣವನ್ನು ಹೂಳಿದರೆ ಗೊತ್ತಾಗುತ್ತದೆಯೆಂದು ತಹಶೀಲ್ದಾರರಿಗೆ ಗೊತ್ತಿದೆ. he knows it. ಹೆಣ ಹೂಳಿದರೆ ರೀ ಪೋಸ್ಟ್‌ಮಾರ್ಟಂ ಮಾಡುವುದಕ್ಕೆ ಮತ್ತೆ ಅಧಿಕಾರವಿರುತ್ತದೆ. ಏನಾದರೂ ಅಂಥ ಸಂದರ್ಭ ಬಂದು ಏನಾದರೂ ಸಾಕ್ಷಿ ಸಿಕ್ಕಿದರೆ ತೊಂದರೆಯಾದೀತು ಎಂದು ಅವರು ಆ ಹೆಣವನ್ನು ಹೂಳದೆ ಸುಡಿಸುತ್ತಾರೆ. ಆ ಹೆಣವನ್ನು ಸುಡಲು ಕನಕಪ್ಪ ಎಂಬ ಹರಿಜನನನ್ನು ಸಹಾಯಕ್ಕಾಗಿ ಬಳಸಿಕೊಂಡಿದ್ದಾರೆ. ಅವನಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ನೀನು ಕಟ್ಟಿಗೆ ಮತ್ತು ಬೇಕಾದ ಇತರೆ ವಸ್ತುಗಳನ್ನು ತೆಗೆದುಕೊಂಡು ಬಾ ಎಂದು ಹೇಳಿ ಒಂದು ಹಳ್ಳದ ದಂಡೆಯ ಮೇಲೆ ಆ ಹೆಣವನ್ನು ಸುಟ್ಟು ಭಸ್ಮಮಾಡಿದ್ದಾರೆ. ಈ ಪ್ರಕರಣ ಇಷ್ಟಕ್ಕೇ ಮುಗಿಯುವುದಿಲ್ಲ. ಈ ಪ್ರಕರಣ ಆಗುವ ಮೊದಲು ಆ ಅಧಿಕಾರಿಗಳು ಕುಡಿದು, ಇಸ್ಪೀಟ್ ಆಡಿ ಗಲಾಟೆ ಮಾಡುವುದನ್ನು, ಮೋಜು ಮಾಡುವುದನ್ನು ನೋಡಿ ಸಾರ್ವಜನಿಕರು ದೂರು ಸಲ್ಲಿಸಲು ಅಲ್ಲಿನ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಸಬ್‌ಇನ್‌ಸ್ಪೆಕ್ಟರ್‌ಗೆ ಹೇಳುತ್ತಾರೆ, ಆಗ ಅವರು ಇಬ್ಬರು ಪೋಲೀಸ್ ಪೇದೆಗಳನ್ನು ಕಳುಹಿಸಿದಾಗ ಈ ಅಧಿಕಾರಿಗಳು ಆ ಪೇದೆಗಳಿಗೂ ಸಹ ಕುಡಿದ ಮತ್ತಿನಲ್ಲಿ ಹೊಡೆದಿದ್ದಾರೆ. ಇದು ಈ ಪ್ರಕರಣ ಆಗುವುದಕ್ಕೂ ಮೊದಲು ನಡೆದ ಪ್ರಕರಣ. ಈ ಕೇಸನ್ನೂ ಕೂಡ ಪೋಲೀಸ್‌ನವರು ದಾಖಲೆ ಮಾಡಿಕೊಳ್ಳಲಿಲ್ಲ. ಆದರೆ ಇದು ದೊಡ್ಡ ಪ್ರಕರಣವಾದುದರಿಂದ ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಹೊರಗೆ ತಂದಿರುವುದರಿಂದ ಅವರುಗಳು ಸಿಕ್ಕಿಹಾಕಿಕೊಂಡರು. ಆಮೇಲೆ, ಈ ಪ್ರಕರಣವನ್ನು ಮುಚ್ಚಿಡಲು ಇಲ್ಲಿ ಅತ್ಯಂತ ಪ್ರಭಾವ ವ್ಯಕ್ತಿಗಳ ಕೈವಾಡ ಇದೆ, ಕಾಣದ ಕೈಗಳ ಕೈವಾಡವಿದೆ, ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕಾಗಿದೆ . ಇದರ ಜೊತೆಗೆ ಈ ರೀತಿ ಸಾಯಿಸಿ ಸುಟ್ಟು, ಭಸ್ಮ ಮಾಡಿದ ಕೇಸೂ ಕೂಡ ಸ್ಥಳೀಯ ಪೋಲೀಸ್‌ರಾದಂಥ ಸರ್ಕಲ್ ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್‌ಗೆ ಗೊತ್ತಿದೆ. ಅವರು ಯಾರೂ ಈ ಕೇಸನ್ನು ದಾಖಲು ಮಾಡಿಕೊಳ್ಳಲಿಲ್ಲ. ತಮಗೆ ಗೊತ್ತಿರುವ ಹಾಗೆ, according to Indian Penal Code Section 379 and 300 ಇವೆರಡೂ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಬೇಕಾಗಿತ್ತು. ಇದರ ಬಗ್ಗೆ ಯಾರೂ ದೂರನ್ನು ಕೊಡಬೇಕಾಗಿಲ್ಲ. ಆ ಹೆಣ್ಣುಮಗಳ ತಾಯಿಯೂ ದೂರನ್ನು ಕೊಡಬೇಕಾಗಿಲ್ಲ. ಇದರ ಬಗ್ಗೆ ಸಾರ್ವಜನಿಕರೂ ದೂರನ್ನು ಕೊಡಬೇಕಾಗಿಲ್ಲ.ಏಕೆಂದರೆ ಇದಕ್ಕೆ ಸರ್ಕಾರದ ಜವಾಬ್ದಾರಿ ಇದೆ. It is a cognisable and it is non-compoundable case under section 379-rape case, under section 300 a murder case. ಅಲ್ಲಿ ಯಾರೂ ಕೂಡ ದೂರನ್ನು ಕೊಡತಕ್ಕ ಅವಶ್ಯಕತೆ ಇಲ್ಲ. It is the duty of the government. It is a cognisable and non-compoundable ಕೇಸ್ ಇದ್ದರೂ ಕೂಡ ಏಕೆ ಪೋಲೀಸ್‌ನವರು ಇದನ್ನು ಮರೆಮಾಚುತ್ತಿದ್ದಾರೆ. ಇದರಲ್ಲಿ ಇಡೀ ತಾಲ್ಲೂಕಿನ ಎಲ್ಲಾ ಅಧಿಕಾರಿಗಳ ಕೈವಾಡವಿದೆ,ಕೆಲವು ಪ್ರಭಾವಿ ವ್ಯಕ್ತಿಗಳ ಕೈವಾಡವಿದೆ. ಅವರು ಹೊರಗೆ ಬರಲಿ. ಈ ಕೇಸ್‌ನ ಬಗ್ಗೆ ಪತ್ರಿಕೆಯಿಂದ ಸಾರ್ವಜನಿಕರಿಗೆ ಗೊತ್ತಾಗಿ ಅವರುಗಳು ಆ ಜಿಲ್ಲೆಯ ಪೋಲೀಸ್ ಮುಖ್ಯಾಧಿಕಾರಿಗಳ ಗಮನಕ್ಕೆ ತಂದಾಗ ಅವರು ಒಂದು ವಾರದ ಹಿಂದೆ ಕೊಪ್ಪಳದ

ಡಿವೈಎಸ್‌ಪಿಗೆ ಒಂದು ವೈರ್‌ಲೆಸ್ ಮೆಸೇಜನ್ನು ಕಳುಹಿಸುತ್ತಾರೆ. ಅದೇನೆಂದರೆ : 'Go and meet her mother and enquire and report'. This is the wireless message. 10-15 ದಿವಸಗಳ ಹಿಂದೆಯೇ ಕೊಟ್ಟಿದ್ದಾರೆ. ಒಬ್ಬ ಪೋಲೀಸ್ ಅಧಿಕಾರಿ ಮತ್ತು ತಹಶೀಲ್ದಾರ್ ಇನ್‌ವಾಲ್ವ್ ಆದಮೇಲೆ ಇಲ್ಲಿಗೆ ಜಿಲ್ಲಾಧಿಕಾರಿಗಳು ಏಕೆ ಹೋಗಿಲ್ಲ? ಮತ್ತು ಜಿಲ್ಲೆಯ ಮಂತ್ರಿಗಳಿದ್ದಾರೆ, ಅವರು ಏಕೆ ಹೋಗಲಿಲ್ಲ? ಇದರ ಬಗ್ಗೆ ವಿಚಾರ ಮಾಡಬೇಕು. ಇದು ಪೋಲೀಸರಿಗೆ ಗೊತ್ತಿಲ್ಲ ಎಂದಲ್ಲ. 15 ದಿವಸಗಳ ಹಿಂದೆಯೇ ಈ ಪ್ರಕರಣದ ಸಂಪೂರ್ಣ ರಿಪೋರ್ಟ್ ಡಿ.ಐ.ಜಿ. ಮಡಿವಾಳ್‌ರವರ ಹತ್ತಿರ ಇತ್ತು. ಆದರೆ ಅದನ್ನು ಮುಚ್ಚಿಟ್ಟಿದ್ದಾರೆ. ಇವತ್ತು ಪತ್ರಿಕೆಗಳಿಗೆ ವಂದಿಸಬೇಕು. ಅದರಲ್ಲೂ ಸಂಯುಕ್ತ ಕರ್ನಾಟಕ ಮತ್ತು ಪ್ರಜಾವಾಣಿ ಪತ್ರಿಕೆಗಳು ಈ ಪ್ರಕರಣವನ್ನು ಹೊರತಂದಿದ್ದಾರೆ. ಈ ಒಂದು ವಿಷಯ ಸಿಕ್ಕಿದ್ದರಿಂದ ಮಾತನಾಡುವುದಕ್ಕೆ ಅವಕಾಶವಾಯಿತು. ಮಾನ್ಯ ಅಧ್ಯಕ್ಷರೇ ಇದು ಒಂದು ಸಣ್ಣ ಪ್ರಕರಣ ಅಲ್ಲ. ಇದರಲ್ಲಿ ಇಡೀ ಜಿಲ್ಲೆಯ ಅಧಿಕಾರಿಗಳು ಶಾಮಿಲಾಗಿದ್ದಾರೆ. ಪೋಲೀಸರಂತೂ ಸಂಪೂರ್ಣವಾಗಿ ಶಾಮೀಲಾಗಿದ್ದಾರೆ. ತಾವು ಪೋಲೀಸ್ ಅಧಿಕಾರಿಗಳ ಮೇಲೆ ಕೇಸ್ ದಾಖಲೆ ಮಾಡಬೇಕು. ಕೇವಲ ಈ ಮೂವರ ಮೇಲೆ ಕ್ರಮ ತೆಗೆದುಕೊಂಡರೆ ಆಗುವುದಿಲ್ಲ. ಇವರಿಗೆ ಯಾವ ರೀತಿ ಶಿಕ್ಷೆ ಕೊಡಬೇಕೋ ಕೊಡಿ. ಅದರ ಜೊತೆಗೆ ಈ ಪೋಲೀಸ್‌ನವರನ್ನೂ ಕೂಡ ಈ ಕೇಸಲ್ಲಿ ಇನ್‌ವಾಲ್ವ್ ಮಾಡಬೇಕು. ಇದು ಅವರ ಬೇಜವಾಬ್ದಾರಿಯಿಂದ ಆಗಿದ್ದು. ಯಾರೂ ಬಂದು ದೂರು ಕೊಟ್ಟಿಲ್ಲ ಎಂದು ಹೇಳಬಹುದು. ಏಕೆಂದರೆ ದೂರು ಕೊಡುವ ಅವಶ್ಯಕತೆ ಇಲ್ಲ. ನಾನು ಈಗಾಗಲೇ ಸೆಕ್ಷನ್ ನಂಬರ್ ಹೇಳಿದ್ದೇನೆ. ಇಂಡಿಯನ್ ಪಿನಲ್ ಕೋಡ್ ಸೆಕ್ಷನ್ 379 ಮತ್ತು 300ರ ಪ್ರಕಾರ ಇದು ಕಾಗ್ನಿಸಬಲ್ ಕೇಸ್ ಮತ್ತು ನಾನ್ ಕಾಂಪೌಂಡರ್ ಕೇಸ್ ಆಗಿದೆ. ಇದು ಅವರ ಕರ್ತವ್ಯವಾಗಿದೆ. ಅದಕ್ಕಾಗಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ಏನು ತಂದಿದ್ದೇವೆ ಇದರ ಬಗ್ಗೆ ಇನ್ನೂ ಹೆಚ್ಚಿನ ವಿಷಯವನ್ನು ಮಾತನಾಡುವುದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನಮ್ಮ ಉಪನಾಯಕರು ಹೇಳಿದಂತೆ ಸಿ.ಬಿ.ಐ. ತನಿಖೆ ಆಗಬೇಕು. ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಸದನದ ಒಂದು ಸಮಿತಿ ಆಗಬೇಕು. ಸತ್ಯ ಹೊರ ಬರಬೇಕಾದರೆ ಸದನದ ಸಮಿತಿಯಾಗಬೇಕು. ಆದ್ದರಿಂದ ತಾವು ಕೂಡಲೆ ಸದನದ ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯನ್ನು ಕುಷ್ಟಗಿಗೆ ಕಳುಹಿಸಿಕೊಡಬೇಕೆಂದು ತಮ್ಮನ್ನು ಅತ್ಯಂತ ವಿನಯಪೂರ್ವಕವಾಗಿ ಕೇಳಿಕೊಂಡು ಈ ನಿಲುವಳಿ ಸೂಚನೆಗೆ ಅನುವು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ವಿಷಯ ಬರೀ ವಿರೋಧ ಪಕ್ಷಕ್ಕೆ ಸೀಮಿತವಾದದ್ದಲ್ಲ. ನಾವು ಆಡಳಿತ ಪಕ್ಷದಲ್ಲಿರಲಿ ಅಥವಾ ವಿರೋಧ ಪಕ್ಷದಲ್ಲಿರಲಿ, ಶಾಸಕರಾದ ಮೇಲೆ ಪ್ರತಿಯೊಬ್ಬರ ಕರ್ತವ್ಯವೆಂದು ತಿಳಿದು ಮುಂಜಾನೆ ನಿಮ್ಮ ಬಳಿ ಬಂದು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಈ ವಿಷಯ ಚರ್ಚೆಗೆ ಬಂದಾಗ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಇತರ ಹಿರಿಯ ಸದಸ್ಯರು ತಮ್ಮ ಕಛೇರಿಯಲ್ಲಿದ್ದರು. ಇದು ಅಷ್ಟೊಂದು ಆವೇಶ ತೆಗೆದುಕೊಳ್ಳುವಂತಹ ವಿಷಯವಲ್ಲ. ಮಾನ್ಯ ಯಡಿಯೂರಪ್ಪನವರು ಈ ವಿಷಯದ ಬಗ್ಗೆ ಗಂಭೀರತೆಯನ್ನು ಎಷ್ಟು ಅರಿತಿದ್ದಾರೊ ಅದಕ್ಕಿಂತ ಹೆಚ್ಚಾಗಿ ನಾನು ಅರಿತುಕೊಂಡಿದ್ದೇನೆಂದು ಭಾವನೆ ಮಾಡಿದ್ದೇನೆ. ಅವರ ಜಿಲ್ಲೆಯಾದ

ಚಂದ್ರಗುತ್ತಿಯಲ್ಲಿ ನಡೆಯತಕ್ಕಂಥ ಬೆತ್ತಲೆಸೇವೆಯ ಪ್ರಕರಣವನ್ನು ಈ ಸದನದಲ್ಲಿ ವಿರೋಧ ಪಕ್ಷದಲ್ಲಿದ್ದಾಗ ನಾನೇ ಪ್ರಸ್ತಾಪ ಮಾಡಿದ್ದೇನೆ. ಹಿಂದುಳಿದ ಸಮಾಜದಲ್ಲಿ ಹುಟ್ಟಿದಂತಹ ಒಬ್ಬ ಹೆಣ್ಣುಮಗಳ ಮೇಲೆ ನಡೆದಂತಹ ಅತ್ಯಾಚಾರದ ಘಟನೆ ಕೇವಲ ಹಿಂದುಳಿದ ಸಮಾಜಕ್ಕೆ ಸೇರಿದಂತಹ ಶಾಸಕರಿಗೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಈ ಸಮಾಜದಲ್ಲಿರುವ ಹೆಣ್ಣುಮಕ್ಕಳ ಮತ್ತು ಸರ್ಕಾರಿ ನೌಕರಿಯಲ್ಲಿರುವ ಹೆಣ್ಣುಮಕ್ಕಳ ಮೇಲೆ ಆಗುವ ದೌರ್ಜನ್ಯದ ಬಗ್ಗೆ ನಾವು ಹಲವಾರು ಸಲಹೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ.ಇವತ್ತು ಸರ್ಕಾರಿ ಅಧಿಕಾರಿಗಳು ಕರ್ತವ್ಯ ನಿಷ್ಠರಾಗಿ ಸೇವೆ ಸಲ್ಲಿಸಬೇಕೊ ಅಂತಹ ಅಧಿಕಾರಿಗಳಿಂದಲೇ ಇಂಥ ದೌರ್ಜನ್ಯ ನಡೆಯುತ್ತಿದೆ. ಮುಖ್ಯವಾಗಿ ಹಿಂದುಳಿದ ಸಮಾಜದಲ್ಲಿರತಕ್ಕಂಥ ಅಂಗನವಾಡಿ ಕಾರ್ಯಕರ್ತರು ಪ್ರತಿಭಟನೆ ಮಾಡುತ್ತಿದ್ದಾರೆ. ಅವರಿಗೆ ಪಗಾರ ಹೆಚ್ಚಾಗಬೇಕಾಗಿದೆ. ಅವರ ದಿನನಿತ್ಯ ಸೇವೆಗೆ ನಿರ್ದಿಷ್ಟವಾದಂತಹ ಸವಲತ್ತುಗಳು ಸಿಗಬೇಕಾಗಿದೆ. ಅವರು ಬೆಂಗಳೂರಿಗೆ ಬಂದಾಗ ಈ ವಿಷಯ ಪ್ರಸ್ತಾವನೆ ಮಾಡಲಿಲ್ಲ. ಅವರು ತಮ್ಮ ಹೊಟ್ಟೆಪಾಡಿಗಾಗಿ ಕೂಗುತ್ತಿದ್ದಾರೆ. ಈ ವಿಷಯ ಅವರ ಗಮನಕ್ಕೆ ಬಂದಿದೆಯೊ ಇಲ್ಲವೊ ಗೊತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅಂಗನವಾಡಿ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ, ಬೇಕಾದರೆ ರಿಪೋರ್ಟ್ ನೋಡಿ ಸ್ವಾಮಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ದಯಮಾಡಿ ಕ್ಷಮಿಸಬೇಕು. ಈ ವಿಷಯ ಪ್ರಸ್ತಾವನೆ ಮಾಡಿದಂತಹ ಪತ್ರಿಕಾ ಸಂಪಾದಕರಿಗೆ, ಪತ್ರಿಕೆ ವರದಿಗಾರರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾವು ಶಾಸಕರಾಗಿರಬಹುದು, ಆದರೆ ಕೆಲವು ಸಂದರ್ಭಗಳಲ್ಲಿ ನಾವು ಕೂಡ ನಮ್ಮಕ್ಷೇತ್ರದಲ್ಲಿ ನಡೆದಿರುವ ಘಟನೆಗಳನ್ನು ಮುಚ್ಚಿಡಲಿಕ್ಕೆ ನಾವು ಕೂಡ ಕೆಲವೊಂದು ಸಲ ಹಿಂದಿನ ಬಾಗಿಲಿನಿಂದ ಸಹಾಯ ಮಾಡತಕ್ಕಂತಹ ಪ್ರಯತ್ನ ಮಾಡುತ್ತೇವೆ. ಈ ಸಂದರ್ಭದಲ್ಲಿ ಆ ಹೆಣ್ಣುಮಗಳ ಮೇಲೆ ಏನು ಒಂದು ಘಟನೆ ನಡೆದಿದೆ, ಆ ದೌರ್ಜನ್ಯದ ಹಿಂದೆ ಯಾರೂ ಅಧಿಕಾರಿಗಳು ಇದ್ದಾರೆ, ಅವರು ತಾಲ್ಲೂಕು ಮಟ್ಟದ ಅಧಿಕಾರಗಳು ಇರಬಹುದು, ಜಿಲ್ಲಾ ಮಟ್ಟದ ಅಧಿಕಾರಿಗಳು ಇರಬಹುದು, ಸರ್ಕಾರದ ಕರ್ತವ್ಯವಿದೆ. ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿ ಇಡುವುದು ಅಷ್ಟೇ ಅಲ್ಲ, ಅವರನ್ನು ಕೆಲಸದಿಂದ ವಜಾ ಮಾಡಬೇಕಾಗುತ್ತದೆ, ನೇಣಿಗೇರಿಸಬೇಕಾಗುತ್ತದೆ. ಏಕೆಂದರೆ ಇದು ಬರೇ ಒಂದು ಸಮಾಜಕ್ಕೆ ಸಂಬಂಧಪಟ್ಟ ವಿಷಯ ಅಲ್ಲ. ಒಂದು ದೇವದಾಸಿ ಮಗಳಾಗಿ ಒಬ್ಬಳಿಗೆ ಒಳ್ಳೆಯ ಕೆಲಸ ಕೊಡತಕ್ಕಂಥ ಕಾರ್ಯದಲ್ಲಿ ಸರ್ಕಾರ ಸಮಯೋಜಿತ ಕಾರ್ಯಕ್ರಮವಾಗಿ ಅಂಗನವಾಡಿ ಕಾರ್ಯಕರ್ತೆಯಾಗಿ ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮುಂದಿನ ಬೆಂಚಿನಲ್ಲಿರತಕ್ಕಂತಹ ಮಾನ್ಯ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಇರಬಹುದು, ಹಿಂದಿನ ರ್‍ಯಾಂಕಿನಲ್ಲಿರತಕ್ಕಂಥ ಸಚಿವರು ಇರಬಹುದು, ಇದು ಒಂದು ಗಂಭಿರವಾದಂಥ ವಿಷಯ. ಈ ಸದನದಲ್ಲಿ ಈ ಬಗ್ಗೆ ಚರ್ಚೆ ನಡೆದಾಗ ಈ ಸದನ ಅಷ್ಟೇ ಗಂಭೀರವಾಗಿರಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರಲ್ಲಿ ನಾನು ವಿನಂತಿ ಮಾಡುತ್ತೇನೆ. ಬರೇ ವಿರೋಧ ಪಕ್ಷದಲ್ಲಿ ಇದ್ದು ತಾವು ಹೆಚ್ಚಿನ ಒಂದು ಅವಕಾಶ ಇದೆಯೆಂದು ಕೂಗಾಡಿದರೆ, ನಾನು ಕೂಗಾಡುವ ಶಬ್ದ ಏಕೆ ಹೇಳುತ್ತೇನೆಂದರೆ, ಹಲವಾರು ಸಲ ಇಂತಹ ಸಂದರ್ಭ ಬಂದಾಗ ವಿಷಯದ ಗಹನತೆ ಅರಿತು ಬೇರೆಯವರಿಗೆ ಕೂಡ ತಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಇದು ಬಂದಾಗ ನನ್ನ ಮನಸ್ಸು ನೊಂದಿದೆ. ನನ್ನ ಬಗ್ಗೆ ತಪ್ಪು ಅಭಿಪ್ರಾಯ ಇರಬಹುದು. ದಯವಿಟ್ಟು ಕ್ಷಮಿಸಬೇಕು.ತಾವು ಎಷ್ಟೊಂದು ಆವೇಶ ಪೂರಿತರಾಗಿ

ಮಾತನಾಡಿದರೆ ಅಷ್ಟೇ ಆವೇಶ ಪೂರಿತರಾಗಿ ಮಾತನಾಡತಕ್ಕಂಥ ಅಧಿಕಾರ ನಮಗೂ ಇದೆ. ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್, ಮಾನ್ಯ ವಿರೋಧ ಪಕ್ಷದ ಉಪನಾಯಕರು ಆದಂತಹ ಸಿಂಧ್ಯಾರವರು, ಯಡಿಯೂರಪ್ಪನವರು, ಇನ್ನುಳಿದ ಸದಸ್ಯರು ಏನು ಒಂದು ಭಾವನೆ ಇಟ್ಟುಕೊಂಡಿದ್ದಾರೆ, ಅದೇ ಭಾವನೆಯಿಂದ ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಸದನದ ಸಮಿತಿ ಮಾಡಿ ಇಂತಹ ಯಾರು ಯಾರು ಅಧಿಕಾರಿಗಳು ಇದ್ದಾರೆ, ಅವರ ಫೋಟೋಗಳನ್ನು ಪ್ರಿಂಟ್ ಮಾಡಿ , ಇದರ ಹಿನ್ನೆಲೆಯಲ್ಲಿರತಕ್ಕಂತವರ ಕೈವಾಡ ಯಾರದ್ದು? ಎಸ್.ಪಿ.ಯವರ ಕಾರ್ಯಕ್ರಮ ಏನು ಇತ್ತು? ರೆವಿನ್ಯೂ ಅಧಿಕಾರಿಗಳ ಕಾರ್ಯಕ್ರಮ ಏನು ಇತ್ತು? ಡಿ.ಸಿ.ಯವರ ಕಾರ್ಯಕ್ರಮ ಏನು ಇತ್ತು? ಈ ಎಲ್ಲಾ ಅಧಿಕಾರಿಗಳ ಫೋಟೋ ಪ್ರಿಂಟ್ ಮಾಡಿ, ಇವರು ಸಮಾಜದ ಕಂಟಕರು, ಘಾತುಕರು, ಇಂತಹ ಒಂದು ಕಾರ್ಯಕ್ಕೆ ಕೈ ಹಾಕಿದ್ದಾರೆ. ಇದರ ಬಗ್ಗೆ ಒಂದು ವಿಶೇಷವಾದಂತಹ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಇವರನ್ನು ಬಹಿಷ್ಕಾರ ಹಾಕಿ, ಯಾವುದೇ ಸಮಾಜದವರು ಇರಲಿ, ಸದನದ ಸಮಿತಿಯನ್ನು ತ್ವರಿತವಾಗಿ ಮಾಡಿ. ಇದು ನ್ಯಾಯಾಂಗ ತನಿಖೆ ಆಗ ತಕ್ಕ ಪ್ರಶ್ನೆ ಅಲ್ಲ. ಸದನದ ಸಮಿತಿ ಮಾಡಿ, ಅದು ಉನ್ನತ ಮಟ್ಟದ ಸದನದ ಸಮಿತಿ ಆಗಿ, ಅಲ್ಲಿ ಭೇಟಿ ಕೊಟ್ಟು ತಮಗೆ ರಿಪೋರ್ಟ್ ಕೊಡತಕ್ಕಂಥ ಕಾರ್ಯಕ್ರಮ ಆಗಬೇಕೆಂದು ಕೇಳಿಕೊಂಡು ಯಡಿಯೂರಪ್ಪನವರು ಏನು ನನ್ನ ಬಗ್ಗೆ ಒಂದು ಗ್ರಹಿಕೆ ಮಾಡಿಕೊಂಡಿದ್ದಾರೆ, ಆ ಗ್ರಹಿಕೆಯನ್ನು ಅವರು ತೆಗೆದುಹಾಕುತ್ತಾರೆಂದು ನಾನು ಈ ಸಂದರ್ಭದಲ್ಲಿ ಭಾವನೆ ಮಾಡುತ್ತೇನೆ. ದಯವಿಟ್ಟು ಬೇರೆಯವರು ಕೂಡ ಮಾತನಾಡಲಿಕ್ಕೆ ವಿರೋಧ ಪಕ್ಷದ ಸದಸ್ಯರೂ ಕೂಡ ಅವಕಾಶ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಸಿ. ಬೈರೇಗೌಡ (ದೇಮುಗಲ್) : ಮಾನ್ಯ ಅಧ್ಯಕ್ಷರೇ, ಇವತ್ತು ಪತ್ರಿಕೆಗಳಲ್ಲಿ ವರದಿ ಆಗಿರತಕ್ಕಂಥ ಘಟನೆಗಳನ್ನು ನಾಗರೀಕರಾಗಿರತಕ್ಕವರು ಯಾರೂ ಅದನ್ನು ಕುರಿತು ಮಾತನಾಡುವುದೂ ಕೂಡ ನಾಚಿಕೆಯಾಗುತ್ತದೆ. ಇಂತಹ ಅಮಾನವೀಯವಾದಂಥ ಕೃತ್ಯ ನಡೆದಿದೆ. ಯಾರು ಕಾನೂನನ್ನು ಸರ್ಕಾರಿ ನೌಕರರಿಗೆ ರಕ್ಷಣೆ ಮಾಡಬೇಕಾಗಿತ್ತೋ,ಯಾರು ಜನರಿಗೆ ರಕ್ಷಣೆ ಕೊಡಬೇಕಾಗಿತ್ತೋ ಅವರು ಜಿಲ್ಲಾ ಪರಿಷತ್ ಅಧಿಕಾರಿಗಳು ಇರಬಹುದು ಅಥವಾ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಇರಬಹುದು, ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಗಳು ಇರಬಹುದು. ಇವರು ಎಲ್ಲರೂ ಸೇರಿ ಇವತ್ತಿನ ದಿವಸ ನಡೆದಿರತಕ್ಕ ಘಟನೆಗಳನ್ನು ಮುಚ್ಚತಕ್ಕಂಥ ಪ್ರಯತ್ನ ನಡೆಸಿದ್ದಾರೆ. ಇವತ್ತು ಪತ್ರಿಕಾ ವರದಿ ಪ್ರಕಾರ ಡಿ.ವೈ.ಎಸ್.ಪಿ. ಆಗಿರತಕ್ಕವರು ಸ್ಥಳಕ್ಕೆ ಹೋಗಿ ಕೇಸ್ ರಿಜಿಸ್ಟರ್ ಮಾಡಿ ಎಂದು ಮಾತ್ರ ಹೇಳಿ ಹೋಗಿದ್ದಾರೆ. ಯಾರು ಅದರಲ್ಲಿ ಅಪರಾಧಿಗಳು ಇದ್ದಾರೆ ಅವರನ್ನು ಹುಡುಕಬೇಕಾಗಿರತಕ್ಕಂಥ ಪ್ರಥಮ ಕರ್ತವ್ಯ ಅವರದು. ಆದರೆ ಅವರು ಆ ಕೆಲಸ ಮಾಡಲಿಲ್ಲ. ಇವತ್ತು ಅವರೂ ಕೂಡ ಆ ಪ್ರಕರಣವನ್ನು ಮುಚ್ಚಿಹಾಕಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಮೊದಲು ಅಮಾನತ್‌ನಲ್ಲಿ ಇಡಬೇಕಾಗಿರತಕ್ಕಂಥಾದ್ದು, ಅಲ್ಲಿ ಸ್ಥಳಕ್ಕೆ ಹೋಗಿ ಏನು ಕ್ರಮ ತೆಗೆದುಕೊಳ್ಳದೆ ವಾಪಸ್ಸು ಬಂದಿರತಕ್ಕ ಅಧಿಕಾರಿ ಆಗಿರತಕ್ಕಂಥ ಡಿವೈಎಸ್‌ಪಿ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಸರ್ಕಾರದಲ್ಲಿ ಕೆಲವು ನೀತಿ ನಿಬಂಧನೆಗಳನ್ನು ಇಟ್ಟಿದ್ದಾರೆ. ನಿಮ್ನ ವರ್ಗದವರ ಮೇಲೆ ದೌರ್ಜನ್ಯ ನಡೆದರೆ ಅಲ್ಲಿ ಜಿಲ್ಲಾ ಮುಖ್ಯಸ್ಥರು ಯಾರು ಇದ್ದಾರೆ ಅವರನ್ನೇ ಜವಾಬ್ದಾರಿಯುತರನ್ನಾಗಿ ಮಾಡಬೇಕು ಎಂದು ಇದೆ. ಕೇಂದ್ರ ಸರ್ಕಾರದ ನಿರ್ದೇಶನ ಕೂಡ ಇದೆ. ರಾಜ್ಯ ಸರ್ಕಾರದ ನಿರ್ದೇಶನ ಕೂಡ ಇದೆ. ಆದುದರಿಂದ ಅಲ್ಲಿರತಕ್ಕ ಜಿಲ್ಲಾ ಪೋಲೀಸ್

ಮುಖ್ಯಸ್ಥರು, ಎಸ್.ಪಿ.ಯವರು ಯಾರು ಇದ್ದಾರೆ ಅವರನ್ನು ಸಸ್‌ಪೆನ್‌ಶನ್‌ನಲ್ಲಿ ಇಡಬೇಕಾಗುತ್ತದೆ. ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಯಾರು ಕೆಲಸ ಮಾಡುತ್ತಿದ್ದಾರೆ ಅವರ ಮೇಲೆ ಪ್ರಥಮವಾಗಿ ಜವಾಬ್ದಾರಿ ಇದೆ. 20-25 ದಿವಸಗಳು ಆದರೂ ಸಹ ಇಲ್ಲಿಯವರೆಗೆ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅಧಿಕಾರಿಗಳಾಗಿರತಕ್ಕವರು, ಜವಾಬ್ದಾರಿ ಇರತಕ್ಕ ಅಧಿಕಾರಿಗಳು ಏನು ಮಾಡುತ್ತಿದ್ದಾರೆ, ಅವರು ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ ಹಾಗೂ ಕರ್ತವ್ಯ ಭ್ರಷ್ಟತೆಯನ್ನು ಮಾಡಿದ್ದಾರೆ. ಅವರೆಲ್ಲರನ್ನೂ ಅಮಾನತ್ತಿನಲ್ಲಿ ಇಡಬೇಕಾಗುತ್ತದೆ. ಅವರೆಲ್ಲರೂ ಸೇರಿ ಈ ಪ್ರಕರಣವನ್ನು ಮುಚ್ಚಲು ಬಹಳ ಯಶಸ್ವಿಯಾಗಿ ಪ್ರಯತ್ನ ಮಾಡುತ್ತಿದ್ದಾರೆ. ನಾನು ವಕೀಲನಲ್ಲ. ಆ ಕಾರಣದಿಂದಾಗಿ ಇನ್ನು ಮುಂದೆ ಏನಾಗುತ್ತದೆ ಎಂಬುದನ್ನು ಹೇಳುವ ಪರಿಸ್ಥಿತಿಯಲ್ಲಿ ನಾನಿಲ್ಲ. ಆದರೆ ಬರ್ಬರ ಕೃತ್ಯ ಈ ಸಮಾಜದಲ್ಲಿ ಏನು ನಡೆಯುತ್ತಿದೆ ಇದನ್ನು ಸಾಮಾನ್ಯ ಮಾನವನಾಗಿ ನಾನು ಖಂಡಿಸಲೇ ಬೇಕಾಗುತ್ತದೆ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಇವೊತ್ತು ನನ್ನ ಎದುರು ಕುಳಿತುಕೊಂಡಿರುತ್ತಾರೆ. ಹರಿಜನರ ಮೇಲೆ ನಡೆದಿರುವ ದೌರ್ಜನ್ಯವನ್ನು ನಾವು ಎಲ್ಲರೂ ಖಂಡಿಸಲೇಬೇಕು. ಇವರು ಹರಿಜನರ ಮೇಲೆ ನಡೆದಿರುವ ದೌರ್ಜನ್ಯವನ್ನು ನೋಡಿ ನಾಲ್ಕು ಲಟಾಚಿಟಿ ಏಟು ಹೊಡೆದುಕೊಂಡರೆ ಅದು ದೌರ್ಜನ್ಯ ಆಗುವುದಿಲ್ಲ. ಅದಕ್ಕಿಂತ ಹೀನ ಕೃತ್ಯ ಪ್ರಾಣ ಹಾನಿ ನಡೆದಿದೆ. ಅಲ್ಲಿ ಉಳಿದಿರುವುದು ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕ್ಷಮಿಸಬೇಕು, ಇದು ತಾವು ಹೇಳಿದ ಹಾಗೆ ಮಾನವೀಯತೆ ಮತ್ತು ಹೆಣ್ಣುಮಕ್ಕಳ ಪ್ರಶ್ನೆ. ಆದರೆ ಕೇವಲ ಹರಿಜನ ಜಾತಿಯವಳು ಎಂದು ಹರಿಜನ ಪದವನ್ನು ಪದೇಪದೇ ಉಪಯೋಗಿಸುವುದು ಸರಿಯಲ್ಲ. ನೀವು ನನ್ನ ಕಡೆ ನೋಡಿ ಹೇಳಿದಿರಿ. ಅದಕ್ಕೆ ನಾನು ಹೇಳುತ್ತೇನೆ. ಇದು ಎಲ್ಲರೂ ಖಂಡಿಸತಕ್ಕದ್ದು. ಇದು ಹೆಣ್ಣುಮಕ್ಕಳ ಪ್ರಶ್ನೆ. ಅಂಗನವಾಡಿ ಕೆಲಸದಲ್ಲಿ ಇರತಕ್ಕ ಹೆಣ್ಣುಮಗಳ ಪ್ರಶ್ನೆ, ಅದಕ್ಕಾಗಿ ನಾವು ಎಲ್ಲರೂ ಕೂಡ ಇದನ್ನು ಖಂಡಿಸಬೇಕು. ಇದು ಅನ್‌ಟಚ್ಯಬಿಲಿಟಿ ಕೇಸ್ ಆಗಿ ಯಾವುದೋ ಒಂದು ದೌರ್ಜನ್ಯಕ್ಕೆ ಒಳಪಟ್ಟಿದ್ದಾಗಿದ್ದರೆ ಅದಕ್ಕೆ ಬೇರೆ ರೂಪ ಇರುತ್ತಿತ್ತು. ಇದನ್ನು ನಾವು ಎಲ್ಲರೂ ಖಂಡಿಸಬೇಕು. ಖಂಡನೆ ಮಾಡೋಣ. ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ, ಅವರು ಅದಕ್ಕೆ ಉತ್ತರ ಕೊಡುತ್ತಾರೆ. ದಯವಿಟ್ಟು ನೀವು ಇದನ್ನು ಹರಿಜನರು ಎಂದು ಹೇಳಿ ಹರಿಜನರ ಕಡೆ ಬೊಟ್ಟು ಮಾಡಿ ತೋರಿಸುವ ಅವಶ್ಯಕತೆ ಇಲ್ಲ.

ಶ್ರೀ ಸಿ. ಬೈರೇಗೌಡ : ಇಂತಹ ಘಟನೆ ನಡೆದಾಗ ಅವರ ಮೇಲೆ ಯಾವ ರೀತಿಯ ಛಾಯೆ ಇರಬೇಕೋ ಎಷ್ಟು ಸಿಟ್ಟು ಇರಬೇಕಾಗಿತ್ತೋ, ಎಷ್ಟು ಕೋಪ ಇರಬೇಕಾಗಿತ್ತೋ, ಅದನ್ನು ಅವರ ಮುಖದಲ್ಲಿ ಕಾಣಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಒಬ್ಬನಿಗೆ ಕೋಪ ಬರಬೇಕೇ. Don't talk all this. ಇವರು ಏನು ಮಾಡುತ್ತಿದ್ದಾರೆಂದರೆ ನಮಗೆ ಸಿಟ್ಟು ಬರಬೇಕು. ಅದರಲ್ಲಿ ನೀವೆಲ್ಲರೂ ಶಾಮೀಲು ಎಂದು ಹೇಳಬೇಕಾಗುತ್ತದೆ. All caste Hindus they do this. You tell that, ನೀವು ಹೇಳುತ್ತೀರಿ, ನಮಗೆ ಸಿಟ್ಟು ಬರಬೇಕು ಎಂದು. ನಿಮಗೆ ಏಕೆ? I have to tell like this..

ಶ್ರೀ ಸಿ. ಬೈರೇಗೌಡ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಒಪ್ಪುತ್ತೇನೆ. ಯಾರು ಇದಕ್ಕೆ ಕಾರಣಕರ್ತರು ಅವರಿಗೆ ಹೇಳಲಿ, ಎಲ್ಲರಿಗೂ ಹೇಳಿದರೆ ಅದು ಅವರಿಗೆ ಭೂಷಣ ತರತಕ್ಕ ಮಾತಲ್ಲ.

ಅಧ್ಯಕ್ಷರು : ತಾವು ವಿಷಯಕ್ಕೆ ಬನ್ನಿ.

ಶ್ರೀ ಸಿ. ಬೈರೇಗೌಡ : ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಒಬ್ಬ ಹೆಣ್ಣುಮಗಳು ಯಾವುದೇ ಜಾತಿಯಾಗಿರಬಹುದು ಮತ್ತು ಸಮಾಜದಲ್ಲಿ ಬಡವರಲ್ಲಿ ಬಡವರಾಗಿರತಕ್ಕ ಒಬ್ಬ ದೇವದಾಸಿ ಮಗಳು ಅಂತಹವರನ್ನು ಒಂದು ಸೊತ್ತಾಗಿ ಎಲ್ಲರೂ ಬಳಸಿಕೊಳ್ಳತಕ್ಕ ಹೀನ ಕೃತ್ಯವನ್ನು ಎಸಗಿರುವುದರ ಮೇಲೆ ಸಿಟ್ಟು ಬರಬೇಕು. ಹರಿಜನ ಎಂಬ ದೃಷ್ಟಿಯಿಂದ ನಾನು ಹೇಳಲಿಲ್ಲ. ಸಮಾಜದಲ್ಲಿ ಬಡವರ ಮೇಲೆ ನಮ್ಮ ರಾಜ್ಯದಲ್ಲಿ ನಡೆದಿರುವಂಥ ದೌರ್ಜನ್ಯದ ಬಗ್ಗೆ ಸಿಟ್ಟು ಬರಬೇಕಾಗಿತ್ತು ಎನ್ನತಕ್ಕ ದೃಷ್ಟಿಯಿಂದ ಮಾತ್ರ ನಾನು ಹೇಳಿದ್ದೇನೆಯೇ ವಿನಃ ಕೇವಲ ಹರಿಜನ ಎಂಬ ಒಂದು ಕಾರಣದಿಂದ ಅಲ್ಲ, ಎಂಬುದನ್ನು ಸ್ಪಷ್ಟವಾಗಿ ಹೇಳಲು ಇಷ್ಟ ಪಡುತ್ತೇನೆ. ಇಷ್ಟು ದಿವಸ ಏತಕ್ಕೆ ಸರ್ಕಾರ ಅವರಿಂದ ಏನೂ ವರದಿ ಪಡೆದುಕೊಳ್ಳಲಿಲ್ಲ. ಸರ್ಕಾರಕ್ಕೆ ಯಾವುದೂ ವರದಿ ಬಂದಿಲ್ಲವೇ? ಪತ್ರಿಕೆಗಳಲ್ಲಿ ಬರುವವರೆಗೆ, ಇಲ್ಲಿ ನಾವು ಪ್ರಸ್ತಾಪ ಮಾಡುವವರೆಗೆ ಸರ್ಕಾರದ ಕ್ರಮ ಏನಾಗಿದೆ, ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದು ನಮಗೆ ಯಾರಿಗೂ ಕೂಡ ಗೊತ್ತಿಲ್ಲ. ಡಿ.ವೈ.ಎಸ್.ಪಿ. ಗ್ರೇಡಿನ ಒಬ್ಬ ಹೆಣ್ಣುಮಗಳ ಹತ್ಯೆಯಾಗಿದೆ. ಅದರ ಬಗ್ಗೆ ಸರ್ಕಾರಕ್ಕೆ ವರದಿ ಬಂದಿಲ್ಲವೇ? ಯಾರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಸರ್ಕಾರ ಹೇಳಬೇಕು. ಸರ್ಕಾರದಲ್ಲೂ ಕೂಡ ಈ ಕೃತ್ಯವನ್ನು ಮುಚ್ಚಿ ಹಾಕುವ ಒಂದು ಪ್ರಯತ್ನ ನಡೆದಿದೆ ಎನ್ನುವುದು ಇದು ಒಂದರಿಂದಲೇ ಗೊತ್ತಾಗುತ್ತದೆ. ಆದುದರಿಂದ ಇವತ್ತಿನ ದಿವಸ ಇದರ ವಿಚಾರದಲ್ಲಿ ಸಮಗ್ರವಾದಂಥ ವಿಚಾರಣೆ ಮಾಡಬೇಕಾಗಿರತಕ್ಕಂಥಾದ್ದು ಅತ್ಯವಶ್ಯಕ. ಇದನ್ನು ಸಿ.ಬಿ.ಐ.ನವರು ತನಿಖೆ ಮಾಡಬೇಕಾಗಿರುವುದು ಅವಶ್ಯಕತೆ ಇದೆ. ಅಷ್ಟೇ ಅಲ್ಲದೆ, ಈ ಕೃತ್ಯವನ್ನು ಮುಚ್ಚಿ ಹಾಕುವುದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ, ಅವರು ಮೇಲ್ಮಟ್ಟದಲ್ಲೇ ಇರಬಹುದು, ಅಥವಾ ಕೆಳಮಟ್ಟದಲ್ಲೇ ಇರಬಹುದು. ಅವರನ್ನು ಪತ್ತೆ ಹಚ್ಚಬೇಕಾದಂತಹ ಅವಶ್ಯಕತೆ ಇದೆ. ಆದುದರಿಂದ, ದಯವಿಟ್ಟು ತಾವು ಸದನದ ಸಮಿತಿಯನ್ನು ರಚನೆ ಮಾಡಬೇಕು ಎಂದು ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಸನ್ಮಾನ್ಯ ಅಧ್ಯಕ್ಷರೇ, ನಾನು ನೀಡಿದಂತಹ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡುತ್ತಾ, ಇವತ್ತಿನ ದಿವಸ ಸಂಯುಕ್ತ ಕರ್ನಾಟಕ ಮತ್ತು ಪ್ರಜಾವಾಣಿ ಪತ್ರಿಕೆಗಳನ್ನು ಇಡೀ ರಾಜ್ಯ ಜನತೆಯ ಪರವಾಗಿ ಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತ್ಯ ಪತ್ರಿಕೆಗಳಲ್ಲಿ ಬರದೇ ಇದ್ದಿದ್ದರೆ ಈ ಕೃತ್ಯ ಮುಚ್ಚಿ ಹೋಗುತ್ತಿತ್ತು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಏಕೆ ನಾನು ಈ ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಎಂದರೆ, ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವ ಪ್ರಕಾರ, ಈ ಹಿಂದೆಯೂ ಈ ನಾಲ್ವರೂ ಅನೇಕ ಬಾರಿ ಇಂತಹ ಕೃತ್ಯ ಮಾಡಿದ್ದು, ಯಾವುದೇ ಸಾವು ಸಂಬಂಧಿಸದ ಕಾರಣ ಬಚಾವಾಗಿ ಹೋದರು' ಎಂದಿದೆ. ಮಾನ್ಯ ಅಧ್ಯಕ್ಷರೇ, ಇದನ್ನು ಅರ್ಥ ಮಾಡಿಕೊಂಡರೆ ಅನೇಕ

ಸಾರಿ ಈ ಕೃತ್ಯ ನಡೆದಿದೆ ಎಂದು ತಿಳಿಯುತ್ತದೆ. ಹಾಗಾದರೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ನಮ್ಮ ಸಮಾಜ ಹೆಣ್ಣನ್ನು ಕೇವಲ ಹೆಣ್ಣು ಎಂದು ನೋಡುವುದಿಲ್ಲ. ಅನೇಕರು ಹೆಣ್ಣನ್ನು ಭೋಗದ ವಸ್ತು ಎಂದು ತೀರ್ಮಾನ ಮಾಡುತ್ತಿದ್ದಾರೆ. ಹೆಣ್ಣನ್ನು ನಾವು ತಾಯಿಯ ಸ್ವರೂಪವೆಂದು ಕಾಣುತ್ತಿದ್ದೇವೆ. ಇಂತಹ ಸಮಾಜದಲ್ಲಿ ಇಂತಹ ಒಂದು ದುಷ್ಕೃತ್ಯ ನಡೆದಿದೆ. ಅನೇಕ ಬಾರಿ ಅದೇ ವ್ಯಕ್ತಿಗಳಿಂದ ಈ ರೀತಿಯ ಅತ್ಯಾಚಾರ ನಡೆದಿದ್ದರೂ ಕೂಡ ಅವರಿಗೆ ರಕ್ಷಣೆ ಸಿಕ್ಕುತ್ತಾ ಇದೆ. ಇವತ್ತಿನ ಈ ವಿಚಾರ ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ನಾವು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಆದರೂ ಅವರಿಗೆ ಎಲ್ಲಿ ರಕ್ಷಣೆ ಸಿಗುತ್ತದೆಯೋ ಎಂದು ನನಗೆ ಭಯವಾಗುತ್ತಿದೆ. ಸರ್ಕಾರ ಇವತ್ತು ಹೇಳಬೇಕಾಗಿತ್ತು. ಇವತ್ತು ಪತ್ರಿಕೆಯಲ್ಲಿ ಯಾವರೀತಿ ಬರಬೇಕಾಗಿತ್ತೆಂದು ನನ್ನ ಅಪೇಕ್ಷೆಯೆಂದರೆ ಗರ್ಭಿಣಿಯ ಮೇಲೆ ಸಾಮೂಹಿಕ ಅತ್ಯಾಚಾರ, ಸಾವು, ಇದರ ಜೊತೆಗೆ ಪಕ್ಕದಲ್ಲಿಯೇ ಅತ್ಯಾಚಾರಿ ಅಧಿಕಾರಿಗಳ ಡಿಸ್‌ಮಿಸ್, ಸಿ.ಬಿ.ಐ. ತನಿಖೆಗೆ ಆಜ್ಞೆ ,- ಮುಖ್ಯಮಂತ್ರಿ ಎಂದು ಬರಬೇಕಾಗಿತ್ತು. ಆದರೆ ಇವತ್ತು ಯಾವ ರೀತಿ ಬಂದಿದೆ ಎಂದರೆ ಅತ್ಯಾಚಾರ, ಸಾವು ಎಂದು ಬಂದಿದೆ. ಮತ್ತು ಸರ್ಕಾರಿ ಅಧಿಕಾರಿಗಳ ಶಾಮೀಲು ಎಂದು ಬಂದಿದೆ. ನಾವು ಇಲ್ಲಿ ಬಂದು ಕೇಳಿದರೆ ಈಗ ಅಧಿಕಾರಿಗಳನ್ನು ಕಳುಹಿಸುತ್ತಿದ್ದೇವೆ ಎಂದು ಸರ್ಕಾರದ ಮಂತ್ರಿಗಳು ಉತ್ತರ ಕೊಡುತ್ತಿದ್ದಾರಲ್ಲ, ಈ ಸರ್ಕಾರಕ್ಕೆ ಏನೆಂದು ಕರೆಯಬೇಕು ಹೇಳಿ. ನಾನು ಇಲ್ಲಿಗೆ ಬಂದಾಗ ಅನೇಕ ಕಾಂಗ್ರೆಸ್ ಮಿತ್ರರೂ ಕೂಡ ಇದನ್ನು ಪ್ರಸ್ತಾಪ ಮಾಡಿದರು. ತುಂಬಾ ಅನ್ಯಾಯ ನಡೆದಿದೆ, ನೀವೆಲ್ಲಾ ಪ್ರಸ್ತಾಪ ಮಾಡಿ, ಅದಕ್ಕೆ ನಾವು ಬೆಂಬಲ ಕೊಡುತ್ತೇವೆ ಎಂದು ಕಾಂಗ್ರೆಸ್ ಮಿತ್ರರೂ ಹೇಳಿದ್ದಾರೆ. ಈ ಸಮಾಜದಲ್ಲಿ ಇದನ್ನು ಯಾರೂ ಕೂಡ ಒಪ್ಪುವುದಕ್ಕೆ ಸಾಧ್ಯ ಇಲ್ಲ. ಕೆಲವು ಅಧಿಕಾರಿಗಳಿಗೆ ಕೆಲವು ರಾಜಕಾರಣಿಗಳಿಗೆ ಸ್ಪಷ್ಟವಾಗಿದೆ, ಹದಬೆ ಹಣದ ಮೋಜು, ಬಡ ಹೆಣ್ಣುಮಕ್ಕಳ ಭೋಗ. ಹದಬೆ ಹಣ ಸಿಗುತ್ತದೆ, ಅನೇಕ ಅಧಿಕಾರಿಗಳಿಗೆ ಅನೇಕ ರಾಜಕಾರಿಣಿಗಳಿಗೆ ಭ್ರಷ್ಟಾಚಾರ, ಲಂಚ ಹೊಡೆಯುತ್ತಾರೆ. ಅದೇ ರೀತಿ ಬಡ ಹೆಣ್ಣುಮಕ್ಕಳು ಭೋಗಕ್ಕೆ ಸಿಗುತ್ತಾರೆ. ಇದಕ್ಕೆ ಕೊನೆ ಯಾವತ್ತು? ನಾವು ಇವತ್ತು ಇದರ ಬಗ್ಗೆ ಕೇವಲ ಚರ್ಚೆ ಮಾಡಿದೆವು. ಸ್ಟೇಟ್‌ಮೆಂಟ್ ಕೊಟ್ಟೆವು , ಸದನದ ಸಮಿತಿ ಮಾಡಬೇಕು, ಸಿ.ಬಿ.ಐ. ತನಿಖೆ ಆಗಬೇಕು ಇದೆಲ್ಲಾ ಆಗಬೇಕು ನಿಜ. ಆದರೆ ಇಡೀ ಸಮಾಜದ ಮುಂದೆ ಈ ರೀತಿಯ ಭ್ರಷ್ಟಾಚಾರಿಗಳಿಗೆಲ್ಲಾ ಶಿಕ್ಷೆಯಾಗಿದೆ ಎನ್ನುವ ದೃಷ್ಟಿಯಿಂದ ಮುಂಚೆ ಈ ಅಧಿಕಾರಿಗಳಿಗೆಲ್ಲಾ ಕೋಳ ಹಾಕಬೇಕು. ಸರ್ಕಾರದ ಅಧಿಕಾರಿಗಳು ಯಾರ್‍ಯಾರು ಇದರಲ್ಲಿ ಭಾಗವಹಿಸಿದ್ದಾರೆ, ಪೋಲೀಸಿನವರು ಇರಬಹುದು, ಅಧಿಕಾರಿಗಳಿರಬಹುದು, ಬೇರೆ ಯಾರಾದರೂ ಇರಬಹುದು, ಅವರಿಗೆ ಕೋಳ ಹಾಕಿ ರಸ್ತೆಯಲ್ಲಿ ಮೆರವಣಿಗೆ ಮಾಡಬೇಕು. ಅದೇ ಬಡ ಹೆಣ್ಣುಮಕ್ಕಳು ಛಿ, ಥೂ ಎಂದು ಅವರ ಮುಖದ ಮೇಲೆ ಉಗಿಯಬೇಕು. ಆಗ ಈ ರೀತಿ ಅತ್ಯಾಚಾರ ಮಾಡಬೇಕಾದರೆ, ಇನ್ನೊಂದು ಹೆಣ್ಣಿನ ಜೊತೆ ಮಲಗಬೇಕಾದರೆ ಬೇರೆ ಜನ ಹೆದರುತ್ತಾರೆ. ಅತ್ಯಾಚಾರ ಮಾಡಿದರೆ ಈ ಸಮಾಜದಲ್ಲಿ ಬಹಿಷ್ಕಾರ ಹಾಕುವವರಿದ್ದಾರೆ, ಉಗಿಯುವವರಿದ್ದಾರೆ , ಸರ್ಕಾರ ಇದಕ್ಕೆ ಬೆಂಬಲ ಕೊಡುವುದಕ್ಕೆ ಸಾಧ್ಯ ಇಲ್ಲ ಎನ್ನತಕ್ಕ ಭಾವನೆ ಬಂದಾಗ ಮಾತ್ರ ಇದು ನಿಲ್ಲುವುದಕ್ಕೆ ಸಾಧ್ಯ. ಆಗ ಮಾತ್ರ ಸ್ವರ್ಗದಲ್ಲಿ ಅನೇಕರು ಏನಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ. ಇಲ್ಲದಿದ್ದರೆ ಈ ಸಮಾಜದಲ್ಲಿ ಖಂಡಿತ ಏನೂ ಕೂಡ ಉಪಯೋಗ ಆಗುವುದಕ್ಕೆ ಸಾಧ್ಯವಿಲ್ಲ. ಸರ್ಕಾರಿ ಅಧಿಕಾರಿಗಳೆಲ್ಲಾ ಓದಿರುವವರು. ಪ್ರಾಣಿಗಳು ಕೂಡ ಈ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವುದಾದರು ಪ್ರಾಣಿಗಳು ರಸ್ತೆಯಲ್ಲಿ ಸಾಮೂಹಿಕವಾಗಿ ಅತ್ಯಾಚಾರ ಮಾಡಿದರೆ ಜನ ಕಲ್ಲು ಹೊಡೆದು ಅವುಗಳನ್ನು ಸಾಯಿಸಿಬಿಡುತ್ತಾರೆ. ಅಥವಾ ದೂರ ಓಡಿಸುತ್ತಾರೆ, ನಾಯಿ ಇರಬಹುದು, ಕತ್ತೆ ಇರಬಹುದು, ನಾವು ಇದನ್ನು ಸಹಿಸುವುದಿಲ್ಲವೆಂದು ಕಲ್ಲಿನಲ್ಲಿ ಹೊಡೆದು ದೂರ ಅಟ್ಟಿಬಿಡುತ್ತೇವೆ. ಈ

ಸಮಾಜದಲ್ಲಿ ನಮ್ಮ ಅಕ್ಕತಂಗಿಯರಿಗೆ ಈ ರೀತಿ ಅತ್ಯಾಚಾರ ಆಗುತ್ತಿರಬೇಕಾದರೆ ನೋಡುತ್ತಾ ಕುಳಿತುಕೊಂಡು, ಇನ್ನು ಇವತ್ತು ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸುತ್ತೇವೆ ಎಂದು ಸರ್ಕಾರ ಹೇಳಿಕೆ ಕೊಡುತ್ತಿರಬೇಕಾದರೆ, ಈ ಸರ್ಕಾರ ಇದೆಯೋ, ಬದುಕಿದೆಯೋ, ಸತ್ತಿದೆಯೋ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ ಇದು ಹೊಸದಲ್ಲ. ನಾವು ಅನೇಕ ಸಂದರ್ಭಗಳಲ್ಲಿ, ಅನೇಕ ಸಿನಿಮಾಗಳಲ್ಲಿ ನೋಡುತ್ತಿರುತ್ತೇವೆ. ಅದರಲ್ಲಿ ತಾವೂ ನೋಡಿರಬಹುದು. ಈ ರೀತಿ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು ಹೆಣ್ಣುಮಕ್ಕಳನ್ನು ಅತ್ಯಾಚಾರ ಮಾಡುವ ಸಂದರ್ಭದಲ್ಲಿ ಅನೇಕ ಯುವಕರಿಗೆ ಸಿಟ್ಟುಬಂದು ಈ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ ಎಂದು ಗೊತ್ತಾದಾಗ ಯುವ ಜಾಗೃತಿ ಆಗುತ್ತದೆ. ಅನೇಕ ಯುವಕರು ಈ ರೀತಿಯ ಅತ್ಯಾಚಾರವನ್ನು ಸಹಿಸುವುದಕ್ಕಾಗುವುದಿಲ್ಲವೆಂದು ಆ ಅಧಿಕಾರಿಗಳನ್ನು, ಆ ರಾಜಕಾರಣಿಗಳನ್ನು ಕೊಲೆ ಮಾಡುವಂಥಾದ್ದನ್ನು ನಾವು ಸಿನೆಮಾಗಳಲ್ಲಿ ನೋಡಿದ್ದೇವೆ. ಸರ್ಕಾರ ಇದೇ ರೀತಿ ಸುಮ್ಮನೆ ಕುಳಿತರೆ ಈ ಸಮಾಜದಲ್ಲಿ ಬಹಿರಂಗವಾಗಿ ಇದೇ ಪರಿಸ್ಥಿತಿ ಉಂಟಾಗತಕ್ಕ ಸಂದರ್ಭ ಬರುತ್ತದೆ. ಇದು ಖಂಡಿತ ಆಗುತ್ತದೆ. ಅತ್ಯಾಚಾರವನ್ನು ನಾವು ಸಹಿಸುವುದಕ್ಕೆ ಆಗುವುದಿಲ್ಲವೆಂದು ಸಿನಿಮಾಗಳಲ್ಲಿ ಯುವಕರು ಯಾವ ರೀತಿ ಮಾಡುತ್ತಾರೋ ಅದೇ ರೀತಿ ಕೃತ್ಯವನ್ನು ಈ ಸಮಾಜದಲ್ಲಿರುವ ಯುವಕರು ಜಾಗೃತರಾಗಿ ಇಂಥ ಭ್ರಷ್ಟ, ಅತ್ಯಾಚಾರಿ ಅಧಿಕಾರಿಗಳ ವಿರುದ್ದ, ರಾಜಕಾರಣಿಗಳ ವಿರುದ್ಧ ತಿರುಗಿಬಿದ್ದು ಕೊಲೆ ಮಾಡುವಂಥ ಪರಿಸ್ಥಿತಿ ಬರಬಹುದು. ಆದರೆ ಅಲ್ಲಿಯವರೆಗೂ ಈ ಸರ್ಕಾರ ಸುಮ್ಮನಿರಬಾರದು. ಹೆಣ್ಣುಮಕ್ಕಳನ್ನು ರಕ್ಷಣೆ ಮಾಡತಕ್ಕ ಜವಾಬ್ದಾರಿ ಸರ್ಕಾರಕ್ಕೆ ಇದೆ. ಈ ಕೃತ್ಯ ನಡೆದು 23 ದಿವಸಗಳಾಗಿವೆ. ಇಷ್ಟು ದಿವಸವಾದರೂ ಸರ್ಕಾರದಲ್ಲಿ ಕೇವಲ ಬಡಿದಾಟ ನಡೆಯುತ್ತಿದೆಯೇ ಹೊರತು ಈ ಹೆಣ್ಣುಮಕ್ಕಳ ರಕ್ಷಣೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಹೆಣ್ಣುಮಕ್ಕಳ ಬಗ್ಗೆ ತಾತ್ಸಾರ ಮುಂದುವರಿಯುತ್ತಲೇ ಇದೆ. ಅಂಗನವಾಡಿ ಹೆಣ್ಣುಮಕ್ಕಳ ಪರಿಸ್ಥಿತಿ ಈ ರೀತಿ ಇದೆ ಎಂದು ನಾವು ಕಳೆದ 3 ದಿನಗಳಿಂದ ಈ ವಿಧಾನ ಸಭೆಯಲ್ಲಿ ಕೂಗುತ್ತಿದ್ದೇವೆ. ಒಬ್ಬ ಅಂಗನವಾಡಿ ಹೆಣ್ಣುಮಗಳಿಗೆ ಈ ರೀತಿ ಆಗಿರುವುದನ್ನು ನೋಡಿದರೆ ಯಾರುತಾನೆ ಅಂಗನವಾಡಿ ಕೆಲಸಕ್ಕೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸುವುದಕ್ಕೆ ಇಷ್ಟಪಡುತ್ತಾರೆ? ಸರ್ಕಾರದವರು ಉದ್ಯೋಗವನ್ನು ಕೊಡದಿದ್ದರೂ ಚಿಂತೆ ಇಲ್ಲ, ಬಡತನದಲ್ಲಿದ್ದರೂ ಚಿಂತೆ ಇಲ್ಲ, ಎರಡು ಹೊತ್ತು ಊಟ ಮಾಡುವುದು ಬೇಡ, ಒಂದು ಹೊತ್ತೇ ಎಲ್ಲರೂ ಸೇರಿ ಹಂಚಿಕೊಂಡು ಊಟ ಮಾಡೋಣ, ಇಂಥ ಉದ್ಯೋಗ ಬೇಡ ಎಂದು ಜನ ಹೇಳುತ್ತಾರೆ ಇಂಥಾದ್ದು ಆಗುವುದು ಬೇಡ. ಸರ್ಕಾರ ಯಾವ ಸಮಾಜವನ್ನು ರಕ್ಷಣೆ ಮಾಡಬೇಕೋ, ಯಾವ ಸಮಾಜವನ್ನು ಪೋಲೀಸ್ ಅಧಿಕಾರಿಗಳು ರಕ್ಷಣೆ ಮಾಡಬೇಕಾಗಿದೆಯೋ ಆ ಅಧಿಕಾರಿಗಳಿಂದಲೇ ಇಂಥ ಪ್ರಕರಣಗಳನ್ನು ಮುಚ್ಚಿಹಾಕತಕ್ಕ ಪ್ರಯತ್ನ ನಡೆಯುತ್ತಿದೆ ಎಂದು ಪತ್ರಿಕೆಯಲ್ಲಿ ಬಂದಾಗ ಸರ್ಕಾರ ಏನು ಹೇಳಿಕೆ ಮಾಡಬೇಕಾಗಿತ್ತು ಎಂದರೆ ಖಂಡಿತ ಇವರನ್ನು ಸುಮ್ಮನೆ ಬಿಡುವುದಿಲ್ಲ, ಈಗಾಗಲೇ ಆ ಅಧಿಕಾರಿಗಳನ್ನು ಬಂಧನ ಮಾಡಿದ್ದೇವೆ, ಸಿ.ಬಿ.ಐ. ತನಿಖೆಗೆ ನಾವು ಆದೇಶಕೊಟ್ಟಿದ್ದೇವೆಂಬ ಹೇಳಿಕೆ ನಮಗೆ ಬರಬೇಕಾಗಿತ್ತು. ಪತ್ರಿಕೆ ಬಂದು ಎಷ್ಟು ಹೊತ್ತಾಗಿದೆ. ಬೆಳಿಗ್ಗೆಯಿಂದ ಸರ್ಕಾರ ಏನು ಮಾಡಿದೆ? ವಿಧಾನ ಸಭೆ ಬೆಳಿಗ್ಗೆ 9.30 ಗಂಟೆಗೆ ಪ್ರಾರಂಭವಾಗಿದೆ. ಬೆಳಿಗ್ಗೆ 6 ಗಂಟೆಗೆ ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ಅಂದರೆ ಮೂರುವರೆ ಗಂಟೆಯೊಳಗೆ ಸರ್ಕಾರ ಏನು ಬೇಕಾದರೂ ಕ್ರಮವನ್ನು ತೆಗೆದುಕೊಳ್ಳಬಹುದಿತ್ತು. ಆದರೆ ಇನ್ನೂ ಈಗತಾನೇ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ ಎಂದು ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಿದ್ದಾರಲ್ಲ, ಈ ಸಮಾಜದಲ್ಲಿ ಯಾರೂ ಕೂಡ ಇದನ್ನು ಸಹಿಸುವುದಕ್ಕೆ ತಯಾರಿಲ್ಲ. ಈ ಪ್ರಕರಣದ ಹಿಂದೆ ಅನೇಕ ಪ್ರಭಾವಿ ರಾಜಕಾರಣಿಗಳು

ಇದ್ದಾರೆ. ಅವರ ಹೆಸರನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ನಿಲುವಳಿ ಸೂಚನೆಯನ್ನು ಮಾಡುವುದಕ್ಕೆ ಸಂಪೂರ್ಣ ಅವಕಾಶವನ್ನು ತಾವು ಮಾಡಿಕೊಟ್ಟರೆ ಕೂಲಂಕುಷವಾಗಿ ವಿಷಯವನ್ನು ಬಿಡಿಸಿ ಹೇಳುವುದಕ್ಕೆ ಅವಕಾಶವಾಗುತ್ತದೆ. ನಾನು ಒಂದು ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ತಾನು ಪ್ರಾಮಾಣಿಕವಾಗಿದೆ ಎಂಬುದನ್ನು ಜನತೆಗೆ ತೋರಿಸಬೇಕಾದರೆ ಕೂಡಲೇ ಸಿ.ಬಿ.ಐ. ತನಿಖೆಗೆ ಆಜ್ಞೆ ಮಾಡಬೇಕಾಗುತ್ತದೆ. ಮತ್ತೇ ಈ ಸದನದ ಸಮಿತಿಯನ್ನು ರಚಿಸಿ ಆ ಸ್ಥಳಕ್ಕೇ ಎಲ್ಲರೂ ಹೋಗಿ ಬರಬೇಕಾಗುತ್ತದೆ. ಅಲ್ಲಿ ಹೋಗಿ ತನಿಖೆ ಮಾಡಿ ನಾವು ಸಮಾಜವನ್ನು ರಕ್ಷಣೆ ಮಾಡುವುದಕ್ಕೆ ಇದ್ದೇವೆ, ಅಂಥ ಭ್ರಷ್ಟ, ಅತ್ಯಾಚಾರೀ ಅಧಿಕಾರಿಗಳಿಗೆ, ಅತ್ಯಾಚಾರಿ ಅಧಿಕಾರಿಗಳಿಗೆ ರಕ್ಷಣೆ ಕೊಡುವಂಥ ಪೋಲೀಸ್ ಇಲಾಖೆಗೆ ಖಂಡಿತ ನಾವು ಬೆಂಬಲ ಕೊಡುವುದಿಲ್ಲ. ನಿಮ್ಮ ರಕ್ಷಣೆಗೆ, ಹೆಣ್ಣುಮಕ್ಕಳ ರಕ್ಷಣೆಗೆ ಈ ನಮ್ಮ ಸರ್ಕಾರ ಇದೆ ಎಂಬುದನ್ನು ಜನರಿಗೆ ತೋರಿಸಬೇಕಾದರೆ ಸರ್ಕಾರ ತನ್ನ ದಿಟ್ಟ ಹೆಜ್ಜೆಯನ್ನು ಈಗ ಇಟ್ಟರೆ ಮಾತ್ರ ನಿಮ್ಮ ಬಗ್ಗೆ, ಸರ್ಕಾರದ ಬಗ್ಗೆ ಗೌರವ ಮತ್ತು ನಂಬಿಕೆ ಬರುತ್ತದೆ. ಇದನ್ನು ಬಿಟ್ಟು ಅಲ್ಲಿನ ಸ್ಥಳೀಯ ಅಧಿಕಾರಿಗಳಿಂದ ತನಿಖೆ ಮಾಡಿಸುತ್ತೇವೆಂದು ತಾವು ಹೇಳುವುದಾದರೆ ಈ ಸರ್ಕಾರ ಕೂಡ ಅತ್ಯಾಚಾರಿಗಳಿಗೆ ಬೆಂಬಲ ಕೊಡುವಂಥಾದ್ದು ಎಂದು ಜನರು ನಿಮ್ಮ ಮೇಲೆ ತಿರುಗಿಬೀಳುತ್ತಾರೆ. ಈ ಸರ್ಕಾರ ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸುವುದಲ್ಲದೆ, ಈ ಸದನದ ಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಾಯ ಮಾಡಿ, ಯಾವ ದುಷ್ಟ ಅಧಿಕಾರಿಗಳಿದ್ದಾರೆ ಅವರನ್ನು ಕೂಡಲೇ ಡಿಸ್‌ಮಿಸ್ ಮಾಡಬೇಕು. ಈ ಅತ್ಯಾಚಾರದಲ್ಲಿ ಭಾಗವಹಿಸಿರತಕ್ಕ ಅಧಿಕಾರಿಗಳು, ಪೋಲೀಸ್ ಇಲಾಖೆಯ ಅಧಿಕಾರಿಗಳು ನಿಜವಾಗಿ ವಿದ್ಯಾವಂತರಲ್ಲ, ಅನಾಗರೀಕರು, ಅಯೋಗ್ಯರು, ಇವರನ್ನು ಕೂಡಲೇ ಡಿಸ್‌ಮಿಸ್ ಮಾಡಬೇಕೆಂದು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಕರಿಯಣ್ಣ (ಹೊಳೇಹೊನ್ನೂರು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ನಡೆದಿರತಕ್ಕ ಅತ್ಯಾಚಾರದ ಬಗ್ಗೆ, ದೌರ್ಜನ್ಯದ ಬಗ್ಗೆ ಮಾನ್ಯ ವಿರೋಧಪಕ್ಷದವರಿಗೆ ಎಷ್ಟು ಕಳಕಳಿ ಇದೆಯೋ, ಸರ್ಕಾರಕ್ಕೂ ಕೂಡ ಅಷ್ಟೇ ಕಳಕಳಿ ಇದೆ. ಆದರೆ ಈ ಸರ್ಕಾರ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ಭಾವಿಸುವುದಕ್ಕಿಂತ ಮುಂಚಿತವಾಗಿ ಇಂಥ ಪ್ರಕರಣಗಳು ಆದಾಗ ಇದನ್ನು ಮುಚ್ಚಿಹಾಕುವಂಥ, ಇಂಥ ಹೇಯ ಕೃತ್ಯವನ್ನು ಮಾಡುವಂಥ ಅಧಿಕಾರಿಗಳು ಇನ್ನೂ ಈ ಸಮಾಜದಲ್ಲಿ ಇದ್ದಾರೆ, ಇಂಥವರ ಮೇಲೆ ಕೂಡಲೇ ಬಿಗಿಯಾಗಿ, ಕ್ರೂರವಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ನಿಜವಾಗಿ ಕೇವಲ ಸರ್ಕಾರವೇ ಅಲ್ಲ, ಇಡೀ ಸಮಾಜವೇ ನಾಚಿಕೆಪಡಬೇಕಾದ ಪ್ರಸಂಗ ಬರುತ್ತದೆ. ಇದರಲ್ಲಿ ಎರಡು ವಿಭಾಗ ಇದೆ.

12.15 ಪಿ.ಎಂ.

ಶ್ರೀಮತಿ ಶರಣಮ್ಮ ಎನ್ನುವವರನ್ನು ಏನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೋ ಆ ಅಧಿಕಾರಿಗಳನ್ನು ನಮ್ಮ ಹಿರಿಯರಾದ ಮಲ್ಲಾರಿಗೌಡ ಪಾಟೀಲರು ಹೇಳಿದಂಥ ರೀತಿಯಲ್ಲಿ ಆ ಮೂರು ಜನ ಅಧಿಕಾರಿಗಳ ಫೋಟೋ ಮತ್ತು ಅವರ ಜೊತೆಯಲ್ಲಿರತಕ್ಕಂಥ ಲಾಯರ್ ಏನು ಅಡ್ವಕೇಟ್ ನ್ಯಾಯವನ್ನು ಕಾಪಾಡತಕ್ಕಂಥವರು ಇದ್ದಾರೆ, ಅವರ ಫೋಟೋವನ್ನು ಹಾಕಿ ಪ್ರಕಟನೆ ಮಾಡಿ ಅವರನ್ನು ಕೂಡಲೇ ಅಮಾನತ್ತುಗೊಳಿಸಿ ಡಿಸ್‌ಮಿಸ್‌ಮಾಡಲು ಏನು ಕ್ರಮ

ಕೈಗೊಳ್ಳಬೇಕೋ ಅದನ್ನು ತಕ್ಷಣದಲ್ಲಿ ಮಾಡಬೇಕಾಗುತ್ತದೆ. ಇದು ಒಂದು ಭಾಗ. ಇನ್ನೊಂದು ಕ್ರಮ 23 ದಿವಸಗಳು ಕಳೆದರೂ ಸಹಿತ ಅಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳು ಯಾವುದೇ ಕೇಸನ್ನು ರಿಜಿಸ್ಟರ್ ಮಾಡದೆ ಇರುವುದು.ಇಂಥ ಪೋಲೀಸ್ ಅಧಿಕಾರಿಗಳನ್ನು ಇನ್ನೂ ಸಹಿತ ಇಟ್ಟುಕೊಂಡಿರುವುದು ಸರಿಯಲ್ಲ. ಅತ್ಯಾಚಾರಕ್ಕೆ ಒಳಗಾದವರು ಹರಿಜನರಾದ್ದರಿಂದ ನಾನು ಹೇಳಲೇಬೇಕಾಗುತ್ತದೆ. ನಮ್ಮ ಹಿರಿಯ ಸಚಿವರು ಹೇಳಿದ್ದರೂ ಸಹಿತ ನಾನು ಏತಕ್ಕೆ ಹೇಳಲೇಬೇಕಾಗಿದೆ ಎಂದರೆ, ಹರಿಜನ ಮಹಿಳೆಯ ಮೇಲೆ ಅತ್ಯಾಚಾರ ಮಾಡಿ, ಕೊಲೆ ಮಾಡಿದರೆ ಯಾರೂ ಹೇಳುವವರು, ಕೇಳುವವರು ಇಲ್ಲ, ಅದನ್ನು ನಾವು ಮುಚ್ಚಿಹಾಕಬಹುದು ಎನ್ನತಕ್ಕಂಥ ಧೈರ್ಯ ಆ ಅಧಿಕಾರಿಗಳಿಗೆ ಇದ್ದುದರಿಂದ ಆ ರೀತಿ ಮಾಡಿ 23 ದಿವಸಗಳ ಕಾಲದಿಂದ ಮುಚ್ಚಿಡಲಿಕ್ಕೆ ಸಾಧ್ಯವಾಯಿತು. ಏನೋ ದೈವವಶಾತ್, ಪ್ರಜಾವಾಣಿ ಪತ್ರಿಕೆಯವರು ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯವರು ಪ್ರಚಾರ ಕೊಟ್ಟಿದ್ದರಿಂದ ನಮ್ಮ ಸದನದ ಎಲ್ಲಾ ಮಿತ್ರರೂ ಸಹಿತ ಒಕ್ಕೊರಲಿನಿಂದ ಇದನ್ನು ಬಯಲಿಗೆಳೆಯತಕ್ಕದ್ದು ಮತ್ತು ಅವರ ಬಗ್ಗೆ ಕನಿಕರ ಪಡತಕ್ಕಂಥದ್ದು ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂಬ ಕೂಗು ಬಂತು. ನಿಜವಾಗಿಯೂ ಪತ್ರಿಕೆಯವರಿಗೆ ವಂದನೆಯನ್ನು ಸೂಚಿಸಬೇಕಾಗುತ್ತದೆ. ಆ ಪೋಲೀಸ್ ಅಧಿಕಾರಿಗಳನ್ನು ತತ್‌ಕ್ಷಣ ಅಮಾನತ್‌ಗೊಳಿಸಿ ಬೇರೆ ಅಧಿಕಾರಿಗಳಿಂದ ಎನ್‌ಕ್ವಯರಿ ಮಾಡಿಸಿದರೆ ಮಾತ್ರ ಇದಕ್ಕೆ ನ್ಯಾಯ ಸಿಗುತ್ತದೆ. ಇಲ್ಲದಿದ್ದರೆ ನ್ಯಾಯ ಸಿಗುವುದಿಲ್ಲ. ಈ ಪೋಲೀಸ್ ಅಧಿಕಾರಿಗಳನ್ನು ಯಾವತ್ತೂ ಸಹಿತ ಲಾ ಅಂಡ್ ಆರ್ಡರ್‌ಗೆ ಹಾಕಕೂಡದು ಮತ್ತು ಡಿಸ್‌ಮಿಸ್ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಸ್.ಪಿ. ಸಹಿತ ಇವತ್ತು ಜವಾಬ್ದಾರಿಯಿಂದ ವಂಚಿತರಾಗಿದ್ದಾರೆಂದು ಹೇಳಬೇಕಾಗುತ್ತದೆ. ನಾವು ಈಗಾಗಲೇ ಕಾನೂನನ್ನು ಮಾಡಿದ್ದೇವೆ. ಈ ರೀತಿಯಾಗಿ ಹರಿಜನರ ಮೇಲೆ ಅಟ್ರಾಸಿಟಿ ನಡೆದಾಗ, ಅತ್ಯಾಚಾರ ನಡೆದಾಗ, ಕೊಲೆಯಾದಾಗ ಇದರ ಜವಾಬ್ದಾರಿಯನ್ನು ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ರಕ್ಷಣಾಧಿಕಾರಿಗಳು ಹೊರಬೇಕಾಗುತ್ತದೆ ಎಂದು ಕಾನೂನು ಇದ್ದರೂ ಸಹಿತ, ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು ಇಬ್ಬರೂ ಮೈಮರೆತು 23 ದಿನಗಳಾದರೂ ಇದನ್ನು ಮುಚ್ಚಿರತಕ್ಕಂಥ'ದ್ದು ನಿಜವಾಗಿಯೂ ಸಹಿತ ಆ ಜಿಲ್ಲಾಧಿಕಾರಿಗಳಿಗಾಗಲಿ, ಅಥವಾ ಆ ಜಿಲ್ಲಾ ರಕ್ಷಣಾಧಿಕಾರಿಗಳಿಗಾಗಲಿ ಅವರ ಯೋಗ್ಯತೆಗೆ ಮತ್ತು ಅವರ ಸ್ಥಾನ ಮಾನಗಳಿಗೆ ಗೌರವ ತರತಕ್ಕಂಥದ್ದು ಅಲ್ಲ. ಅದರ ಮೇಲೂ ಸಹ ಕ್ರಮ ಕೈಗೊಳ್ಳಬೇಕು ಹಾಗೂ ಇದಕ್ಕೆ ಒಂದು ಸದನದ ಸಮಿತಿಯನ್ನು ರಚನೆ ಮಾಡಬೇಕು, ಮತ್ತು ತಕ್ಷಣದಲ್ಲಿ ಈ ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೇ, ಈ ಪ್ರಕರಣದಲ್ಲಿ ಮುಖ್ಯವಾಗಿ ಅಧಿಕಾರಿಗಳು ಶಾಮಿಲಾಗಿರುವದರಿಂದ ಆ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಈ ಪ್ರಕರಣಕ್ಕೆ ಮೆರಗು ಕೊಡತಕ್ಕಂಥ ಇಬ್ಬರು ಸಾಕ್ಷಿಗಳು, ಒಂದು ಆ ತಾಯಿ ಮತ್ತು ಎರಡನೆಯದು ಆ ಕನಕಪ್ಪ. ಈ ಇಬ್ಬರಿಗೆ ಮೊದಲು ಸರ್ಕಾರ ರಕ್ಷಣೆಯನ್ನು ಕೊಡಬೇಕು ಮತ್ತು ಈ ಪ್ರಕರಣದಲ್ಲಿ ಶಾಮಿಲಾಗಿರತಕ್ಕಂಥ ವಕೀಲರು, ನ್ಯಾಯವಾದಿಗಳು ಅವರೇನಿದ್ದಾರೆ ಅವರ ಸದನವನ್ನು ರದ್ದುಗೊಳಿಸುವ ವ್ಯವಸ್ಥೆಯನ್ನು ಮಾಡಬೇಕು. ಈ ಸದನದ ಸಮಿತಿಯನ್ನು ರಚನೆ ಮಾಡಬೇಕು.ಮತ್ತು ನ್ಯಾಯಾಂಗದ ತನಿಖೆ ಮಾಡಿ ಈ ಸದನವು ಮುಗಿಯುವುದರೊಳಗಾಗಿ ವರದಿ ಸಲ್ಲಿಸಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು

ಒತ್ತಾಯಪಡಿಸುತ್ತೇನೆ.

* ಡಾ : ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಅತ್ಯಾಚಾರ ನಡೆದಿರುವ ಬಗ್ಗೆ ಇಲ್ಲಿ ಸಾಕಾದಷ್ಟು ಡಿಸ್‌ಕಷನ್ ನಡೆದಿದೆ. ನಾನಾದರೂ ಕೂಡ ಹೇಳತಕ್ಕಂಥದ್ದು ಏನೆಂದರೆ, ಈ ಸಮಾಜದಲ್ಲಿ ಇಂಥ ಅತ್ಯಾಚಾರಗಳು ನಡೆದಂಥ ಸಮಯದಲ್ಲಿ ಪ್ರಾಜ್ಞರಾದಂಥವರು ಯಾರೂ ಕೂಡ ಇದನ್ನು ಸಹಿಸುವುದಿಲ್ಲ. ಸಹಿಸುವುದಕ್ಕೆ ಸಾಧ್ಯವೂ ಇಲ್ಲ. ಸರ್ಕಾರಕ್ಕೆ ಇಲ್ಲಿಯವರೆಗೆ ಏತಕ್ಕೆ ಇದರ ಇನ್‌ಫರ್‌ಮೇಷನ್ ಬರಲಿಲ್ಲವೇ? ಅಥವಾ ಅಲ್ಲಿ ಇರತಕ್ಕಂಥ ಅಧಿಕಾರಿಗಳು ಇದನ್ನು ಮುಚ್ಚಿ ಹಾಕಲಿಕ್ಕೆ ಪ್ರಯತ್ನವನ್ನು ಮಾಡಿದ್ದಾರೆಯೇ ಅಥವಾ ಪಬ್ಲಿಕ್ ಯಾರು ಆ ಸ್ಥಳದಲ್ಲಿ ಇದ್ದರೋ ಅವರೂ ಕೂಡ ಇದರ ಬಗ್ಗೆ ಏನೂ ಕೂಡ ನಡೆಸಲಿಲ್ಲವೇ ಎನ್ನುವ ಬಗ್ಗೆ. ಇವತ್ತು ನಮಗೆ ಪತ್ರಿಕೆಯಲ್ಲಿ ಬಂದಿರುವುದು ಬಿಟ್ಟರೆ ಅದಕ್ಕಿಂತ ಹೆಚ್ಚಿಗೆ ಮಾಹಿತಿ ಇಲ್ಲ. ಆದರೆ ಒಂದು ಮಾತು ಸತ್ಯ. ಇಂಥ ಅತ್ಯಾಚಾರ ಎಲ್ಲೇ ನಡೆದರೂ, ಯಾರ ಮೇಲೆ ನಡೆದರೂ ಕೂಡ ಇದನ್ನು ಸರ್ಕಾರ ಕಠಿಣವಾಗಿ ಅವರಿಗೆ ಶಿಕ್ಷೆಯನ್ನು ವಿಧಿಸತಕ್ಕಂಥ ವಿಚಾರವನ್ನು ಮಾಡಬೇಕು. ಮತ್ತು ಡೆಮಾಕ್ರೆಟಿಕ್ ಸೆಟ್‌ಅಪ್‌ನಲ್ಲಿ ಯಾವ ಒಂದು ಲಾ ಅಂಡ್ ಆರ್ಡರನ್ನು ಮೈನ್‌ಟೈನ್ ಮಾಡುವುದಕ್ಕೆ ಏನೇನು ಕ್ರಮಗಳನ್ನು ಕಾನೂನು ಬದ್ಧವಾಗಿ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಕೂಡಲೆ ಅದಕ್ಕೆ ಸೇರಿದಂಥ ದುಷ್ಕೃತ್ಯ ಮಾಡಿದಂಥ ಅಧಿಕಾರಿಗಳನ್ನು ಸರ್ಕಾರ ತಕ್ಷಣ ಅದಕ್ಕೆ ಬೇಕಾದಂಥ ವ್ಯವಸೆಯನ್ನು ಮಾಡಿ ಅವರನ್ನು ಸಸ್‌ಪೆಂಡ್ ಮಾಡತಕ್ಕಂಥದ್ದು, ಮತ್ತು ಅರೆಸ್ಟ್ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುವುದನ್ನೂ ಒಕ್ಕೊರಲಿನಿಂದ ಈ ಸಭೆ ಒಪ್ಪಿಕೊಳ್ಳುತ್ತದೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೇ, ಈ ಪ್ರಕರಣ ನಡೆದು 23 ದಿವಸಗಳಾಗಿದ್ದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಆ ಅಮಾಯಕ ಹೆಣ್ಣುಮಗಳು ಷೆಡ್ಯೂಲ್ಡ್ ಕ್ಯಾಸ್ಟ್ ಆಗಲಿ ಬೇರೆ ಯಾರೇ ಆಗಲಿ ಆ ಪ್ರಶ್ನೆ ಮಾಡುವುದಿಲ್ಲ. ಇದರಲ್ಲಿ ಶಾಮೀಲಾಗಿರತಕ್ಕವರು ಯಾರೋ ರಾಕ್ಷಸರು ಅಲ್ಲ, ಸಮಾಜ ಘಾತುಕರು ಅಲ್ಲ, ಅವರೆಲ್ಲ ಅಧಿಕಾರಿಗಳು. ಅಧಿಕಾರಿಗಳಾದವರು ಆ ಹೆಣ್ಣುಮಗಳನ್ನು, ಅಂಗನವಾಡಿ ಕಾರ್ಯಕರ್ತೆಯನ್ನು ಕರೆದುಕೊಂಡು ಹೋಗಿ ಗರ್ಭಪಾತ ಮಾಡಿ, ರಕ್ತಸ್ರಾವ ಮಾಡಿ ಸಾವಿಗೀಡು ಮಾಡಿದಂಥ ಪ್ರಕರಣ. ಈ ದೇಶದಲ್ಲಿ ಕೊಲೆ ಮಾಡಿದವರನ್ನು ಅರೆಸ್ಟ್ ಮಾಡಿ, ಸಿ.ಬಿ.ಐ.ನಿಂದ ತನಿಖೆ ಮಾಡಿಸಿ ಕೈಕೋಳ ಹಾಕಿ, ಫೋಟೋ ಹಾಕಿ ಎಂದು ಹೇಳುತ್ತಾರೆ. ನಾನು ಅನೇಕ ಪಾಶ್ಚಿಮಾತ್ಯ ದೇಶಗಳಿಗೆ ಹೋಗಿದ್ದೇನೆ. ಹಿಂದುಳಿದ ರಾಷ್ಟ್ರಗಳಲ್ಲಿ ಅತ್ಯಾಚಾರ ಮಾಡಿದವರ ಕೈಕಾಲುಗಳನ್ನು ಕತ್ತರಿಸಿ ಹಾಕುತ್ತಾರೆ. ವರದಕ್ಷಿಣೆ ಪಿಡುಗು ಮತ್ತು ಕಳ್ಳತನ ಮಾಡಿದವರಿಗೆ ಕ್ರೂರ ಶಿಕ್ಷೆ ಕೊಡುತ್ತಾರೆ.ಆದ್ದರಿಂದ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದು ಏನೆಂದರೆ, ಈ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಅನೇಕ ಬದಲಾವಣೆ ಮಾಡಬೇಕಾಗುತ್ತದೆ. ವಿಚಾರಣೆ ಮಾಡಬೇಕೆಂದರೆ, ಆ ಹೆಣ್ಣುಮಕ್ಕಳನ್ನು ಸುಟ್ಟುಹಾಕುವುದರಿಂದ ಎವಿಡೆನ್ಸ್ ಕೂಡ ಸಿಗುವುದಿಲ್ಲವೆಂದು ಮಾಡಿದ್ದಾರೆ.ನಾಳೆ ಕೋರ್ಟಿಗೆ ಹೋದರೆ ಎವಿಡೆನ್ಸ್ ಇಲ್ಲ, ಆದುದರಿಂದ ಇವರನ್ನೆಲ್ಲ ಬಿಡುಗಡೆ ಮಾಡುತ್ತೇವೆಂದರೆ ಅವರು ಮೀಸೆ ತಿರುವಿಕೊಂಡು ಬರುತ್ತಾರೆ. ಇದು ಒಂದೇ ಅಲ್ಲ, ವರದಕ್ಷಿಣೆ ಪಿಡುಗಿಗೆ ಎಷ್ಟು ಜನ ಹೆಣ್ಣುಮಕ್ಕಳು ಪ್ರತಿನಿತ್ಯ ಬಲಿಯಾಗುತ್ತಿದ್ದಾರೆಂಬುದನ್ನು ಪೇಪರ್‌ನಲ್ಲಿ ನೋಡುತ್ತೇವೆ. ಇವರಿಗೆಲ್ಲಾ ಕ್ರೂರ ಶಿಕ್ಷೆ

ಕೊಡಬೇಕು, ತಕ್ಷಣ ವಿಚಾರಣೆ ಮಾಡಬೇಕು, ದಿನಗಟ್ಟಲೆ, ವರ್ಷಗಟ್ಟಲೆ ಮಾಡತಕ್ಕದ್ದು ಅಲ್ಲ. ಹಿಂದುಳಿದ ರಾಷ್ಟ್ರಗಳಾದ ಮುಸ್ಲಿಂ ರಾಷ್ಟ್ರಗಳಲ್ಲಿ ಕೈಕಾಲು ಕತ್ತರಿಸುತ್ತಾರೆ. ಕೆಲವು ಕಡೆ ಕೈಕಾಲು ತಲೆ ಕತ್ತರಿಸುತ್ತಾರೆ. ಈ ಬಗ್ಗೆ ಸೇಠ್ ಸಾಹೇಬರು ಹೇಳಲಿಲ್ಲ. ಈ ಬಗ್ಗೆ ತೀವ್ರವಾಗಿ ಪರಿಶೀಲಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರಲ್ಲಿ ಮುಖ್ಯ ಪಾತ್ರ ಅಧಿಕಾರಿಗಳದ್ದು. ಬೇರೆ ಯಾವ ರಾಕ್ಷಸರೂ ಅಲ್ಲ. ಅಧಿಕಾರಿಗಳು ಹೇಗಿದ್ದಾರೆಂದರೆ, ಬೇಲಿಗೆ ಹೊಲ ಕಾಯಿ ಎಂದರೆ ಬೇಲಿಯೇ ಎದ್ದು ಹೊಲ ಮೇಯಿತು ಅಂದ ಹಾಗೆ - ಈ ರೀತಿ ಅಧಿಕಾರಿಗಳಿಗೆ ಸುಲಭವಾಗಿ ಸಂಬಳ ಬರುತ್ತದೆ, ಜಿಲ್ಲಾ ಪರಿಷತ್ತಿನವರು ಅಷ್ಟೇ, ತಹಶೀಲ್ದಾರರ ಬಗ್ಗೆ ನಾನು ಹೇಳಲಿಲ್ಲ. ತಹಶೀಲ್ದಾರ್ ಇದ್ದರೋ, ಇಲ್ಲವೋ ಗೊತ್ತಿಲ್ಲ, ಅಧಿಕಾರಿಗಳೆಲ್ಲಾ ಸೇರಿಕೊಂಡಿದ್ದಾರೆ. ಅವರಿಗೆ ಒಳ್ಳೆಯ ಸಂಬಳ ಬರುತ್ತದೆ ಮತ್ತು ಕಮಿಷನ್ ಬರುತ್ತದೆ.ಇವರಿಗೆ ಈ ರೀತಿ ಸಿಗುವಾಗ ಹೀಗೆಲ್ಲಾ ನಡೆದುಕೊಳ್ಳುತ್ತಾರೆ. ಇಂಥ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಕೆಲಸದಿಂದ ವಜಾ ಮಾಡಿ, ಕೈಕೋಳ ಹಾಕುವುದಲ್ಲ, ಸೆಂಟ್ರಲ್ ಜೈಲಿನಲ್ಲಿ ಅತಿ ಕ್ರೂರವಾದ ಕೊಠಡಿಯಲ್ಲಿಡಬೇಕಾಗುತ್ತದೆ. ಅಧಿಕಾರಿಗಳೇ ಈ ರೀತಿ ಮಾಡಿದರೆ ರಾಜ್ಯದಲ್ಲಿ ಏನಾಗುತ್ತದೆ, ದೇಶದಲ್ಲಿ ಏನಾಗುತ್ತದೆ. ಪೋಲೀಸ್ ವರಿಷ್ಠ ಅಧಿಕಾರಿಗಳು ಏನು ಮಾಡಿದ್ದಾರೆ, ಇವತ್ತು ವಿಷಯ ಪತ್ರಿಕೆಯಲ್ಲಿ ಬಂದಿದೆ ಅದಕ್ಕೆ ಪತ್ರಿಕೆಯವರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. 23 ದಿವಸಗಳಾಗಿವೆ. ಯಾರೋ ಒಬ್ಬ ಡಿ.ವೈ.ಎಸ್.ಪಿ. ಕಳುಹಿಸುವುದು ಅವರ ತಲೆ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಈ ವರಿಷ್ಠ ಅಧಿಕಾರಿಗಳು ಏನು ಮಾಡುತ್ತಿದ್ದರು. ಇವರು ಬೇರೆ ಏನು ಕೆಲಸ ಮಾಡುತ್ತಾರೆ? ವಿರೋಧ ಪಕ್ಷದ ನಾಯಕರು ಹೇಳಿದರು ನಿಮಗೆ ಎಷ್ಟು ಕಳಕಳಿ ಇದೆ, ಕಾಳಜಿ ಇದೆ ಅಷ್ಟೇ ನನಗೂ ಇದೆ ಎಂದು. ನಾವು ಹೆಣ್ಣುಮಕ್ಕಳನ್ನು ಇಟ್ಟುಕೊಂಡಿದ್ದೇವೆ. ಹೆಣ್ಣುಮಕ್ಕಳನ್ನು ಪಡೆದು ಮೊಮ್ಮಕ್ಕಳಾಗಿದ್ದಾರೆ. ಈ ರೀತಿ ದೇಶದಲ್ಲಿ, ರಾಜ್ಯದಲ್ಲಿ ಆದರೆ ನಾವು ತಲೆ ತಗ್ಗಿಸಬೇಕು. ಈ ಸದನದ ಸಮಿತಿ ಆಗಬೇಕು. ತಕ್ಷಣ ಯಾರಿದ್ದಾರೆ ತಪ್ಪಿತಸ್ಥ ಅಧಿಕಾರಿಗಳು ಅವರನ್ನು ಹಿಡಿಯಬೇಕು, ಏನೋ ಹೇಳಿಕೆ ಕೊಡುತ್ತೇವೆಂದರೆ,ವಿವರ ತರಿಸುತ್ತೇವೆಂದರೆ ಆಗುವುದಿಲ್ಲ. ಈಗಾಗಲೇ ಎವಿಡೆನ್ಸ್ ಮುಚ್ಚಿಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಆದುದರಿಂದ ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ. ಈ ವಿಚಾರದಲ್ಲಿ ಅತೀ ಕಠಿಣವಾದ ಕ್ರಮ ತೆಗೆದುಕೊಳ್ಳದೆ ಹೋದರೆ ರಾಜ್ಯದಲ್ಲಿ ಈ ರೀತಿಯಾದ ವರದಕ್ಷಿಣೆ ಪಿಡುಗು, ಅತ್ಯಾಚಾರಗಳು ಹೋಗುವುದಿಲ್ಲ. ಈ ಸಂದರ್ಭದಲ್ಲಿ ಅತ್ಯಾಚಾರ ನಡೆದಿರತಕ್ಕದ್ದರ ಬಗ್ಗೆ ಒತ್ತಿ ಹೇಳುತ್ತೇನೆ. ಅಧಿಕಾರಿಗಳು ಸೊಕ್ಕು ಬಂದು ಈ ಕೆಲಸ ಮಾಡಿದ್ದಾರೆ.ಯಾರೋ ಒಬ್ಬ ಕುಡುಕ, ಸಮಾಜಘಾತುಕ ಮಾಡಿರತಕ್ಕದ್ದಲ್ಲ. ಆದ್ದರಿಂದ ಮತ್ತೊಮ್ಮೆ ಈ ಮಾತನ್ನು ಒತ್ತಿ ಹೇಳಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯ ಕಳೆದ ಮೂರು ವರ್ಷಗಳಿಂದ ಹಲವಾರು ದುರ್ಬರ ಪ್ರಸಂಗಗಳನ್ನು ಅನುಭವಿಸುತ್ತಾ ಬಂದಿದೆ. ಅದರಲ್ಲೂ ಈಚೆಗೆ ಜಾಸ್ತಿಯಾಯಿತು.

SRI AZZEZ SAIT : Mr. Speaker, I rise to stand for a Point of Order, on the Motion for adjournment of matter of public

importance. Subject to the provisions of these rules, a Motion for adjournment of the business of the House for purpose of discussing a definite matter of urgent public importance may be undertaken with the consent of the Speaker. Sir, we are just at the stage of admission. Notice of an Adjournment Motion shall be given before the commencement of the sitting of the day on which the Motion is perhaps to be made to each of the following, the Speaker, the Minister concerned and the Secretary. If all that has been done, the only part of it is, the Speaker has to stop the discussion and has to take a decision and then tell you whether this Motion has been admitted or not. Before the Motion is adopted, hon.members have already discussed whatever they want? You have taken considerably time of this House and again after admitting the Motion again the same thing will be repeated. Therefore, the time of the House, the seriousness of the matter is very important. Therefore, I request the Chairman, if he has been satisfied with all these discussions uptill now, there are no two opinions on the Opposition side and the ruling side. It has been made very clear that a House Committee is to be appointed and we are all one as far as this matter is concerned. It is a great shame. Whatever it is, women is women and rape in the State has become a common phenomenon. Even in H.D.Kote there was a rape. Therefore, it is high time that the Government should take note of it and appoint a Committee and then the matter is left to you whether you have to admit the Motion or not. Already the material has been given by way of admission, lot of discussion has been made. I want a ruling on this Point of Order.

ಅಧ್ಯಕ್ಷರು : ಈ ವಿಷಯದಲ್ಲಿ ಸದನ ಸೇರುವುದಕ್ಕೆ ಒಂದು ಗಂಟೆ ಮೊದಲು ವಿರೋಧಪಕ್ಷದ ಹಾಗೂ ವಿವಿಧ ಪಕ್ಷಗಳ ಹಿರಿಯರು ಬಂದು ನನ್ನ ಹತ್ತಿರ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಿದಾಗ ನಾನು ಅವರಿಗೆ ಅನುಮತಿಯನ್ನು ಕೊಟ್ಟಿದ್ದೇನೆ. ಅದರ ನಂತರ

ಕೆಲವು ಜನ ರೂಲಿಂಗ್ ಪಾರ್ಟಿಯಿಂದ ಕಾಲಿಂಗ್ ಅಟೆನ್‌ಷನ್ ಒಂದು ಗಂಟೆ ಮೊದಲು ತಂದು ಕೊಟ್ಟಿದ್ದಾರೆ.

SRI AZZEZ SAIT : Admission stage ನಲ್ಲಿ ...

ಅಧ್ಯಕ್ಷರು : ನಾನು ಹೇಳುತ್ತಿದ್ದೇನೆ, ದಯವಿಟ್ಟು ಕೇಳಬೇಕು. ತಾವು ಕುಳಿತುಕೊಳ್ಳಿ. ನಿಲುವಳಿ ಸೂಚನೆಯ ಪ್ರಸ್ತಾವನೆಗೆ ಮೊದಲು ಪ್ರಿಲಿಮಿನರಿ ಸಬ್‌ಮಿಷನ್‌ಗೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಈಗ ವಿಷಯದ ಗಾಂಭೀರ್ಯತೆ ಮತ್ತು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಇದು ದೊಡ್ಡ ಸಮಸ್ಯೆಯೆಂದು ಅರಿತು ನಾನು ಅವರಿಗೆ ಸಾಕಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ಕೊನೆಯಲ್ಲಿ ನಾನು ಸರ್ಕಾರಕ್ಕೆ ಹೇಳುವಷ್ಟರಲ್ಲಿ ಮಾನ್ಯ ಜಾಲಪ್ಪನವರು ಒಂದು ನಿಮಿಷ ಅವಕಾಶ ಕೊಡಿಯೆಂದು ಕೇಳಿದ್ದಾರೆ, ಅದು ಅಷ್ಟಕ್ಕೆ ನಿಂತಿದೆ. ಅದು ಆದನಂತರ ಸರ್ಕಾರ ಏನು ಹೇಳುತ್ತದೆ ಅದರ ಮೇಲೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದೆ, ಕಳೆದ ಎರಡು ಮೂರು ವರ್ಷಗಳಲ್ಲಿ ಈ ಸಮಾಜದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಬಹಳಷ್ಟು ಅನ್ಯಾಯಗಳು, ಡಕಾಯಿತಿಗಳು ಮತ್ತು ಕೊಲೆಗಳು, ಕ್ರೂರ ಕೃತ್ಯಗಳು ನಡೆಯುತ್ತಿವೆ. ಇದಕ್ಕೆ ಮುಖ್ಯಕಾರಣ : ನಮ್ಮ ಪೋಲೀಸ್ ಇಲಾಖೆ. ಈ ಇಲಾಖೆ ಈ ಮೂರು ವರ್ಷಗಳಲ್ಲಿ ಹದಗೆಟ್ಟಷ್ಟು ಯಾವಾಗಲು ಹದಗೆಟ್ಟಿರಲಿಲ್ಲ. ಅವರ ಮೇಲೆ ಹಿಡಿತವಿಲ್ಲ.ಒಂದು ಕಡೆ ಪತ್ರಿಕೆಗಳಲ್ಲಿ ಬರುತ್ತದೆ, ಪೋಲೀಸ್‌ನವರೇ ಅಂದರೆ ಒಬ್ಬ ಇನ್ಸ್‌ಪೆಕ್ಟರ್ ಕೌಂಟರ್‌ಫಿಟ್ ನೋಟ್ ಮಾಡುತ್ತಿದ್ದಾರೆಂದು, ಇನ್ನೊಂದು ಕಡೆ ಪೋಲೀಸರು ಶ್ರೀಗಂಧ ಸಾಗಿಸುತ್ತಿದೆಯೆಂದು ಪತ್ರಿಕೆಗಳಲ್ಲಿ ಬರುತ್ತದೆ. ಇನ್ನೊಂದು ಕಡೆ ಹೇಳುತ್ತಾರೆ, ಪೋಲೀಸ್‌ನವರು ರೌಡಿಗಳಿಗೆ ಮತ್ತು ಡಕಾಯಿತರುಗಳಿಗೆ ಸಪೋರ್ಟ್ ಮಾಡುತ್ತಿದ್ದಾರೆಂದು. ಇವರು ಯಾರ ಮೇಲಾದರೂ ಯಾವತ್ತಾದರೂ ಕ್ರಮ ತೆಗೆದುಕೊಂಡಿದ್ದು ನೀವು ಕೇಳಿದ್ದೀರಾ? ಏನಾಗಿದೆ ಈ ಸರ್ಕಾರಕ್ಕೇ? ಏಕೆ ಅವರ ಮೇಲೆ ಇವರಿಗೆ ಹಿಡಿತವಿಲ್ಲ? ಅವರ ಹಿಡಿತ ಇಲ್ಲದಿದ್ದರೆ ಸರ್ಕಾರ ನಡೆಸುವುದಕ್ಕೆ ಸಾಧ್ಯವೇ ಇವರ ಕೈಯಲ್ಲಿ? ಕಡೆಗೆ ಬರಬರುತ್ತಾ ಗೂಂಡಾಗಳ ರಾಜ್ಯವಾಗುವ ಪರಿಸ್ಥಿತಿಗೆ ಬರುತ್ತಿದೆ. ಈವೊಂದು ವಿಷಯದಲ್ಲಿ 20 ದಿವಸಗಳಾದರೂ ಕೂಡ ಇವತ್ತಿನವರೆಗೂ ಸರ್ಕಾರ ಇವರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಸರ್ಕಾರ ಇದೆಯೇ? ಇವರ ಇಂಟೆಲಿಜೆನ್ಸ್ ಏನು ಮಾಡುತ್ತಿದೆ? ಪೋಲೀಸ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿದೆ ಎನ್ನುವ ಅನುಮಾನ ಬರುತ್ತದೆ. ಆ ಹೆಣ ಸುಡುವಾಗ ಏಕೆ ಸುಟ್ಟರು ಎಂದು ಇವರಿಗೆ ಅನುಮಾನ ಬರಬೇಕಾಗಿತ್ತು. ಅಲ್ಲಿ ಲೋಕಲ್ ಆಫೀಸರ್, ಡಿ.ಸಿ.ಯವರಾಗಲೀ, ಡಿ.ಎಸ್.ಪಿ.ಯವರಾಗಲೀ ಅಥವಾ ಎಸ್.ಪಿ.ಯವರಾಗಲೀ ಇದನ್ನು ಎನ್‌ಕ್ವಯರಿ ಮಾಡಿ ಸಂಬಂಧಪಟ್ಟ ಮಂತ್ರಿಗಳಿಗೆ ಬ್ರೀಫ್ ಮಾಡಬೇಕಾಗಿತ್ತು. ಪೇಪರ್‌ನಲ್ಲಿ ಬರುವವರೆಗೆ ಸುಮ್ಮನೆ ಇದ್ದು, ಪೇಪರ್ ಬಂದ ಮೇಲೆ, ಇದರ ಪ್ರಸ್ತಾಪ ಇಲ್ಲಿ ಬಂದಾಗ ನಾವು ವರದಿಯನ್ನು ತರಿಸಿಕೊಡುತ್ತೇವೆ ಎಂದು ಹೇಳಿದರೆ ಇದು ಜವಾಬ್ದಾರಿ ಸರ್ಕಾರವೇ? ನಾನು ಒಂದು ವರ್ಷ ಗೃಹಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಸೀನಿಯರ್ ಆಫೀಸರ್ಸ್‌ನ್ನು ಕೇಳಿ, ನಾನು ಯಾವರೀತಿ ಕೆಲಸ ಮಾಡಿದ್ದೇನೆ ಎಂದು. ನನ್ನದನ್ನು ನಾನು ಹೇಳಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಆದರೆ ನಾನಾದರೂ ಕೂಡ ನನ್ನ ಹಿಂದಿನ ಅನುಭವವನ್ನು ನೋಡಿದರೆ, ಇವತ್ತಿನ ಪರಿಸ್ಥಿತಿಗೆ ಅದನ್ನು ಹೋಲಿಸಿ ನೋಡಿದಾಗ ಏನನ್ನಿಸುತ್ತದೆ ಎಂದರೆ, ಇವರ ಕೈಯಲ್ಲಿ ಆಡಳಿತ ನಡೆಸುವ ಶಕ್ತಿ ಇಲ್ಲ. ಜೊತೆಗೆ

ಪಾರ್ಟ್‌ಟೈಮ್ ಹೋಮ್ ಮಿನಿಸ್ಟರ್ ಬೇಡ. ಯಾರನ್ನಾದರೂ ಫುಲ್‌ಟೈಮ್ ಹೋಮ್ ಮಿನಿಸ್ಟರ್‌ರನ್ನಾಗಿ ಮಾಡಿ. ಏಕೆಂದರೆ ಅವರು ಇದರ ಕಡೆಗೆ ಗಮನ ಕೊಡುವುದಕ್ಕೆ ಆಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಈ ಪೋಲೀಸ್ ಅಧಿಕಾರಿಗಳು ತುಂಡು ಮಂತ್ರಿಗಳಿಗೆ ಬಂದು ಬ್ರಿಫ್ ಮಾಡುವುದು ಅವರ ಕೈಯಲ್ಲಿ ಸಾಧ್ಯವಾಗಲಿಲ್ಲ. ಏನಿದ್ದರೂ ಹೋಮ್ ಮಿನಿಸ್ಟರ್‌ಗೆ ಬ್ರೀಫ್ ಮಾಡುತ್ತಾ ಕುಳಿತುಕೊಳ್ಳುವುದಿಲ್ಲ. ಹಾಗಾಗಿ ಏನು ಮೂರು-ನಾಲ್ಕು ದಿವಸಗಳಲ್ಲಿ ಈ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿತ್ತು, ಅದನ್ನು 25 ದಿವಸಗಳಾದರೂ ಮಾಡಿಲ್ಲವೆಂದರೆ ಈ ಸರ್ಕಾರ ವಿಫಲವಾಗಿದೆಯೆಂದು ಹೇಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಭಾಷೆಯನ್ನು ಉಪಯೋಗಿಸುವಾಗ ನಾವು ಸ್ವಲ್ಪ ಹೆಚ್ಚು ಕಡಿಮೆ ಉಪಯೋಗಿಸಿರಬಹುದು. ಆದರೆ ಪರಿಸ್ಥಿತಿಯ ಗಂಭೀರತೆಯನ್ನು ನಮ್ಮ ಸೇಠ್ ಸಾಹೇಬರು ಅರ್ಥಮಾಡಿಕೊಳ್ಳಬೇಕು.

ಶ್ರೀ ಅಜೀಜ್ ಸೇಠ್ : ಈ ಗಂಭೀರತೆ ಎಷ್ಟು ಎಂದು ನಾನು ತಿಳಿದುಕೊಂಡಿದ್ದೇನೆ. ನನಗೂ ಐದು ಜನ ಹೆಣ್ಣುಮಕ್ಕಳು ಇದ್ದಾರೆ. ನಾನೇನೂ ದಡ್ಡನಲ್ಲ. ಯಾರಾದರೂ ಹೆಣ್ಣುಮಕ್ಕಳ ಮರ್ಯಾದೆ ಹೋದರೆ ನಮ್ಮ ಹೆಣ್ಣುಮಕ್ಕಳ ಮರ್ಯಾದೆ ಹೋದ ಹಾಗೆ. ಇತ್ತೀಚೆಗೆ ರೇಪ್ ಎನ್ನುವುದು common phenomenon ಆಗಿಬಿಟ್ಟಿದೆ. ಈ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಹೆಗ್ಗಡದೇವನಕೋಟೆಯಲ್ಲಿ ಮಾಡಲಿಲ್ಲವೇನು? ಅದಕ್ಕೆ ಏನು ಮಾಡಿದರು?

ಶ್ರೀ ಆರ್. ಎಲ್. ಜಾಲಪ್ಪ : ನಾನು ಹೇಳಿದ್ದುದು ನಾವು ಭಾಷೆ ಉಪಯೋಗಿಸುವಾಗ ಶ್ರೀ ವಾಟಾಳ್ ನಾಗರಾಜ್ ಆಗಲೀ, ನಾನಾಗಲೀ ಸ್ವಲ್ಪ ಯದ್ವಾತದ್ವಾ ಉಪಯೋಗಿಸಿರಬಹುದು. ಅಷ್ಟೇ ವಿನಹ ಸಮಸ್ಯೆಯ ಗಂಭೀರತೆಯನ್ನು ಹೇಳುವಾಗ ಸ್ವಲ್ಪ ಯದ್ವಾತದ್ವಾ ಆಗಿರಬಹುದು. ಅದಕ್ಕೋಸ್ಕರ ತಾವು ಅಷ್ಟೇನೂ ಸಿಟ್ಟಾಗದೆ, ನೀವು ಹೋಮ್ ಮಿನಿಸ್ಟರ್ ಆಗಿದ್ದಿರಿ, ಇರೆಸ್ಪಾಸಿಬಲ್ ಎಂದೇನು ಮಾತನಾಡುವಾಗ ಹೇಳುತ್ತಾ ಇದ್ದೀರಲ್ಲ, ಅದನ್ನು ಹೇಳಬೇಕಾದ ಅವಶ್ಯಕತೆ ಇರಲಿಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಪ್ರಯತ್ನಪಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಇದು ಒಂದು ಗಹನವಾದ ವಿಚಾರ. ಆದರೂ ತಾವು ಈ ನಿಲುವಳಿ ಸೂಚನೆಗೆ ಅಲೋ ಮಾಡುವುದಿಲ್ಲ ಎಂದು ನನಗೆ ಗೊತ್ತಿದೆ. ಆದರೆ ನಾವು ಹೇಳಬೇಕಾದುದನ್ನು ಹೇಳಿದ್ದೇನೆ. ಇದಕ್ಕೆ ಯಾವ ರೀತಿ ಚರ್ಚೆಗೆ ಅವಕಾಶ ಕೊಡುತ್ತೀರಿ, ಅದನ್ನು ಮಾಡಿ. ಸರ್ಕಾರ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ವರದಿ ತರಿಸುತ್ತೇವೆ ಎಂದರೆ ಇದು ಯಾರೋ ಕೆಲಸಕ್ಕೆ ಬಾರದವರು ಹೇಳುವ ಮಾತಾಗುತ್ತದೆ. ಇದರ ಅಗತ್ಯ ಇಲ್ಲ. ಜವಾಬ್ದಾರಿ ಇರುವ ಸರ್ಕಾರಕ್ಕೆ ಈಗಾಗಲೇ ಗೊತ್ತಿರಬೇಕಾಗಿತ್ತು. ಘಟನೆ ನಡೆದ 24 ಗಂಟೆಯೊಳಗೆ ಇವರ ನೋಟೀಸ್‌ಗೆ ಬರಬೇಕು. ಇನ್ನು ಕೆಲವು ಸಂದರ್ಭಗಳಲ್ಲಿ ಗಹನವಾದ ವಿಚಾರಗಳು ಇದ್ದರೆ ಅರ್ಧಗಂಟೆ ಒಂದು ಗಂಟೆಯೊಳಗೆ ಹೋಮ್ ಮಿನಿಸ್ಟರ್ ಅವರ ಗಮನಕ್ಕೆ ಬರಬೇಕಾಗಿತ್ತು. ಆದ್ದರಿಂದ ಈ ಸಮಸ್ಯೆಯ ಗಂಭೀರತೆಯನ್ನು ಅರಿತು ತಾವು ಚರ್ಚೆಗೆ ಅವಕಾಶ ಕೊಡುತ್ತೀರೆಂದು ತಿಳಿದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ (ಒಳಾಡಳಿತ ರಾಜ್ಯಮಂತ್ರಿ) : ನನ್ನ ಹೇಳಿಕೆಯ ಕನ್ನಡ ವರದಿ ಬಂದಿಲ್ಲ. ಇಂಗ್ಲೀಷಿನಲ್ಲಿದೆ. ಅದನ್ನು ಓದುತ್ತೇನೆ.

"Information has been recieved that on ...

ಶ್ರೀ ಶಿವಾನಂದ್ ಹೆಚ್. ಕೌಜಲಗಿ : ಕನ್ನಡದ್ದು ತರಿಸಿಕೊಳ್ಳಿ, ನಮಗೆ ಇಂಗ್ಲೀಷ್ ಗೊತ್ತಾಗುವುದಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇವರಿಗೆ ಎಷ್ಟು ಸಾರಿ ಹೇಳುವುದು? ನಾವು ಕನ್ನಡಾಭಿಮಾನಿಗಳು, ನಮಗೆ ಕನ್ನಡದ ಬಗ್ಗೆ ಗೌರವ ಇದೆಯೆಂದು ಹೇಳುವ ಸರ್ಕಾರದಲ್ಲಿ ಪ್ರತಿದಿವಸ ಹೀಗಾಗುತ್ತಿದೆ. ಯಾವುದೋ ಟೆಕ್ನಿಕಲ್ ವಿಷಯ ಇರುವ ಹೇಳಿಕೆ ಎಂದರೆ ಸಹಿಸಿಕೊಳ್ಳಬಹುದು. ಆದರೆ ಪ್ರತಿಯೊಂದು ಹೇಳಿಕೆಯನ್ನು ಇಂಗ್ಲೀಷ್‌ನಲ್ಲಿ ಕೊಡುತ್ತೇವೆ ಎಂದು ಹೇಳಿದರೆ ಹೇಗೆ?

ಶ್ರೀ ರಮಾನಾಥ ರೈ : ಈಗ ನಾವು ತರಿಸಿಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಏನು ನಡೆಯುತ್ತಿದೆ ಇಲ್ಲಿ? ಇಂತಹ ಮಹತ್ವವಾದ ವಿಷಯದ ಬಗ್ಗೆ ಏನು ಹೇಳಿಕೆ ಓದುತ್ತೀರಿ, ಅದರ ಪ್ರತಿಗಳಾದರೂ ಬೇಕಲ್ಲ? ಇಂಗ್ಲೀಷೋ, ಕನ್ನಡವೋ, ತೆಲುಗೋ, ಹಿಂದಿಯೋ, ಹಾಳುಬಿದ್ದು ಹೋಗಲಿ. ಯಾವುದಾದರೂ ನಮಗೊಂದು ಪ್ರತಿಯನ್ನು ನಮಗೆ ಕೊಡಿ.

(ಗೊಂದಲ)

ಶ್ರೀ ಬಿ. ಎಸ್.ಯಡಿಯೂರಪ್ಪ : ಹಾಳುಬಿದ್ದು ಹೋಗಿದೆ ನಿಮ್ಮ ಸರ್ಕಾರ. ಎಲ್ಲಿದೆ ನಿಮ್ಮ ಸರ್ಕಾರ. ಒಂದು ಸ್ಟೇಟ್‌ಮೆಂಟ್ ಮಾಡುವಾಗ ಕಾಪಿ ಕೊಡಿ ಎಂದರೆ ಕೊಡುತ್ತಿಲ್ಲ. ಸರ್ಕಾರ ಬದುಕಿದೆಯೋ, ಸತ್ತಿದೆಯೋ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಸುಮಾರು ಎರಡೂವರೆ ಗಂಟೆ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ, ಕೆಲಸಕ್ಕೆ ಬಾರದ ಇಂಗ್ಲೀಷಿನಲ್ಲಿ ಹೇಳಿಕೆ ಕೊಡುತ್ತಿದ್ದೀರಿ. ಈ ವಿಚಾರ ಹೇಳುವುದಕ್ಕೆ ನೀವೂ ಕೂಡ ತೊಂದರೆಯಲ್ಲಿದ್ದೀರಿ, ನಮ್ಮನ್ನೂ ತೊಂದರೆಗೆ ಸಿಕ್ಕಿಸಿದ್ದೀರಿ. ಇವತ್ತು ಸರ್ಕಾರದ ನೀತಿಯನ್ನು ಗಾಳಿಗೆ ತೂರಿದ್ದೀರಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧಿಕಾರಿಗಳಿಗೆ ಸರಿಯಾದ ಕಡಿವಾಣ ಇಲ್ಲದಿದ್ದರೆ, ಇದನ್ನು ಸರ್ಕಾರ ಎಂದು ಕರೆಯುವುದಕ್ಕಾಗುತ್ತದೆಯೇ? ನಮಗೆ ಅದರ ಕಾಪಿ ಇಲ್ಲದೆ, ಸ್ಟೇಟ್‌ಮೆಂಟ್ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದು ಪ್ರಜಾಪ್ರಭುತ್ವದಲ್ಲಿ ಇರತಕ್ಕ ಸರ್ಕಾರವಲ್ಲ, ಇದು ಅಧಿಕಾರಿಗಳ ರಾಜ್ಯ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನಾದರೂ ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ, ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ರಮಾನಾಥ ರೈ ಅವರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ವೈಯುಕ್ತಿಕವಾಗಿ ಆತ್ಮೀಯ ಸ್ನೇಹಿತರು, ಅವರ ಬಗ್ಗೆ ನಮಗೆ ಗೌರವ ಇದೆ. ಆದರೆ, ಉಪ ಮುಖ್ಯಮಂತ್ರಿಗಳು ಈ ದಿವಸ ಸದನದಲ್ಲಿರತಕ್ಕ ಸಂದರ್ಭದಲ್ಲಿ,ಇಂತಹ ಗಹನವಾದ,ಮಹತ್ತರವಾದ ವಿಚಾರದ ಬಗ್ಗೆ ನಾವಾದರೂ ಮಾನ್ಯ ಕೃಷ್ಣರವರಿಂದ ಉತ್ತರವನ್ನು ಬಯಸುತ್ತಿದ್ದೇವೆ. ಆಡಳಿತ ಪಕ್ಷದ ಅನೇಕ ಹಿರಿಯ ಸದಸ್ಯರೇನಿದ್ದಾರೆ, ಅವರು ವಿಷಯದ ಗಂಭೀರತೆಯನ್ನು ಹೇಳಿದ್ದಾರೆ. ಇದು ಬಹಳ ದುಃಖಕರವಾದುದು, ನಾವೆಲ್ಲರೂ ಒಪ್ಪಿರತಕ್ಕ ವಿಚಾರ. ಒಂದು ಸದನದ ಸಮಿತಿ ಆಗಬೇಕು, ಇದನ್ನು ಸಿ.ಬಿ.ಐ. ಎನ್‌ಕ್ವೈಯರಿಗೆ ಕಳುಹಿಸಬೇಕು, ಮತ್ತೆ ತಕ್ಷಣ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕು ಎನ್ನತಕ್ಕಂಥ ವಿಚಾರವನ್ನು ನಾವೆಲ್ಲರೂ ಸಹಿತ ಹೇಳಿದ್ದೇವೆ, ಆದರೂ ಕೂಡ ಹೇಳುತ್ತಿದ್ದಾರೆ. ಇವತ್ತು ಸಭಾನಾಯಕರು ಇಲ್ಲದಿರತಕ್ಕಂಥ ಸಂದರ್ಭದಲ್ಲಿ, ಸಂವಿಧಾನಬಾಹಿರವೋ ಸಂವಿಧಾನದಲ್ಲಿ ಇದೆಯೋ, ಇಲ್ಲವೋ ಉಪ ಮುಖ್ಯಮಂತ್ರಿ ಸ್ಥಾನ : ಅದು ಬೇರೆ ವಿಚಾರ. ನಾನು ಮನವಿ ಮಾಡಿಕೊಳುತ್ತಿದ್ದೇನೆ, ದಯಮಾಡಿ ತಾವು ಎದ್ದು ನಿಂತು, ಹೇಳಿಕೆ ಕೊಡಬೇಕು. ಇದು ಪೇಪರಿನಲ್ಲಿ ಬರುವುದಕ್ಕಿಂತ ಹೆಚ್ಚಾಗಿ, ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ಬಹಳ ಮುಖ್ಯ. ನೀವು ಹೋಗುವುದರೊಳಗಾಗಿ ಆಕೆಯ ತಾಯಿಯನ್ನು ಕೊಲ್ಲತಕ್ಕ ಚಾನ್ಸಸ್ ಇದೆಯೆಂದು, ನಾನು ಪ್ರಾರಂಭದಲ್ಲೇ ನಿಲುವಳಿ ಸೂಚನೆ ಮೇಲೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವಾಗ ಹೇಳಿದ್ದೇನೆ. ಆಕೆ ಅಂದರೆ ಕರಿಯವ್ವನಿಗೆ ರಕ್ಷಣೆ ಕೊಡಿ. ಆಕೆಯ ಸಂಬಂಧಿ ಕನಕಯ್ಯನಿಗೂ ರಕ್ಷಣೆ ಕೊಡಿ ಎಂದು ಹೇಳುತ್ತಿದ್ದೇನೆ. ತಾವು ಎದ್ದು ನಿಂತು ಇದರ ಬಗ್ಗೆ ಉತ್ತರ ಕೊಡಬೇಕೆಂದು, ಬಹಳ ದುಃಖದಿಂದ ಈ ಮಾತನ್ನು ಹೇಳುತಿದ್ದೇನೆ. If the Government shows this callous attitude then we have no respect to this Government and we have to adopt other means of protest to show our anger.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ದಯಮಾಡಿ ನಮಗೆ ಅದರ ಕಾಪಿ ಬೇಕು. ಅವರೇನು ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ, ಅದರ ಕಾಪಿ ನಮಗೆ ಕೊಡಿಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ...

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ : ಮಂತ್ರಿಗಳು ಹೇಳಿಕೆ ಓದುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದೇ ನಮಗೆ ಅರ್ಥವಾಗುವುದಿಲ್ಲ. ಕಾಪಿ ಕೊಡಿ ಎಂದು ಕೇಳುವುದಕ್ಕೂ ನಮಗೆ ಅಧಿಕಾರ ಇಲ್ಲವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಪೋಲೀಸರಿಂದ ಒಂದು ವರದಿಯನ್ನು ತರಿಸಿಇಟ್ಟುಕೊಂಡಿದ್ದೀರಿ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ತಾವು ಎರಡೂವರೇ ಗಂಟೆಯ ಚರ್ಚೆಯ ಒಟ್ಟಾರೆ ಸಾರಾಂಶವನ್ನು ಕೇಳಿದ್ದೀರಿ. ನಾವು ಮೂರು ಬೇಡಿಕೆಗಳನ್ನು ಇಟ್ಟಿದ್ದೇವೆ. ಸದನದ ಸಮಿತಿ ಆಗಬೇಕು. ಸಿ.ಬಿ.ಐ. ಎನ್‌ಕ್ವೈಯರಿಗೆ ಒಪ್ಪಿಸಬೇಕು ಮತ್ತು ಅಧಿಕಾರಿಗಳನ್ನು ಕೂಡಲೇ ವಜಾಮಾಡಬೇಕೆನ್ನುವ ಮೂರು ಬೇಡಿಕೆಗಳನ್ನು ನಿಮ್ಮ ಮುಂದಿಟ್ಟಿದ್ದೇವೆ. ಈ ಮೂರು ವಿಚಾರಗಳ ಬಗ್ಗೆ ಸಿ.ಬಿ.ಐ. ತನಿಖೆ, ಅಧಿಕಾರಿಗಳ ವಜಾ, ಸದನದ ಸಮಿತಿ ಈ ಮೂರು ಬೇಡಿಕೆಗಳನ್ನು ನಾವೇನು ಕೇಳಿದ್ದೇವೆ, ಇವುಗಳನ್ನುಒಪ್ಪುವುದು, ಬಿಡುವುದು, ನಿಮಗೆ ಸೇರಿದ್ದುದು. ತಾವು ಪೋಲೀಸಿನವರು ಕೊಟ್ಟಿರತಕ್ಕಂಥ ಹೇಳಿಕೆ, ಓದುವುದಾದರೆ ಅದು ಆರೋಪಗಳ ಪಟ್ಟಿಯಾಗುತ್ತದೆ.

(ಗೊಂದಲ)

* ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ,

ಶ್ರೀ ವಾಟಾಳ್ ನಾಗರಾಜ್ : ವರದಿ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ : ನಾನು ಇನ್ನೂ ಹೇಳಿಕೆ ಮಾಡುತ್ತಿಲ್ಲ. ಅತ್ಯಂತ ಅಮಾನುಷ, ಅತ್ಯಂತ ದಾರುಣವಾದ ಈ ಒಂದು ದುರಂತದ ಬಗ್ಗೆ ಸದನದ ನಾನಾ ಅಂದರೆ ಎಲ್ಲಾ ಭಾಗಗಳಿಂದಲೂ ಕೂಡ ತೀವ್ರ ಸ್ವರೂಪದ ಖಂಡನೆ ಬಂದಿದೆ. ನಾನು ಈ ವಿಷಯ ಪ್ರಾರಂಭವಾದ ಹಂತದಲ್ಲಿ ಇರಲಿಲ್ಲ. ಇವತ್ತು ವಿಧಾನ ಪರಿಷತ್ತಿನಲ್ಲಿ 13 ಪ್ರಶ್ನೆಗಳು ಇದ್ದವು. ಆ ಪ್ರಶ್ನೆಗಳನ್ನು ಮುಗಿಸಿ ನಂತರ ಇಲ್ಲಿ ಈ ಒಂದು ಮಹತ್ವವಾದ ವಿಚಾರ ಪ್ರಸ್ತಾಪಕ್ಕೆ ಬಂದಿದೆ ಎನ್ನುವ ಸುದ್ದಿ ತಿಳಿದ ತಕ್ಷಣ ನಾನು ಈ ಸದನಕ್ಕೆ ಧಾವಿಸಿ ಬಂದೆ. ಆದ್ದರಿಂದ ಮಾನ್ಯ ರೆಡ್ಡಿಯವರು ಮಾನ್ಯ ವಿರೋಧಪಕ್ಷದ ಉಪನಾಯಕರು, ಮಾನ್ಯ ಇತರೆ ಸದಸ್ಯರುಗಳು ಏನೇನು ಅಭಿಪ್ರಾಯಗಳನ್ನು ಸೂಚಿಸಿದರು ಅದರ ಪೂರ್ಣ ಮಾಹಿತಿ ನನಗೆ ಇಲ್ಲ. ಈಗ ತಾನೇ ನನ್ನ ಸ್ನೇಹಿತರಾದ ಶ್ರೀಮಾನ್ ಸಿಂಧ್ಯಾರವರು ಮತ್ತು ವಾಟಾಳ್ ನಾಗರಾಜ್ ಅವರು ಸದನದ ಮುಂದೆ 3 ಪ್ರಶ್ನೆಗಳನ್ನು ಎತ್ತಿದ್ದಾರೆ . ಸದನದ ಸಮಿತಿ ಮಾಡಿ ಸಿ.ಬಿ.ಐ.ಎನ್‌ಕ್ವೈಯರಿ ಮಾಡಿ, ಅಧಿಕಾರಿಗಳನ್ನು ವಜಾ ಮಾಡಿ ಎಂದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ವಜಾ ಮಾಡಿ ಎಂದು ಅಲ್ಲ ಅಮಾನತ್ತಿನಲ್ಲಿಡಿ.

ಶ್ರೀ ಎಸ್. ಎಂ. ಕೃಷ್ಣ : ವಾಟಾಳ್ ನಾಗರಾಜ್‌ರವರು ವಜಾ ಮಾಡಿ ಎಂದರು, ನೀವು ಅಮಾನತ್ತಿನಲ್ಲಿಡಿ, ಎಂದು ಹೇಳುತ್ತಿದ್ದೀರಿ. ಮಾನ್ಯ ಅಧ್ಯಕ್ಷರೇ, ಇಂತಹ ಘಟನೆಗಳು ನಾಗರೀಕ ಸಮಾಜದಲ್ಲಿ ಆಗುವುದಕ್ಕೆ ಅವಕಾಶ ಕೊಡಬಾರದು. ಇದು ಇಡೀ ರಾಜ್ಯಕ್ಕೆ ಬಳಿದಿರತಕ್ಕಂಥ ಒಂದು ಕಪ್ಪು ಮಸಿ. ನಮ್ಮೆಲ್ಲರ ಮುಖಗಳೂ ಇವತ್ತಿನ ದಿವಸ ಕಪ್ಪು ಮಸಿಯಿಂದ ಕೂಡಿದೆ ಎಂದು ನಾನು ಭಾವನೆ ಮಾಡುತ್ತೇನೆ. ಆದ್ದರಿಂದ ಇದಕ್ಕೆ ನಮ್ಮ ರಾಜಕಾರಣದ ಚುಚ್ಚು ಮದ್ದು ಕೊಡತಕ್ಕಂಥಾದ್ದಕ್ಕೆ ಯಾರು ಪ್ರಯತ್ನ ಮಾಡಿಲ್ಲವೆಂದು ನಾನು ಭಾವನೆ ಮಾಡಿ

ಮುಂದುವರಿಯುತ್ತೇನೆ. ಮಾನ್ಯ ಸದಸ್ಯರಾದ ಚಿಕ್ಕೇಗೌಡರು, ಮಾನ್ಯ ಸದಸ್ಯರಾದ ಅಜೀಜ್ ಸೇಠ್‌ರವರು, ಮಾನ್ಯ ಸದಸ್ಯರಾದ ಕರಿಯಣ್ಣನವರು, ತಾವೆಲ್ಲರೂ ಕೂಡ ಇದರ ಬಗ್ಗೆ ತಮ್ಮ ತೀವ್ರವಾದ ಭಾವನೆಗಳನ್ನು ಅಭಿವ್ಯಕ್ತ ಕೊಟ್ಟಿದ್ದಾರೆ. ಈ ವಿಚಾರ ಏನು ನಡೆಯಿತು ಎನ್ನುವುದರ ಬಗ್ಗೆ ಸ್ಪಷ್ಟವಾದ ಮಾಹಿತಿ ನಮಗೆ ಇದುವರೆಗೂ ದಕ್ಕಿರತಕ್ಕಂಥದ್ದು ಮಾತ್ರ. ನಾನು ಸದನಕ್ಕೆ ತಿಳಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಯಾರು ತೀರಿ ಹೋಗಿದ್ದಾರೋ, ಅಥವಾ ಮೃತಪಟ್ಟಿದ್ದಾರೋ ಅವರ ಕಡೆಯಿಂದ ಯಾವ ದೂರು ಕೂಡ ಪೋಲೀಸ್ ಇಲಾಖೆಗೆ ಬಂದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ : ದೂರು ಬರಬೇಕಾಗಿಲ್ಲ. ಇದು ಕಾಗ್ನಿಸಬಲ್ ಕೇಸ್.

ಶ್ರೀ ಎಸ್. ಎಂ. ಕೃಷ್ಣ : ನಾನು ವಿಚಾರಗಳನ್ನು ಸದನದ ಮುಂದೆ ಇಡುತ್ತೇನೆ. ಅನಂತರ ನಾವು ಅದಕ್ಕೆ ಏನು ಹೇಳಬೇಕೋ ತಾವು ಹೇಳಬಹುದು. ನಮ್ಮ ಪೋಲೀಸ್ ಇಲಾಖೆಗೆ ಯಾವ ದೂರು ಬಂದಿಲ್ಲ. ಬರಬೇಕೆಂದು ನಾನು ಹೇಳುತ್ತಿಲ್ಲ. ಅದು ನನ್ನ ವಾದವೂ ಅಲ್ಲ. ನಾನು ಇಂಡಿಯನ್ ಪೀನಲ್ ಕೋಡ್ ತರಿಸಿ ಇಟ್ಟುಕೊಂಡಿದ್ದೇನೆ. ಆದರೆ ಏನು ದುರಂತ ನಡೆದಿದೆ ಇವತ್ತಿನ ದಿವಸ ಪತ್ರಿಕೆಗಳಲ್ಲಿ ಅದರ ಅತಿ ಹೆಚ್ಚಿನ ವಿವರಗಳು ಬಂದಿವೆ. ಆದ್ದರಿಂದ ಸರ್ಕಾರದ ಮಟ್ಟಿಗೆ ಇವತ್ತಿನ ಬೆಳಿಗ್ಗೆವರೆಗೂ ಬಂದಿರತಕ್ಕಂಥ ವಿಚಾರಗಳನ್ನು ಸದನಕ್ಕೆ ಬೇಕಾಗಿರತಕ್ಕಂಥಾದ್ದು. ನಮ್ಮ ಕರ್ತವ್ಯ, ಯಾವುದೇ ಸರ್ಕಾರ ಇರಲಿ ಆ ಸರ್ಕಾರ ಇದೇ ಕೆಲಸ ಮಾಡುತ್ತಿತ್ತು. ಕುಷ್ಟಗಿ ವಿಚಾರ ಈ ಸದನದಲ್ಲಿ ಎತ್ತಿದಾಗ, ನಾವು ತಕ್ಷಣ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ಟೆಲಿಫೋನ್ ಮಾಡಿ, ಸಂಪರ್ಕ ಬೆಳೆಸಿ ಏನು ನಡೆಯಿತು ಎನ್ನುವುದನ್ನು ತರಿಸತಕ್ಕಂಥಾದ್ದು. ಮಾನ್ಯ ಜಾಲಪ್ಪನವರು ಗೃಹಸಚಿವರಾಗಿದ್ದಾಗಲೂ, ಇದೇ ಕೆಲಸ ಮಾಡಿದ್ದಾರೆ. ಇವತ್ತು ಮಾನ್ಯ ವೀರಪ್ಪಮೊಯಿಲಿಯವರು, ಮುಖ್ಯಮಂತ್ರಿಗಳು ಮತ್ತು ಗೃಹಸಚಿವರಾಗಿದ್ದು ಇದೇ ಕೆಲಸ ಮಾಡಿದ್ದಾರೆ. ಸರ್ಕಾರಕ್ಕೆ ಬಂದಿರತಕ್ಕಂಥ ವರದಿ ಪ್ರಕಾರ ದಿನಾಂಕ 10-2-93 ರಂದು ಶ್ರೀಮತಿ ಶರಣವ್ವ 20 ವರ್ಷ, ಮುಡಲಗಟ್ಟಿಹಳ್ಳಿ, ಕುಷ್ಟಗಿ ತಾಲ್ಲೂಕು, ರಾಯಚೂರು ಡಿಸ್ಟ್ರಿಕ್ಟ್, ಆಕೆ ಕಾರ್ಯಕರ್ತೆ, ಬೆಂಚನಟ್ಟಿಹಳ್ಳಿ, ನಿಮ್ನ ವರ್ಗಕ್ಕೆ ಸೇರಿದಂಥ ಮಹಿಳೆ. 3 ಜನ ಸರ್ಕಾರಿ ಅಧಿಕಾರಿಗಳು ಸೇರಿ ಅವರ ಮೇಲೆ ಅತ್ಯಾಚಾರ ನಡೆದಿದೆ.

12.45 ಪಿ.ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಡೆದಿದೆ ಎಂದ ಹಾಗೆ ಆಯಿತು.

ಶ್ರೀ ಎಸ್. ಎಂ. ಕೃಷ್ಣ : ಅತ್ಯಾಚಾರ ನಡೆದಿದೆ ಎನ್ನಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಯಾರು ಹೇಳಿದರು? complaint ಇಲ್ಲವೆಂದ ಮೇಲೆ ಇದು ಹೇಗೆ ಗೊತ್ತಾಯಿತು?

SRI S. M. KRISHNA : It appears ಎನ್ನುವುದಕ್ಕೆ ಕನ್ನಡದಲ್ಲಿ, ಮೇಲ್ನೋಟಕ್ಕೆ, after the alleged rape ಅತ್ಯಾಚಾರ. ಆ ಶರಣವ್ವನನ್ನು ಆಸ್ಪತ್ರೆಗೆ

ಸಾಗಿಸುವ ಮಾರ್ಗ ಮಧ್ಯದಲ್ಲಿ ಆಕೆ ಮೃತ ಪಟ್ಟಳು. ಮತ್ತು ಆಕೆ ಮೃತ ಪಟ್ಟಾದ ಮೇಲೆ without intimating any official agency ಯಾವ ಅಧಿಕೃತವಾದಂಥ official agencyಗೆ ತಿಳಿಸದೆ ಈಕೆಯನ್ನು ಸುಡಲಾಯಿತು. ಇದುವರೆಗೂ ಯಾವ ವಿಧವಾದಂಥ ದೂರಾಗಲೀ ಅಥವಾ ವರದಿಯಾಗಲೀ district police authorityಗೆ ನೇರವಾಗಿ ಬಂದಿಲ್ಲ. ಆದರೂ ಕೆಲವು ಸುಳಿವಿನ ಮೇಲೆ However, on coming to know of the incident ಆ ಸ್ಥಳೀಯ policeನವರು ಒಂದು caseಅನ್ನು Crime No. 3493, ಕುಷ್ಟಗಿ police station ನಲ್ಲಿ Section 376, 201 of I.P.C. ಪ್ರಕಾರ ದಾಖಲು ಮಾಡಿ ಈಗ Investigation ಶುರು ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಡೇಟ್ ಹೇಳಿ.

ಶ್ರೀ ಎಸ್. ಎಂ. ಕೃಷ್ಣ : ಡೇಟ್ ಕೊಡುತ್ತೇನೆ.Additional Superintendent of Police, Raichur.ಅವರ ನೇತೃತ್ವದಲ್ಲಿ investigation ನಡೆಯುತ್ತಿದೆ. Additional Superintendent of Police ಅವರು ಈಗ ಕುಷ್ಟಗಿಯಲ್ಲಿ ಇದ್ದಾರೆ. In charge Superintendent of Police, ಮತ್ತು C.R.E. Directorate, Gulbarga.ಅವರೂ ಸಹ ತನಿಖೆಯನ್ನು ಮುಂದುವರಿಸುತ್ತಿದ್ದಾರೆ. ಅವರು ತನಿಖೆ ಮಾಡಬೇಕೆಂದು D.G.P. ನಿರ್ದೇಶನ ಕೊಟ್ಟಿದ್ದಾರೆ. ಇದು ಸರ್ಕಾರಕ್ಕೆ ಬಂದಿರಕ್ಕಂಥ ವರದಿ. ಆ ವರದಿಯನ್ನು ನಿಮ್ಮ ಜೊತೆಯಲ್ಲಿ ಹಂಚಿಕೊಳ್ಳುತ್ತಿದ್ದೇನೆ. ಈಗ ಈ Crime No. 34/93 ಯಾವಾಗ ಬಂತು ಹೇಗೆ ಎಂದು ಹೇಳುತ್ತೇನೆ. Case register ಆಗಿರುವುದು 5-3-93ರ ಬೆಳಿಗ್ಗೆ ಏಳೂವರೆ ಗಂಟೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಪತ್ರಿಕೆಗಳಲ್ಲಿ ಬಂದಾದ ಮೇಲೆ ದಾಖಲಾಗಿದೆ.
(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಸರ್ಕಾರಕ್ಕೆ ಗೌರವ ಇದ್ದರೆ ಕೂಡಲೇ ರಾಜಿನಾಮೆ ಕೊಡಲೇ ಬೇಕು, ಬೇರೆ ಗತ್ಯಂತರವೇ ಇಲ್ಲ.
(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಬಂದಾದ ಮೇಲೆ ಇವರು ದಾಖಲು ಮಾಡಿಕೊಂಡಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮರ್ಯಾದೆ ಇದ್ದರೆ ರಾಜೀನಾಮೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ-ಮುಖ್ಯ ಮಂತ್ರಿಯವರ

ಬಗ್ಗೆ ನಮಗೆ ಅಪಾರವಾದ ಗೌರವವಿದೆ. ನಾವು ಇಲ್ಲಿ ಯಾರ ಬಗ್ಗೆಯೂ ಕೂಡ ವೈಯಕ್ತಿಕವಾಗಲಿ, ರಾಜಕೀಯವಾಗಲೀ, ನಾವು ಮಾತನಾಡುತ್ತಾ ಇಲ್ಲ. ಇವೊತ್ತು ಅವರ ಹೇಳಿಕೆಯ ಪ್ರಕಾರ ಅಲ್ಲಿ ದೂರನ್ನು ಯಾವಾಗ ದಾಖಲೆ ಮಾಡಿಕೊಂಡಿದ್ದಾರೆ ಅಂದರೆ, 5-3-1993 ರಂದು ಅಂದರೆ ಇವತ್ತು ನಾವು ಇಲ್ಲಿ ಚರ್ಚೆಗೆ ಪ್ರಾರಂಭಮಾಡಿದ ನಂತರ, ಪತ್ರಿಕೆಗಳಲ್ಲಿ ಬಂದ ನಂತರ ಮಾಡಿಕೊಂಡಿದ್ದಾರೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಒತ್ತಾಯ ಪಡಿಸುವುದೇನೆಂದರೆ, ಸರ್ಕಾರದವರು ಇನ್ನು ಮುಂದೆ ಯಾವುದೇ ಹೇಳಿಕೆಗಳನ್ನು ಕೊಡುವ ಬದಲು, ಈ ಕೂಡಲೇ, ಇಡೀ ಸರಕಾರ ರಾಜೀನಾಮೆ ಕೊಡಬೇಕು. ಇದೊಂದೇ ನಮ್ಮ ಬೇಡಿಕೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಸನ್ಮಾನ್ಯ ಉಪ-ಮುಖ್ಯಮಂತ್ರಿಯವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ತಾವುಗಳು ಈಗ ಸ್ಟೇಟ್‌ಮಾಡಬೇಕೆಂದು ನಾವೇನೂ ಬಲವಂತ ಮಾಡಿಲ್ಲ. ಪತ್ರಿಕೆಯಲ್ಲಿ ವಿಚಾರ ಬಂದ ಕೂಡಲೇ ಉನ್ನತ ಪೋಲೀಸ್ ಅಧಿಕಾರಿಗಳು ಅಲ್ಲಿಗೆ ಧಾವಿಸಿ ಹೋಗಬೇಕಾಗಿತ್ತು. ಆದರೆ ಅಂಥ ಘಟನೆ ನಡೆದಿದ್ದರೂ ಸಹ ಇದುವರೆಗೆ ಅದನ್ನು ಮುಚ್ಚಿಹಾಕುವ ಪ್ರಯತ್ನವನ್ನು ಮಾಡಿದರು. ಇದರ ಬಗ್ಗೆ ಬೆಳಿಗ್ಗೆ ಸರಕಾರವಾದರೂ ಒಂದು ಸ್ಟೇಟ್‌ಮೆಂಟನ್ನು ಮಾಡಬೇಕಾಗಿತ್ತು. ನಾನು ಹೇಳುವುದೇನೆಂದರೆ, ಕೇಸ್ ರಿಜಿಸ್ಟರ್ ಆಗಿಲ್ಲ. ಈ ನಂಬರ್‌ನ ಮೇಲೆ ಈಗ ಕೇಸ್ ರಿಜಿಸ್ಟರ್ ಮಾಡುವ ಪ್ರಯತ್ನ ಆಗಿರಬಹುದು. ಇದು ಉದ್ದೇಶಪೂರ್ವಕವಾಗಿ ಇದನ್ನು ಮುಚ್ಚಿಹಾಕುವಂಥ ಒಂದು ಪ್ರಯತ್ನ ಮತ್ತು ಇಂಥ ಗಂಭೀರವಾದಂಥ ವಿಷಯದ ಬಗ್ಗೆ ಉಪ-ಗೃಹಮಂತ್ರಿಯವರಾದರೂ ಸ್ಟೇಟ್‌ಮೆಂಟ್ ಮಾಡಲಿ. ಒಂದು ರಿಟನ್ ಸ್ಟೇಟ್‌ಮೆಂಟ್ ಇಲ್ಲ, ಅಂದರೆ, ಇಂತಹ ಘಟನೆಗಳ ಬಗ್ಗೆ ನಿಮಗೆ ಎಷ್ಟು ಕಾಳಜಿ ಇದೆ ಎಂಬುದು ಅರ್ಥವಾಗುತ್ತದೆ. ನಾಡಿನ ಜನರು ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡಿದ್ದಾರೆ. ಈ ರೀತಿ ಸ್ಟೇಟ್‌ಮೆಂಟ್ ಮಾಡುವುದರಿಂದ ನಿಮ್ಮ ಗೌರವಕ್ಕೆ ಚ್ಯುತಿ ಬರುತ್ತದೆ. ಇದು ಬೇಜವಾಬ್ದಾರಿ ಸರಕಾರವಾಗಿದೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಪತ್ರಿಕೆಗಳಲ್ಲಿ ಬಂದ ಮೇಲೆ, ವಿಧಾನಸಭೆಯಲ್ಲಿ ಚರ್ಚೆ ಪ್ರಾರಂಭವಾದ ಮೇಲೆ ಅಲ್ಲಿ ಕೇಸ್ ಹಾಕಿರುವುದು.

ಶ್ರೀ ಸಿ. ಬೈರೇಗೌಡ : ಪತ್ರಿಕೆಯಲ್ಲಿ ವರದಿಯಾಗಿರುವಂತೆ ಡಿ.ವೈ.ಎಸ್.ಪಿ.ಯವರು ಈ ಹಿಂದೆಯೇ ಸ್ಥಳಕ್ಕೆ ಹೋಗಿದ್ದಾರೆ. ಆದರೆ ಇವೊತ್ತು 7-30 ಗಂಟೆಗೆ ಕೇಸ್ ರಿಜಿಸ್ಟರ್ ಆಗಿದೆ. ಅಂದರೆ ಎಷ್ಟರಮಟ್ಟಿಗೆ ಈ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನ ನಡೆದಿದೆ. ಇಲ್ಲಿ ಪ್ರಕರಣಕ್ಕೆ ರಾಜಕೀಯ ಬೆರೆಸುವ ಪ್ರಯತ್ನವನ್ನು ಯಾರೂ ಮಾಡುತ್ತಿಲ್ಲ ಎಂಬುದನ್ನು ತಾವು ಕೂಡ ಒಪ್ಪಿದ್ದೀರಿ. ಹಾಗೆಯೇ ರಾಜಕೀಯ ಬೆರೆಸುವ ಪ್ರಯತ್ನ ಮಾಡಿಲ್ಲ, ಮಾಡುವುದೂ ಬೇಡ. ಆದರೆ ಇದು ಕಾನೂನಿನ ದುರಪಯೋಗ ಮಾಡತಕ್ಕಂಥ ಪ್ರಯತ್ನ, ಕಾನೂನನ್ನು ಸುಟ್ಟು ಬೂದಿ ಮಾಡತಕ್ಕಂಥ ಪ್ರಯತ್ನ. ಇದು ಯಾರಿಗೂ ಕೂಡ ಭೂಷಣವಾಗತಕ್ಕಂಥಾದ್ದು ಅಲ್ಲ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ-ಮುಖ್ಯಮಂತ್ರಿಯವರು ಸರ್ಕಾರದ ನಿಲುವನ್ನು ದಯಮಾಡಿ ಹೇಳಬೇಕು.

ಶ್ರೀ ಎಸ್. ಎಂ. ಕೃಷ್ಣ : ಈಗ ಸದನ ನನ್ನ ರಾಜೀನಾಮೆಯನ್ನು ಕೇಳುತ್ತಾ ಇದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಿಮ್ಮ ರಾಜೀನಾಮೆ ಅಲ್ಲ...

ಶ್ರೀ ಎಸ್. ಎಂ. ಕೃಷ್ಣ : ಸರಕಾರದ ರಾಜೀನಾಮೆ ಕೊಡಬೇಕೆಂದು ಅಲ್ಲವೆ?

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾವು ಸ್ಪಷ್ಟವಾಗಿ ಮೂರು ವಿಷಯಗಳನ್ನು ಸದನದ ಮುಂದೆ ಅಧ್ಯಕ್ಷರ ಮೂಲಕವಾಗಿ ಇಟ್ಟಿದ್ದೇವೆ. ಈಗ ಒಂದು ಹೇಳಿಕೆಯನ್ನು ಕೂಡ ತಾವುಗಳು ಸದನದ ಮುಂದಿಟ್ಟಿದ್ದೀರಿ : Statement regarding the alleged rape and details of Sharanamma of Madagalli Village. ಇದರ ಪ್ರತಿಯು ಕೂಡ ನಮಗೆ ತಲುಪಿದೆ.I want to submitt something. Kindly allow me to speak.ಈ ಸದನದಲ್ಲಿ ವಿಷಯಗಳ ಬಗ್ಗೆ ಚರ್ಚೆಯಾಗಬೇಕು. ನಾವು ದೀರ್ಘವಾಗಿ ಚರ್ಚೆಮಾಡಿ ಸರ್ಕಾರದ ಮುಂದೆ ಮೂರು ವಿಷಯಗಳನ್ನು ಇಟ್ಟಿದ್ದೇವೆ. ಇದರ ಬಗ್ಗೆ ನಾನು ಮಾನ್ಯ ಉಪ-ಮುಖ್ಯಮಂತ್ರಿಯವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಮೊದಲನೆಯದಾಗಿ ಒಂದು ಸದನದ ಸಮಿತಿಯನ್ನು ಈ ಬಗ್ಗೆ ನೇಮಕಮಾಡಬೇಕೆಂದು ಹೇಳಿದ್ದೇವೆ. ಎರಡನೆಯದಾಗಿ ತಾವುಗಳು ಕೂಡ ಒಪ್ಪಿಕೊಂಡ ಹಾಗೆ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂಬುದನ್ನು ಬಂದ ಇನ್‌ಫಾರ್‌ಮೇಷನ್ ಪ್ರಕಾರ ಹೇಳಿದ್ದೀರಿ. ಆಫೀಸರ್ಸ್ ಇನ್‌ವಾಲ್ವ್ ಆಗಿರುವುದು ನಿಜ ಎಂದು ಆಗಿದೆ. ಅವರನ್ನು ತಕ್ಷಣ ಅಮಾನತ್ತಿನಲ್ಲಿ ಇಡತಕ್ಕಂಥ ವಿಚಾರವನ್ನು ಹೇಳಿ. ಇದು ಎರಡನೆಯದು. It has not come to the notice of the Senior Officers for the last 23 days. ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಈ ವಿಷಯ ಬಂದ ಮೇಲೆ, ನಾವು ಸದನದ ಮೂಲಕ ಸರ್ಕಾರದ ಗಮನಕ್ಕೆ ತಂದ ಮೇಲೆ ಬೆಳಿಗ್ಗೆ ಏಳೂವರೆ ಗಂಟೆ ಎಂದು ಕೇಸ್ ಮಾಡಿರುವ ಸುದ್ದಿ ತಮಗೆ ಬಂದಿದೆ. ಅದರಿಂದಾಗಿ Officers of the top rank are involved in this. ಆದ್ದರಿಂದ ನಾನು ಕೇಳುತ್ತಿರುವುದು ಏನೆಂದರೆ ಈ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕೆಂದು ಮೂರು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ತಾವು ಹೇಳುತ್ತಿರುವುದು ಪತ್ರಿಕೆಗಳಲ್ಲಿ ಬಂದಿದೆ. ನಾನು ಅತ್ಯಂತ ಗೌರವದಿಂದ ಹೇಳುತ್ತಿದ್ದೇನೆ, ತಾವು ಕೊಟ್ಟಿರುವ ಹೇಳಿಕೆಯಲ್ಲಿ ಹೊಸ ಸುದ್ದಿ ಏನೂ ಇಲ್ಲ. ನಿಮಗೆ ನಾವೇ ಹೆಚ್ಚಿನ ಮಾಹಿತಿ ಕೊಟ್ಟಿದ್ದೇವೆ. ಈ ಮೂರು ವಿಚಾರಗಳ ಬಗ್ಗೆ ಸರ್ಕಾರದ ಅಭಿಪ್ರಾಯ ತಿಳಿಸಬೇಕು.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : 15 ದಿವಸಗಳ ಹಿಂದೆ ಇಂತಹುದೇ ಪ್ರಕರಣ ನಡೆದಿದೆ ಎಂದು ನಾಗರೀಕರು ಪೋಲೀಸ್ ಸ್ಟೇಷನ್ನಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಇದು ಪ್ರಮುಖ ವಿಚಾರ. ಇದೇ ಅಧಿಕಾರಿಗಳು ದಿನಂಪ್ರತಿ ನಡೆಸುತ್ತಿದ್ದಾರೆ. ನಾಗರೀಕರು ದೂರು ಕೊಟ್ಟರೆ ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಪಿ.ಎಸ್.ಐ. ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಕಳುಹಿಸಿದ್ದಾನೆ. ಆ ಕಾನ್‌ಸ್ಟೇಬಲ್‌ಗಳನ್ನು ಈ ಅಧಿಕಾರಿಗಳು ಹೊಡೆದು ಕಳುಹಿಸಿದ್ದಾರೆ, ಕೇಸನ್ನು ದಾಖಲೆ ಮಾಡಿಕೊಳ್ಳಲಿಲ್ಲ. ಕಾನ್‌ಸ್ಟೇಬಲ್‌ಗಳು, ನಮಗೆ ಹೊಡೆದಿದ್ದಾರೆ ಎಂದು ಹೇಳಿದ್ದಾರೆ. ಮತ್ತು ಪಿಎಸ್‌ಐ ಕೇಸ್ ದಾಖಲೆ ಮಾಡಲಿಲ್ಲ. ಏಕೆ ದಾಖಲೆ ಮಾಡಲಿಲ್ಲ?

ಎಲ್ಲಾ ಅಧಿಕಾರಿಗಳೂ ಇದರಲ್ಲಿ ಶಾಮೀಲಾಗಿದ್ದಾರೆ. ದೂರು ಕೊಡುವುದು ಬೇಕಾಗಿಯೇ ಇಲ್ಲ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ-ಮುಖ್ಯಮಂತ್ರಿಗಳು ಒಂದು ಕ್ರೈಮ್ ನಂ. 34 / 93 ಇವತ್ತು ರಿಜಿಸ್ಟರಾಗಿದೆ ಎಂದರು. ನಾನು ಅವರಿಂದ ಇಷ್ಟೇ ತಿಳಿಯಬಯಸುತ್ತೇನೆ. ಇದನ್ನು ದೂರು ಕೊಟ್ಟವರು ಯಾರು? ಖಾಸಗಿಯವರು ಯಾರಾದರೂ ದೂರುಕೊಟ್ಟಿದ್ದಾರೆಯೇ? ಪೋಲೀಸಿನವರು ತಾವೇ ದೂರು ದಾಖಲೆ ಮಾಡಿಕೊಂಡಿದ್ದಾರೆಯೇ ಯಾರು ಕೊಟ್ಟಿದ್ದಾರೆ ಸ್ವಾಮಿ? ಅದನ್ನು ಹೇಳಿ ಸಾಕು. ಆಗ ಗೊತ್ತಾಗುತ್ತದೆ ತಾವೇನು ಮಾಡಿದಿರಿ ಎಂದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದು ಪ್ರಶ್ನೆ ಕೇಳುತ್ತೇನೆ. ಉಪ ಗೃಹ ಮಂತ್ರಿಗಳು ಇಂಗ್ಲೀಷ್‌ನಲ್ಲಿರುವ ಈ ಉತ್ತರ ಓದಲು ಪ್ರಾರಂಭ ಮಾಡಿದರು, ಉಪಮುಖ್ಯಮಂತ್ರಿಗಳು ಸದನದಲ್ಲಿರುವಾಗ ಅವರು ಹೇಳಿಕೆ ಕೊಡುವುದು ಕರ್ತವ್ಯ, ತಾವು ಹೇಳಿಕೆ ಕೊಡಬೇಕು ಎಂದು ಹೇಳಿದೆವು. ಆಗ ಉಪ ಮುಖ್ಯಮಂತಿಗಳು ಕೆಲವು ವಿವರ ಕೊಟ್ಟರು. ಆದರೆ ಈ ಸ್ಟೇಟ್‌ಮೆಂಟನ್ನು ಓದಲಿಲ್ಲ. ಆದುದರಿಂದ ಈ ಸ್ಟೇಟ್‌ಮೆಂಟ್ ಸರ್ಕಾರದ ಅಧಿಕೃತ ಹೌದೋ ಅಲ್ಲವೋ ನಮಗೆ ಗೊತ್ತಿಲ್ಲ.ಅದಕ್ಕಾಗಿ ನಾನು ಉಪಮುಖ್ಯಮಂತ್ರಿಗಳನ್ನು ಕೇಳುತ್ತೇನೆ.ಈ ಸ್ಟೇಟ್‌ಮೆಂಟನ್ನು ಒಪ್ಪಿಕೊಳ್ಳುವುದಾದರೆ ಓದಿ ಆಮೇಲೆ ನಾವು ಕ್ಲಾರಿಫಿಕೇಶನ್ ಕೇಳುತ್ತೇವೆ, ಇದು ಅಧಿಕೃತ ದಾಖಲೆಗೆ ಹೋಗಬೇಕು. ಅವರು ಹೇಳಬೇಕು.

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ : ಉಪ ಮುಖ್ಯಮಂತ್ರಿಗಳಿಗೆ ಏನು ಹೇಳಬೇಕೋ ಅದನ್ನು ಹೇಳಲು ಅವಕಾಶ ಮಾಡಿಕೊಡಿ.

ಶ್ರೀ ಎಸ್. ಎಂ. ಕೃಷ್ಣ : ನನ್ನಲ್ಲಿ ತತ್‌ಕ್ಷಣದಲ್ಲಿ ಸಿಕ್ಕಿದ ಮಾಹಿತಿಗಳನ್ನು ಸದನಕ್ಕೆ ಒಪ್ಪಿಸಿದ್ದೇನೆ. ಮಾನ್ಯ ಏಕಾಂತಯ್ಯನವರು ದೂರು ಕೊಟ್ಟವರು ಯಾರು ಎಂದು ಕೇಳಿದ್ದಾರೆ. ಯಾರೂ ದೂರು ಕೊಟ್ಟಿಲ್ಲ. ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಪತ್ರಿಕೆಗಳು ಏನು ವರದಿ ಮಾಡಿದ್ದಾರೋ ಅದರ ಆಧಾರದ ಮೇಲೆ..

ಶ್ರೀ ಹೆಚ್. ಏಕಾಂತಯ್ಯ : ಅದಲ್ಲ, Is it on the basis of the Newspaper reports or suo moto by the Police?

SRI S. M. KRISHNA : Suo moto by the Police.

ಶ್ರೀ ಎ. ಕೆ. ಅನಂತಕೃಷ್ಣ : ಮಾನ್ಯ ಉಪಮುಖ್ಯಮಂತ್ರಿಯವರಿಗೆ ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಎಸ್. ಎಂ. ಕೃಷ್ಣ : ನಾನು ಸ್ಟೇಟ್‌ಮೆಂಟ್ ಕೊಟ್ಟಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಸ್ಟೇಟ್‌ಮೆಂಟ್ ಅನ್ನು ಸರ್ಕಾರದ ಪರವಾಗಿ ಒಪ್ಪಿಕೊಳ್ಳುತ್ತೀರೋ ಇಲ್ಲವೋ ಹೇಳಿ.

ಶ್ರೀ ಎಸ್. ಎಂ. ಕೃಷ್ಣ : ನಾನು ಹೇಳಿದ ವಿಚಾರಗಳಿಗೂ ತಾವು ಕೈಯಲ್ಲಿ ಏನು ಇಟ್ಟುಕೊಂಡಿದ್ದೀರಿ ಅದು ವಿಭಿನ್ನವಾಗಿಲ್ಲ. ಅದರಲ್ಲಿರತಕ್ಕಂಥದ್ದನ್ನು ಕನ್ನಡದಲ್ಲಿ ಮಾಹಿತಿ ಇಲ್ಲ ಎಂದು ಹೇಳಿದ್ದರು, ಅದನ್ನು ಕನ್ನಡದಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡಿದೆ ಅಷ್ಟೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಹೇಳಿಕೆ ಸರ್ಕಾರದ ಹೇಳಿಕೆಯೇ?

ಶ್ರೀ ಕೆ. ಹೆಚ್. ರಂಗನಾಥ್ : ಅವರು ಹೇಳುತ್ತಿದ್ದಾರೆ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ನೀವು ಏನು ಸ್ವಾಮಿ ಹೇಳುವುದು. ಕ್ಲಾರಿಫಿಕೇಷನ್ ಕೇಳುವ ಅಧಿಕಾರ ನನಗೆ ಇದೆ.ಇವರು ಏನು ಎದ್ದು ನಿಂತುಕೊಂಡು ಹೇಳುವುದು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಕೇಳಿರುವಂಥ ಈ ಮೂರು ಬೇಡಿಕೆಗಳ ಬಗ್ಗೆ ಸರ್ಕಾರದ ನಿಲುವು ಏನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನಿರ್ಧಾರವನ್ನು ತಾವು ಪ್ರಕಟಿಸಿ. ಆಮೇಲೆ ಮುಂದಕ್ಕೆ ಹೋಗೋಣ.

ಶ್ರೀ ಎ. ಕೆ. ಅನಂತಕೃಷ್ಣ : ಉಪಮುಖ್ಯಮಂತ್ರಿಗಳು ನಿಂತುಕೊಂಡು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ಕೇಳುವುದಕ್ಕೆ ತಾಳ್ಮೆ ಬೇಡವೇ?

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಸಾಂದರ್ಭಿಕ ಸಾಕ್ಷಿಗಳ ಪ್ರಕಾರ ಈ ವಿಚಾರವನ್ನು ನೋಡಿದಾಗ ಮಾನ್ಯ ಏಕಾಂತಯ್ಯನವರು ಏನು ಅನುಮಾನವನ್ನು ವ್ಯಕ್ತಪಡಿಸಿದರು ಆ ಅನುಮಾನವನ್ನು ದೃಢೀಕರಿಸುತ್ತದೆ. ಇವತ್ತು ಬೆಳಿಗ್ಗೆ ಪೇಪರ್‌ಗಳಲ್ಲಿ ಬಂದಮೇಲೆ ಅದನ್ನು ನೋಡಿ ತಕ್ಷಣ ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ ಅನ್ನತಕ್ಕದ್ದು ನಾನು ಹೇಳಿದಂತಹ ಮಾಹಿತಿಯಲ್ಲಿ ಅಡಕವಾಗಿದೆ. ಅದರ ಮೇಲೆ ನೀವು ನಿಮ್ಮ ಇನ್‌ಫರೆನ್ಸ್ ಅನ್ನು ಡ್ರಾ ಮಾಡಬಹುದು. ಈಗ ಪ್ರಶ್ನೆ ಇರತಕ್ಕಂಥದ್ದು, ಎಫ್.ಡಿ.ಆರ್‌ನಲ್ಲಿ ಯಾವ ಹೆಸರುಗಳು ನಮೂದಾಗಿವೆ ಅವರ ಮೇಲೆ ಏನು ಮಾಡಬೇಕು ಎನ್ನತಕ್ಕಂಥದ್ದು, ತಕ್ಷಣ ನಾವು ಮಾಡಬೇಕಾಗಿರತಕ್ಕಂಥ ಕೆಲಸ. Section 376, I.P.C. :

" (e) ; Commits rape of a woman knowing her to be pregnant : or (g) : commits gang rape, shall be punished with regorous

imprisonment for a term which shall not be less than 10 years but which may be for life and shall also be liable to fine. " ಇದು ಬಹಳ ತೀವ್ರವಾದಂತಹ ಅಪರಾಧವಾಗಿದೆ. ಅದ್ದರಿಂದ ತಕ್ಷಣ ಯಾರು 3 ಜನ ಅಧಿಕಾರಿಗಳು ಇದ್ದಾರೆ, ಅವರನ್ನು ಅಮಾನತ್ತಿನಲ್ಲಿಡುತ್ತೇವೆ.

(INTERRUPTIONS)

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳ ಮತ್ತು ನನ್ನ ಪ್ರಶ್ನೆಗಳು ಇದ್ದುವು. ನಾನು ಬೆಳಿಗ್ಗೆ ಪತ್ರಿಕೆಯನ್ನು ನೋಡಿದ ತಕ್ಷಣವೇ ನನ್ನ ಇಲಾಖೆಗೆ ಸಂಬಂಧಪಟ್ಟಂಥ ಒಬ್ಬ ಅಧಿಕಾರಿ ಅಪರಾಧದಲ್ಲಿದ್ದಾನೆಂದು ಇದೆ. ನನ್ನ ಪ್ರಶ್ನೆ ಮುಗಿದ ತಕ್ಷಣ ನಮ್ಮ ಕಾರ್ಯದರ್ಶಿಯವರಿಗೆ, ಇವನು ಯಾರು ನೋಡಿ ಅವನು ಅಗಿದ್ದರೆ ತಕ್ಷಣವೇ ಅವನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಆಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಯಾರನ್ನು ಮುಚ್ಚತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ನಾನು ಮೇಲ್ಮನೆಯಲ್ಲಿ ಇದ್ದೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಈಗಾಗಲೇ ನಾವು ಕಾರ್ಯಾರಂಭ ಮಾಡಿದ್ದೇವೆ. ಹಾಗೆಯೇ ಬೇರೆ ಇಲಾಖೆಗೆ ಸಂಬಂಧಪಟ್ಟಂತೆ ಮಾಡಬೇಕಾಗಿದೆ. ಉಪ ಮುಖ್ಯಮಂತ್ರಿಗಳು ಈಗ ಏನು ಹೇಳಿದರು, ಇಂಡಿಯನ್ ಪೀನಲ್ ಕೋಡ್ ಆ ಅಪರಾಧವನ್ನು ತೀವ್ರವಾಗಿ ಪರಿಗಣಿಸುತ್ತದೆ. ಹಾಗಿರುವುದರಿಂದ ಯಾರೇ ಆಗಲಿ ಅವನನ್ನು ಕಟ್ಟಿಕೊಂಡು ನಮಗೆ ಏನು? ಅದರಲ್ಲಿಯೂ ಕೂಡ ಸರ್ಕಾರೀ ನೌಕರ ಇಂತಹ ಅಪರಾಧದಲ್ಲಿ ಒಳಗಾಗುತ್ತಾನೆಂದು ಹೇಳಿದರೆ ಅವನಿಗೆ ಇನ್ನೂ ಹೆಚ್ಚಿನ ಶಿಕ್ಷೆಯನ್ನು ನಾವು ವಿಧಿಸಬೇಕಾಗುತ್ತದೆ. ಅದನ್ನು ನಾವು ಮಾಡುತ್ತೇವೆಂದು ಹೇಳುತ್ತೇನೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಈಗಾಗಲೇ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಬಸವರಾಜರಾಯರೆಡ್ಡಿ : ಅವರ ಮೇಲೆ ಮರ್ಡರ್ ಕೇಸನ್ನು ಬುಕ್ ಮಾಡಬೇಕಾಗುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಅವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಹೇಳಿ. ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮೊದಲೇ ಹೇಳುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ : ಯಾವುದೇ ಸರ್ಕಾರ ಆಗಲಿ ಇಂತಹ ವಿಚಾರಗಳಲ್ಲಿ ತೀವ್ರ ರೀತಿಯಲ್ಲಿ ಅಂದರೆ ಪ್ರಕ್ರಿಯೆಗಳು ನನ್ನ ಸಹೋದ್ಯೋಗಿಗಳಾದಂತಹ ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದ ಹಾಗೆ ಈಗಾಗಲೇ ನಮ್ಮ ನಮ್ಮ ಡಿಪಾರ್ಟ್‌ಮೆಂಟ್‌ಗಳಿಂದ ಪ್ರಕ್ರಿಯೆಗಳು ಪ್ರಾರಂಭವಾಗಿವೆ. ಒಟ್ಟಾರೆ ಇವತ್ತು ನಮ್ಮ ಸರ್ಕಾರದ ನಿಲುವು ಏನೆಂದರೆ, ಎಫ್.ಐ.ಆರ್.ನಲ್ಲಿ ಯಾರ ಹೆಸರುಗಳು ಬಂದಿವೆ, ಸರ್ಕಾರದ ಅಧಿಕಾರಿಗಳು, ಅವರನ್ನು ತಕ್ಷಣ ಅಮಾನತ್ತಿನಲ್ಲಿಡುತ್ತೇವೆ. ಎರಡನೆಯ ಪ್ರಶ್ನೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಈಗಾಗಲೇ ಕಳುಹಿಸಿದ್ದಾರೆ. ಡಿ.ಐ.ಜಿ.ಯನ್ನು ಕೂಡ ಕಳುಹಿಸಿದ್ದಾರೆ. ತಾವು ಹೇಳುತ್ತಿದ್ದೀರಿ, ಇದನ್ನು ಸಿ.ಬಿ.ಐ.ಗೆ ಕೊಡಿ ಎಂದು. ನಿಮಗೆ ಗೊತ್ತಿದೆ, ಸಿ.ಬಿ.ಐ.ಗೆ ನಾವು ಕಾಗದವನ್ನು ಬರೆದರೆ, ಸಿ.ಬಿ.ಐ.ಅವರಿಗೆ ನೂರಾರು ಕೇಸುಗಳು ಇರುತ್ತವೆ,

ಅವರು ಬೆಂಗಳೂರಿಗೆ ಬಂದು ಇನ್‌ವೆಸ್ಟಿಗೇಷನ್ ಮಾಡಿ ಹಾಗೆ ಮಾಡಿ ಎನ್ನುವುದಕ್ಕಿಂತ ಬದಲಿಗೆ ನಮ್ಮದೇ ಆದಂಥ ಸಿ.ಓ.ಡಿ. ಇದೆ, ಕೋರ್ ಆಫ್ ಡಿಟೆಕ್ಟೀವ್ಸ್ ಇದೆ. ಅದರಲ್ಲಿ ತನಿಖೆ ಮಾಡಲು ಹೇಳುತ್ತೇನೆ. So we will ask the C.O.D. to conduct an enquiry to investigate into this and at the earliast possible of time give us the Report. After these two things, why the House Committee? ಅದರಿಂದ ಪ್ರಯೋಜನ ಏನಾಗುತ್ತದೆಯೇ ತಾವೇ ಯೋಚನೆ ಮಾಡಿ. ತಾವು ಸದನದ ಸಮಿತಿಯನ್ನು ಮಾಡಿ ಎಂದು ಹೇಳಿದರೆ ಅದಕ್ಕೆ ನಾನು ಸಿದ್ದನಿದ್ದೇನೆ. ಆದರೆ ಅದರಿಂದ ಏನು ಪ್ರಯೋಜನವಾಗುತ್ತಿತ್ತು. Let me, before you rise up, with all the honesty at the command of this Government, Let me go on record to say that we shall not do anything to cover up this disgusting incident. Our blood also boils such as yours. ಆದ್ದರಿಂದ ಇದನ್ನು ಮುಚ್ಚಿ ಹಾಕುವ ಪ್ರಶ್ನೆ ಎಲ್ಲಿಂದ ಬಂತು? ನಮ್ಮ ಲೋಕೋಪಯೋಗಿ ಸಚಿವರಿಗೆ ಗೊತ್ತಿಲ್ಲದೇ ಇದ್ದರೂ ಪೇಪರ್‌ನಲ್ಲಿ ಓದಿದ ತಕ್ಷಣ ಅವರು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಇದು ಏನು ತೋರಿಸುತ್ತದೆ ಎಂದರೆ, ಈ ಸರ್ಕಾರದ ಕಳಕಳಿ, ಸರ್ಕಾರದ ಕಮಿಟ್‌ಮೆಂಟ್ to uphold the law and order, to uphold the civilised behaviour among the Police.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಲ್ಲಿ ಇರತಕ್ಕಂಥ ಅಧಿಕಾರಿಯ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಪಿ.ಡಬ್ಲ್ಯೂ.ಡಿ.ಯವರು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಸಂತೋಷ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪೋಲೀಸ್ ಅಧಿಕಾರಿಯವರು ಒಬ್ಬರು ಇದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇವತ್ತು ಕೇಸ್ ರಿಜಿಸ್ಟರ್ ಆಗಿದೆ ಎಂದು ತಾವು ಹೇಳಿದ್ದೀರಿ, ಏತಕ್ಕೆ ಈ ಹಿಂದೆ ರಿಜಿಸ್ಟರ್ ಆಗಲಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಎಸ್. ಪಿ. ಅವರನ್ನು ಸಸ್ಪೆಂಡ್‌ನಲ್ಲಿ ಇಡಬೇಕು. ಇದು ಸಿ.ಬಿ.ಐ. ತನಿಖೆಯಾಗಬೇಕು.

(ಗೊಂದಲ)

ಶ್ರೀ ಕೆ. ಎ. ಈಶ್ವರಪ್ಪ : 23 ದಿನಗಳಾದ ಮೇಲೆ ಈ ಮಾತನ್ನು ಹೇಳುತ್ತಿದ್ದೀರಿ. ಸಿ.ಓ.ಡಿ. ತನಿಖೆಯಾಗಿ ಯಾರಿಗೂ ಶಿಕ್ಷೆಯಾಗಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಹಿಳೆಯರಿಗೆ ರಕ್ಷಣೆ ಕೊಡುವುದಕ್ಕೆ ತಾವು ಸಿದ್ಧರಿಲ್ಲ. ಇದನ್ನು ಸಿ. ಬಿ. ಐ. ತನಿಖೆಗೆ ಒಳಪಡಿಸುವುದಿಲ್ಲ. ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ಧರಣಿ ಕುಳಿತುಕೊಳ್ಳುತ್ತೇವೆ.

(ಬಿ. ಜೆ. ಪಿ. ಸದಸ್ಯರುಗಳು ಸದನದ ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು. ಹಾಗೂ ಪಕ್ಷೇತರ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಕೂಡ ಬಾವಿಯಲ್ಲಿ ಬಂದು ಕುಳಿತರು.)

ಶ್ರೀ ಸಿ. ಬೈರೇಗೌಡ : ಇವತ್ತು ಪತ್ರಿಕಾ ವರದಿಗಳನ್ನು ಆದರಿಸಿ ಕೇಸನ್ನು ರಿಜಿಸ್ಟರ್ ಮಾಡಿದ್ದೀರಿ. ಅದೇ ಪತ್ರಿಕಾ ವರದಿಯಲ್ಲಿ ಏನು ಹೇಳುತ್ತಾರೆ ಎಂದರೆ ಡಿ.ವೈ.ಎಸ್.ಪಿ.ಯವರು ಸ್ಥಳಕ್ಕೆ ಹೋಗಿದ್ದರು ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಅವರು ಅಲ್ಲಿರತಕ್ಕಂಥ ಸ್ಥಳೀಯ ಅಧಿಕಾರಿಗಳನ್ನು ಕರೆದು ಕೇಸನ್ನು ರಿಜಿಸ್ಟರ್ ಮಾಡಿ ಎಂದು ಹೇಳಿ ವಾಪಸ್ ಬಂದರು. ಇಷ್ಟು ಮಾಡಿರತಕ್ಕಂಥ ಅವರ ಮೇಲೆ ಏತಕ್ಕೆ ಇವತ್ತಿನ ದಿವಸ ಕ್ರಮ ತೆಗೆದುಕೊಳ್ಳುವುದಿಲ್ಲ? ಏನು ಈಗ ತಾವು ಮೂರು ನಾಲ್ಕು ಜನರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಿ. ಆ ಡಿವೈಎಸ್‌ಪಿಯವರು ಸ್ಥಳಕ್ಕೆ ಹೋಗಿದ್ದಾರೆ. ಪೋಲೀಸರಿಗೆ ಈ ವಿಚಾರ ಗೊತ್ತಿದ್ದರೂ ಸಹ ಏನು ಕ್ರಮ ತೆಗೆದುಕೊಂಡಿಲ್ಲ. ಅವರನ್ನು ಕೂಡ ತಾವು ಅಮಾನತ್ತಿನಲ್ಲಿಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಜಿಲ್ಲಾ ಪೋಲೀಸ್ ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಇದು ಯಾರಿಗೂ ಏನೂ ಗೊತ್ತಿಲ್ಲದೇ ಇರತಕ್ಕಂಥ ಸಂಗತಿಯಲ್ಲ. ಪತ್ರಿಕಾ ವರದಿಗಳ ಪ್ರಕಾರ ಆ ಡಿ.ವೈ.ಎಸ್.ಪಿ ಸ್ಥಳಕ್ಕೆ ಹೋಗಿದ್ದಾರೆ. ಆ ಜಿಲ್ಲಾ ಪೋಲೀಸ್ ಅಧಿಕಾರಿ ಯಾರು ಇದ್ದಾರೆ, ಅವರು ವಿಚಾರವನ್ನು ತಿಳಿದುಕೊಳ್ಳಬೇಕಾಗಿತ್ತು. ಅವರುಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇದುವರೆಗೂ ಕೂಡ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಈ ನಾಲ್ಕು ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಿರೋ ಅದೇ ರೀತಿ ಆ ಸ್ಥಳಕ್ಕೆ ಹೋಗಿರತಕ್ಕ ಅಧಿಕಾರಿ, ಅಲ್ಲಿರತಕ್ಕ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಡಿ.ವೈ.ಎಸ್.ಪಿ., ಎಸ್.ಪಿ ಆಗಿರತಕ್ಕಂತವರು ಯಾರು ಇದ್ದಾರೆ ಅವರೆಲ್ಲರನ್ನೂ ಸಹ ಅಮಾನತ್ತಿನಲ್ಲಿಡಬೇಕಾದ ಅವಶ್ಯಕತೆ ಇದೆ. ಅವರೆಲ್ಲರೂ ಕೂಡ ಪ್ರಯತ್ನ ಪಟ್ಟಿದ್ದಾರೆ ಈ ಪ್ರಕರಣವನ್ನು ಮುಚ್ಚಬೇಕು ಎಂದು. ಇದು ನಡೆದಿದೆ. ಇವತ್ತು ನಮಗೆ ಪತ್ರಿಕಾ ವರದಿಯೇ ಆಧಾರವೆಂದು ಹೇಳುತ್ತಿದ್ದೀರಿ ; ಆ ಪತ್ರಿಕಾ ವರದಿಯ ಪ್ರಕಾರವೇ ಇವರೆಲ್ಲರೂ ಕೂಡ ಅಪರಾಧಿಗಳು. ಈ ಪ್ರಕರಣವನ್ನು ಮುಚ್ಚಿಹಾಕತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಳುತ್ತೀರಿ ಎನ್ನುವುದನ್ನು ದಯಮಾಡಿ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ : ನನಗೆ ಅನಿಸುವುದನ್ನು ಹೇಳುತ್ತೇನೆ. ತಾವು ಈಗ ಏನು ಒಂದು ಸ್ಟೇಟ್‌ಮೆಂಟ್ ಮಾಡಿದ್ದೀರಿ : ಅದು ತಾವು ಆತ್ಮಪೂರ್ತಿಯಾಗಿ ಮಾಡಿರತಕ್ಕ ಸ್ಟೇಟ್‌ಮೆಂಟ್ ಅಲ್ಲ. ಆತ್ಮತೃಪ್ತಿಯಾಗಿ ಮಾಡಿದ್ದು ಅಲ್ಲ ಎಂದು ನಮಗೂ ಗೊತ್ತಾಗುತ್ತದೆ. ಈಗ ನೀವು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ಅದನ್ನು ಅಧಿಕಾರಿಗಳು ಬರೆದು ಕೊಟ್ಟಿದ್ದಾರೆ.

SRI S. M. KRISHNA : Let me put the record straight. ನಾನು ಸ್ಟೇಟ್‌ಮೆಂಟ್ ಮಾಡಿದ್ದು ಆತ್ಮಪೂರ್ತಿಯಾಗಿ ಅಲ್ಲ ಎಂದು ಹೇಳುತ್ತೀರಿ. ಏಕೆ?

ಶ್ರೀ ಆರ್. ಎಲ್. ಜಾಲಪ್ಪ : ಏಕೆಂದರೆ, ಆದು ನಿಮಗೆ ಸಮಾಧಾನ ಇಲ್ಲ, ಅದು ಸ್ಟೇಟ್‌ಮೆಂಟ್ ಅಲ್ಲ.

ಶ್ರೀ ಎಸ್. ಎಂ. ಕೃಷ್ಣ : ನನಗೆ ಸಮಾಧಾನ ಇಲ್ಲದಿದ್ದರೆ ನಾನು ಅವರನ್ನು ಸಸ್ಪೆಂಡ್ ಮಾಡುತ್ತಿದ್ದೆನೆ? ಯಾರು ಎಫ್.ಐ.ಆರ್.ನಲ್ಲಿ ಸೇರಿದ್ದಾರಲ್ಲ, ಅವರನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದ್ದೇವೆಲ್ಲ, ನಮಗೆ ಸಮಾಧಾನ ಇಲ್ಲದಿದ್ದರೆ ಮಾಡುತ್ತಿದ್ದೇವೆಯೇ?

SRI R. L. JALAPPA : That is not a big thing . It should have been done long ago. Any way we thank you ; though it is belated, at least you have taken action now. Thank you very much. Will it be sufficient . There are so many people who are trying to suppress people. What is the answer about those people. Atleast we have got one request which you have to consider.why didn't you refer it to judicial enquiry.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಜಾಲಪ್ಪನವರೇ ಒಂದು ನಿಮಿಷ .

(ಗೊಂದಲ)

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಜಾಲಪ್ಪನವರೇ, ನೀವು ಯಾವುದೇ ಸೂಚನೆ ಮಾಡಲಿ, ನಾನು ಅಲ್ಲಿದ್ದಾಗಲೂ ಅಷ್ಟೇ, ಇಲ್ಲಿದ್ದಾಗಲೂ ಅಷ್ಟೇ, ನಾನು ತಮ್ಮ ಸೂಚನೆಗಳನ್ನು ಬಹಳ ಗೌರವದಿಂದ ಕಾಣುತ್ತೇನೆ. ಆದರೆ ನೀವು ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ನಡೆದಿರತಕ್ಕ ಈ ಜುಡೀಷಿಯಲ್ ಎನ್‌ಕ್ವೈರಿಯ ಇತಿಹಾಸವನ್ನು ತೆಗೆದು ನೋಡಿ. ಯಾವುದಾದರೂ ಒಂದು ಜುಡೀಷಿಯಲ್ ಎನ್‌ಕ್ವೈರಿಯಿಂದ ನಾವು ಯಾವುದಾದರೂ ಒಂದು ಸಮಸ್ಯೆಯನ್ನು ಬಗೆಹರಿಸಿದ್ದೇವೆ ನಿಮ್ಮ ಆತ್ಮ ಮುಟ್ಟಿ ನೀವು ಕೇಳಿಕೊಳ್ಳಿ. ಜುಡೀಷಿಯಲ್ ಎನ್‌ಕ್ವೈರಿಗೋಸ್ಕರವೇ ಒಂದು ಜುಡೀಷಿಯಲ್ ಎನ್‌ಕ್ವೈರಿಯನ್ನು ಮಾಡಬೇಕು ಎನ್ನತಕ್ಕ ತತ್ವವನ್ನು ನಾನು ಒಪ್ಪುವುದಿಲ್ಲ ಸ್ವಾಮಿ. ಆದರೆ ಇನ್‌ವೆಸ್ಟಿಗೇಷನ್ ಈಗ ಪ್ರಾರಂಭ ಆಗಿದೆ. ಈಗ ಇನ್ನು ಯಾರ‍್ಯಾರು ಇನ್‌ವಾಲ್ವ್ ಆಗಿದ್ದಾರೆ. ಮಾನ್ಯ ರಾಯರೆಡ್ಡಿ ಅವರು ಒಂದು ಗುರುತರವಾದ ಆರೋಪಣೆಯನ್ನು ಮಾಡಿದರು. ಆ ಗುರುತರವಾದ ಆರೋಪಣೆ ಏನು ಎಂದರೆ, 15 ದಿವಸಗಳ ಕೆಳಗೆ ನಾಗರೀಕರ ಸಮಿತಿ ಆ ಪೋಲೀಸ್‌ಸ್ಟೇಶನ್ ಅಧಿಕಾರಿಗಳಿಗೆ ಒಂದು ಕಂಪ್ಲೇಂಟ್ ಕೊಟ್ಟರು, ಅಥವಾ ಒಂದು ಮನವಿಯನ್ನು ಕೊಟ್ಟರು. ಆ ಮನವಿಯನ್ನು ಅವರು ಧಿಕ್ಕರಿಸಿದರು ಎಂದು ಈ ಎನ್‌ಕ್ವೈರಿಯನ್ನು ನಾವು ಆರ್ಡರ್ ಮಾಡಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ಮನವಿಯನ್ನು ಧಿಕ್ಕರಿಸಿದರು ಎಂದು ನಾನು ಹೇಳಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ : ತಾವು ಏನು ಹೇಳಿದಿರಿ?

ಶ್ರೀ ಬಸವರಾಜ ರಾಯರೆಡ್ಡಿ : ಆ ಮನವಿಯನ್ನು ಪುರಸ್ಕರಿಸಿ ಅಲ್ಲಿ ಕಾನ್‌ಸ್ಟೇಬಲ್

ಅವರನ್ನು ನೇಮಿಸಿದರು. ರಾತ್ರಿ ಅಲ್ಲಿ ಇದೇ ತರಹ ಕುಡಿದು ಗಲಾಟೆ ಮಾಡುತ್ತಿದ್ದರು. ಅಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಪಿ.ಎಸ್.ಐ. ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಕಳಿಸಿ ನೀವು ಈ ತರಹ ಗಲಾಟೆ ಮಾಡಬಾರದು ಎಂದು ಹೇಳುವುದಕ್ಕೆ ಕಳಿಸಿದರೆ ಇವರು ಆ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಹೊಡೆದಿದ್ದಾರೆ. ಯಾರು ಎಂದರೆ ಇದೇ ಅಧಿಕಾರಿಗಳು. ಯಾವ ಅಧಿಕಾರಿಗಳು ಈಗ ಏನು ಶಾಮಿಲಾಗಿದ್ದಾರೆ ಅವರು ಈ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಹೊಡೆದಿದ್ದಾರೆ. ಈ ಕಾನ್‌ಸ್ಟೇಬಲ್‌ಗಳು ನಮ್ಮನ್ನು ಹೊಡೆದರೆಂದು ಕಂಪ್ಲೇಂಟ್ ಕೊಟ್ಟರು. ಆ ಕೇಸನ್ನು ಹಿರಿಯ ಅಧಿಕಾರಿಗಳು ದಾಖಲು ಮಾಡಲಿಲ್ಲ : ಇದು ನನ್ನ ಸ್ಟೇಟ್‌ಮೆಂಟ್.

ಶ್ರೀ ಎಸ್. ಎಂ. ಕೃಷ್ಣ : ಸಿ ಓ ಡಿ ಅವರು, ಅವರ ಎನ್‌ಕ್ವೈರಿ ವ್ಯಾಪ್ತಿಗೆ ನೀವು ಏನು ಹೇಳುತ್ತಿದ್ದೀರಿ ಅದನ್ನು ಸೇರಿಸುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಬೆಳಿಗ್ಗೆ ಕುಷ್ಟಗಿಗೆ ಟೆಲಿಫೋನ್ ಮಾಡಿದಾಗ ಕೆಲವು ನಾಗರೀಕರು ನನಗೆ ಹೇಳಿದ್ದುದು ಇದು. ಅಲ್ಲಿನ ನಾಗರೀಕರು ಟೆಲಿಫೋನ್ ಮುಖಾಂತರ ನನಗೆ ಹೇಳಿದ್ದನ್ನು ನಾನು ತಮಗೆ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್ ಅವರೆ, ...

(ಗೊಂದಲ)

ಶ್ರೀ ಸಿ. ಬೈರೇಗೌಡ : ಈಗ ಮಾನ್ಯ ಮಂತ್ರಿಗಳು ತಿಳಿಸಿದ ಹಾಗೆ, ಎಫ್.ಐ.ಆರ್. ರಿಜಿಸ್ಟರ್ ಆಗಿರತಕ್ಕದ್ದು, ಪತ್ರಿಕಾ ವರದಿಯ ಆಧಾರದಿಂದ, ಅದೇ ಪತ್ರಿಕೆಯ ವರದಿಯಲ್ಲಿ ಏನು ಹೇಳಿದೆ ಎಂದರೆ, ಡಿ.ವೈ.ಎಸ್.ಪಿ. ಆಗಿರತಕ್ಕವರು ಸ್ಥಳಕ್ಕೆ ಹೋಗಿದ್ದಾರೆ. ಅಂದರೆ ಇದನ್ನು ಮಾನ್ಯ ಮಂತ್ರಿಗಳು ಒಪ್ಪಿದ್ದಾರೆ. ದೂರು ಇಲ್ಲದೇ ಇದ್ದರೂ ಸಹ ಈ ಕೃತ್ಯ ನಡೆದಿರತಕ್ಕದ್ದು ಏನಿದೆ ಈ ಕೇಸನ್ನು ತತ್‌ಕ್ಷಣ ಸ್ಯೂ ಮೋಟೋ ಇವತ್ತು ಯಾವ ರೀತಿ ರಿಜಿಸ್ಟರ್ ಮಾಡಿಕೊಂಡಿದ್ದಾರೋ ಅದೇ ರೀತಿ ಅವತ್ತೇ ರಿಜಿಸ್ಟರ್ ಆಗಬೇಕಾಗಿತ್ತು : ರಿಜಿಸ್ಟರ್ ಆಗಲಿಲ್ಲ. ನಾನು ವಕೀಲನಲ್ಲ, ರಂಗನಾಥ ಅವರಿಗೆ ಹೇಳುತ್ತೇನೆ ನೀವು ವಕೀಲರು. ಆದರೆ ಸಾಮಾನ್ಯ ಮನುಷ್ಯನಾಗಿರತಕ್ಕ ನನಗೆ ಕಾಮನ್‌ಸೆನ್ಸ್ ಹೇಳುತ್ತದೆ, ಇವತ್ತು ಕೇಸ್ ರಿಜಿಸ್ಟರ್ ಮಾಡುವುದಕ್ಕೆ ಏನು ಆಧಾರವೆಂದರೆ ಪತ್ರಿಕಾ ವರದಿ. ಅದೇ ಪತ್ರಿಕಾ ವರದಿಯಲ್ಲಿ ಡಿ.ವೈ.ಎಸ್.ಪಿ. ಹೋಗಿದ್ದರು ಎಂದು ಇದೆ. ಅವರು ಮುಚ್ಚಿಡತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಒಂದು ಕೃತ್ಯ ನಡೆದ ಮೇಲೆ ಅದನ್ನು ಮುಚ್ಚಿಹಾಕತಕ್ಕಂಥದ್ದು ಕೂಡ ಘೋರ ಕೃತ್ಯ. ಅವರ ಮೇಲೂ ಕೂಡ ಕೇಸ್ ರಿಜಿಸ್ಟರ್ ಮಾಡಬೇಕಾಗುತ್ತದೆ. ಅಂದರೆ ಡಿ.ವೈ.ಎಸ್.ಪಿ. ಮೇಲೂ ಇವತ್ತಿನ ದಿವಸ ಅವರೂ ಶಾಮಿಲಾಗಿದ್ದಾರೆ. ಅದೇ ರೀತಿ ಜಿಲ್ಲಾ ಮಟ್ಟದಲ್ಲಿ ಹಿರಿಯ ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೂ ಕೂಡ ಕೇಸ್ ರಿಜಿಸ್ಟರ್ ಮಾಡಬೇಕಾಗುತ್ತದೆ. ಕಾರಣ ಏನೆಂದರೆ ಅವರೆಲ್ಲರೂ ಕೂಡ ಈ ಕ್ಷಣ ಕೇಸನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಏಕೆಂದರೆ ಹಿಂದೆಯೇ ಈ ಕೇಸನ್ನು ರಿಜಿಸ್ಟರ್ ಆಗಿದ್ದರೆ ನೀವು ಹೇಳತಕ್ಕದ್ದನ್ನು ನಾನು ಒಪ್ಪುತ್ತಿದ್ದೆ. ಕೇಸ್ ರಿಜಿಸ್ಟರ್ ಆಗಿರತಕ್ಕದ್ದು ಇವತ್ತು.

1.15 ಪಿ. ಎಂ.

ಶ್ರೀ ಕೆ. ಹೆಚ್. ರಂಗನಾಥ್ : ಪತ್ರಿಕೆಯಲ್ಲಿ ಬಂದಮೇಲೆಯೇ ಈ ವಿಷಯ ನಮಗೂ ಮತ್ತು ತಮಗೂ ಗೊತ್ತಾದುದು. ಅದಕ್ಕಿಂತ ಮುಂಚಿತವಾಗಿ ಯಾರಿಗೂ ಗೊತ್ತಿರಲಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಹೇಳಿದರು, ಎಲ್ಲೆಲ್ಲಿ ಲೋಪವಾಗಿದೆ, ಯಾರ್‍ಯಾರು ಮಾಡಿದ್ದಾರೆಂಬುದನ್ನು ಸಿ.ಓ.ಡಿ. ಮುಖಾಂತರ ಇನ್‌ವೆಸ್ಟಿಗೇಷನ್ ಮಾಡಿಸಿ ತಪ್ಪಿತಸ್ಥರನ್ನೆಲ್ಲಾ ಅಪರಾಧ ವ್ಯಾಪ್ತಿಯಲ್ಲಿ ತರುತ್ತೇವೆ, ಇದರಲ್ಲಿ ಯಾವುದನ್ನೂ ಮುಚ್ಚಿಹಾಕುವಂಥ ಪ್ರಶ್ನೆಯೇ ಇಲ್ಲವೆಂದು ಹೇಳಿದ್ದಾರೆ. ಇದರಲ್ಲಿ ಎಸ್.ಪಿ. ತಪ್ಪು ಮಾಡಿರಬಹುದು, ಡಿ.ವೈ.ಎಸ್.ಪಿ. ತಪ್ಪು ಮಾಡಿರಬಹುದು, ಅಥವಾ ಬೇರೆ ಯಾರೇ ತಪ್ಪು ಮಾಡಿರಬಹುದು, ತಪ್ಪಾಗಿಲ್ಲವೆಂದು ನಾನು ಹೇಳುತ್ತಿಲ್ಲ. ತಮ್ಮ ಹೇಳಿಕೆ ಪ್ರಕಾರ ಪತ್ರಿಕೆಯ ವರದಿಯ ಪ್ರಕಾರ ಇದು ನಿನ್ನೆ ಮೊನ್ನೆ ನಡೆದಿರತಕ್ಕದ್ದಲ್ಲ, ಇದು ಹಿಂದೆ ನಡೆದಿರತಕ್ಕದ್ದು. ಇನ್‌ವೆಸ್ಟಿಗೇಷನ್ ಆದಾಗ ಅವನು ಯಾರೇ ಆಗಿರಲಿ, ಎಷ್ಟೇ ದೊಡ್ಡ ವ್ಯಕ್ತಿಯಾಗಿರಲಿ ಈ ಅಪರಾಧ ವ್ಯಾಪ್ತಿಯಲ್ಲಿ ಬರುತ್ತಾನೆ, ಅವನು ಶಿಕ್ಷೆಗೆ ಒಳಗಾಗೇ ಆಗುತ್ತಾನೆ. ಶಿಕ್ಷೆ ಮಾಡುವುದಿಲ್ಲವೆಂಬುದು ಸರ್ಕಾರದ ನಿಲುವೇನೂ ಇಲ್ಲ. ನಾವು ಇದನ್ನು ಮುಚ್ಚಿಹಾಕುವುದಿಲ್ಲ ಎಂದು ಅವರು ಹೇಳಿರುವುದರಿಂದ ಇದರ ವ್ಯಾಪ್ತಿ ಎಲ್ಲಿಗೆ ಹೋಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿನೋಡಿ. ಇದರ ವ್ಯಾಪ್ತಿ ತುಂಬಾ ವ್ಯಾಪಕವಾಗಿ ಹೋಗುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿರುವುದರಿಂದ ನಾನು ಇದಕ್ಕೆ ನನ್ನ ಮೆಚ್ಚುಗೆಯನ್ನು ಸೂಚಿಸುತ್ತೇನೆ. ಈ ಪ್ರಕರಣದಲ್ಲಿ ಇನ್‌ವಾಲ್ವ್ ಆಗಿದ್ದಂಥ 3-4 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆಂದು ತಾವು ಹೇಳುತ್ತಿದ್ದೀರಿ. ಪತ್ರಿಕಾ ವರದಿಯ ಪ್ರಕಾರ ಅದೇ ಆರೋಪ ಇವರ ಮೇಲೂ ಇದೆ. ಇವರನ್ನೂ ಕೂಡ ತಾವು ಸಸ್ಪೆಂಡ್ ಮಾಡಬೇಕಾಗುತ್ತದೆ. 4 ಜನ ಇಂಜಿನೀಯರ್‌ಗಳನ್ನು ಮತ್ತು ತಹಶೀಲ್ದಾರರನ್ನು ಸಸ್ಪೆಂಡ್ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಅದೇ ರೀತಿ ಅಲ್ಲಿಯ ಡಿ.ವೈ.ಎಸ್.ಪಿ.ಯವರು ಆ ಸ್ಥಳಕ್ಕೆ ಹೋಗಿದ್ದಾರೆ. ಇವರಿಗೆ ವಿಷಯ ಗೊತ್ತಾಗಿದೆ. ಆದರೂ ಇವರು ಯಾವುದೇ ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಲಿಲ್ಲ. ಡಿ.ವೈ.ಎಸ್.ಪಿ.ಯವರೂ ಇದರಲ್ಲಿ ಇನ್‌ವಾಲ್ವ್ ಆಗಿರತಕ್ಕದ್ದು ನನಗೆ ಗೋಚರವಾಗುತ್ತದೆ. ಆದ್ದರಿಂದ ಇವರನ್ನೂ ತಾವು ಅಮಾನತ್ತಿನಲ್ಲಿಡಬೇಕು. ನಾನು ವಕೀಲನಲ್ಲ ಎಂದು ಆಗಲೇ ಹೇಳಿದ್ದೇನೆ. ತಾವು ವಕೀಲರಾಗಿರುವವರು ಹೇಳಿ. ಈ ವಿಚಾರ ಸಾಮಾನ್ಯ ಪ್ರಜ್ಞೆ ಇರುವಂಥ ಮನುಷ್ಯನಿಗೆ ಗೋಚರವಾಗುವಾಗುತ್ತದೆ. ಇವರನ್ನೂ ಸಸ್ಪೆಂಡ್ ಮಾಡುತ್ತೇವೆಂದು ಸರ್ಕಾರದವರು ಹೇಳಿ. ಈ ಕೇಸನ್ನು ರಿಜಿಸ್ಟರ್ ಮಾಡುವುದಕ್ಕೆ ನಿಮಗೆ ಯಾವುದು ಮೂಲವೋ ಅದೇ ಮೂಲ ಈ ಪತ್ರಿಕಾ ವರದಿಯಲ್ಲೇ ಇದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಸಿ.ಓ.ಡಿ. ಎನ್‌ಕ್ವೈರಿ, ಸಸ್ಪೆನ್‌ಷನ್ ಎಂದು ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದರು. ಆದರೆ ಈಗ ನಮ್ಮ ಮುಂದಿರತಕ್ಕ ಸಂಶಯ ಏನೆಂದರೆ, ಈ ಪ್ರಕರಣ ಆಗಿ 25 ದಿವಸವಾದರೂ ಈ ವಿಚಾರ ಪೋಲೀಸರಿಗೆ ಗೊತ್ತಾಗಲಿಲ್ಲ ಎಂದರೆ, ಈ ಇಲಾಖೆಯ ಎಸ್.ಎಸ್.ಬಿ ಬ್ರ್ಯಾಂಚ್ ಏನು ಮಾಡುತ್ತಿತ್ತು? ರೈತರು ಏನಾದರೂ ಚಳುವಳಿ ಮಾಡುತ್ತಾರೆಂದರೆ ಅದರ ಬಗ್ಗೆ ಮೊದಲೇ ಅವರಿಗೆ ಮಾಹಿತಿ

ಬಂದಿರುತ್ತದೆ. ಅದಕ್ಕೆ ಮುಂಚಿತವಾಗಿಯೇ ಸರ್ಕಾರದವರು ಮಿಲಿಟರಿಯನ್ನೇ ತಂದಿರುತ್ತೀರಿ. ಆದರೆ ಇವತ್ತು ಇಂಥ ಘನಘೋರವಾದ ಕೊಲೆ ಆದುದು ಸರ್ಕಾರದ ಗಮನಕ್ಕೆ ಬರಲಿಲ್ಲ ಎಂದರೆ, ಇಲಾಖೆಯ ಮೇಲಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದರೆ, ಈ ಪ್ರಕರಣವನ್ನು ಪೋಲೀಸರಿಂದ ಎನ್‌ಕ್ವೈರಿ ಮಾಡಿಸುವುದರಿಂದ ಏನು ಪ್ರಯೋಜನವಾಗುತ್ತದೆ? ಜನರನ್ನು ರಕ್ಷಣೆ ಮಾಡಬೇಕಾದಂಥ ತಾಲ್ಲೂಕು ಮ್ಯಾಜಿಸ್ಟ್ರೇಟ್ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಸತ್ಯವನ್ನು ಬೆಳಕಿಗೆ ತರಲು ನ್ಯಾಯಾಧೀಶರಿಗೆ ಸಹಾಯ ಮಾಡುವಂಥ ವಕೀಲರು ಇದರಲ್ಲಿ ಶಾಮೀಲಾಗಿದ್ದಾರೆ. ಇನ್ನೂ ಬೇರೆ ಬೇರೆ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿರುವುದನ್ನು ನೋಡಿದರೆ ಇದರ ಹಿಂದೆ ರಾಜಕಾರಣಿಗಳ ಕೈವಾಡ ಇದ್ದು ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಸಿ.ಬಿ.ಐ.ಗೆ ಒಪ್ಪಿಸಬೇಕು. ಈ ಸದನದ ಸಮಿತಿಯನ್ನು ಮಾಡತಕ್ಕದ್ದು ಅನಿವಾರ್ಯ. ಇದನ್ನು ನೀವು ಮಾಡದಿದ್ದರೆ ನಮ್ಮ ಈ ಸಂಶಯ ನಿವಾರಣೆಯಾಗುವುದಿಲ್ಲ. ಇಂಥ ಘನಘೋರ ಅಪರಾಧವನ್ನು ಮಾಡಿದಂಥ ವ್ಯಕ್ತಿಗಳನ್ನು ರಕ್ಷಣೆ ಮಾಡಿದಂತಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತು ಈ ಚರ್ಚೆಯಲ್ಲಿ ಭಾಗವಹಿಸಿ ನಮಗೆ ಉತ್ತರ ಕೊಟ್ಟಿರತಕ್ಕದ್ದೇ ನಮ್ಮ ಪುಣ್ಯ. ಏಕೆಂದರೆ ಇವತ್ತು ಸಭೆಯ ಪ್ರಾರಂಭದಲ್ಲಿ ಸುಮಾರು ಎರಡೂವರೆ ಗಂಟೆಕಾಲ ಚರ್ಚೆ ಆದಾಗ ಇದಕ್ಕೆ ಯಾವ ಮಹತ್ವವನ್ನು ಸರ್ಕಾರ ಕೊಡಬೇಕಾಗಿತ್ತೋ, ಆ ಮಹತ್ವವನ್ನು ಕೊಟ್ಟಿಲ್ಲವೆಂಬುದು ನಮ್ಮ ಅಭಿಪ್ರಾಯ. ಏಕೆಂದರೆ ಹಿರಿಯ ಸದಸ್ಯರಾದಂಥ ಮಾನ್ಯ ಜಾಲಪ್ಪನವರು ನಿಮ್ಮ ಮನಸ್ಸಿನ ಅಂತರಾಳದಿಂದ ಈ ವಿಚಾರವನ್ನು ಹೇಳಲಿಲ್ಲ ಎಂದು ಪ್ರತಿಪಾದನೆ ಮಾಡಿದಾಗ ಇದರ ಬಗ್ಗೆ ತಮಗೆ ಕಮಿಟ್‌ಮೆಂಟ್ ಇಲ್ಲ ಎಂದು ಇದರ ಅರ್ಥವಲ್ಲ. ಈ ಘಟನೆಯ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಷಯಗಳನ್ನು ಸಂಗ್ರಹಣ ಮಾಡಿರುವ ಬಗ್ಗೆ ತಮಗೆ ಸಮಾಧಾನ ಇಲ್ಲವೆಂದು ಅನಿಸುತ್ತದೆ. ಈಗ ಮಾನ್ಯ ರಂಗನಾಥರವರು ವಿಷಯ ತಿಳಿದ ತಕ್ಷಣವೇ ಕ್ರಮ ತೆಗೆದುಕೊಂಡಿದ್ದಾರೆ. ಅವರಿಗೆ ಯಾರು ಏನು ಕೇಳಲಿಲ್ಲ. ಮೇಲ್ ಮನೆಯಲ್ಲಾಗಲಿ ಮತ್ತೆ ಇಲ್ಲಿಯಾಗಲಿ ನೀವು ಬಂದೂ ಇರಲಿಲ್ಲ. ನಾವು ಕೇಳದಿದ್ದರೂ ನೀವು ಕ್ರಮ ತೆಗೆದುಕೊಂಡಿರುತ್ತೀರಿ, ಆದುದರಿಂದ ಈ ಸರ್ಕಾರ ಕ್ರಮ ತೆಗೆದುಕೊಂಡಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನಾವೇನು ನಿಮ್ಮ ಬಗ್ಗೆ ದೋಷ ಮಾಡುತ್ತಿದ್ದೇವೆಂದರೆ, ಈಗ ತಾವು ಹೇಳುತ್ತಿದ್ದೀರಿ, ನೀವೂ ತಮಗೆ ಈ ಸುದ್ದಿ ಕೊಡಲಿಲ್ಲ, ಪತ್ರಿಕೆಗಳಲ್ಲಿ ಬಂತು ಅದರ ಆಧಾರದ ಮೇಲೆ ನೀವು ಮಾತನಾಡುತ್ತಿದ್ದೀರಾ ಎಂದು ಹೇಳಿದಿರಿ. ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರಿಗಾಗಲಿ ಅಥವಾ ಮಾನ್ಯ ಸದಸ್ಯರುಗಳಿಗಾಗಲಿ ಅಥವಾ ಆಡಳಿತಪಕ್ಷದ ಸದಸ್ಯರುಗಳಿಗಾಗಲಿ ಯಾವ ಯಂತ್ರದ ಮೂಲಕ ವಿಷಯವನ್ನು ಸಂಗ್ರಹಣೆ ಮಾಡಲಿಕ್ಕೆ ಆಗುತ್ತದೆ. ಪತ್ರಿಕೆಗಳ ಮೇಲೆಯೇ ನಾವು ಅವಲಂಬಿಸಿಕೊಳ್ಳಬೇಕು. ನಮ್ಮ ಪಕ್ಷದ ಅಥವಾ ಮತ್ತೊಂದು ಪಕ್ಷದ ಕಾರ್ಯಕರ್ತರು ನಮಗೆ ದೂರವಾಣಿಯ ಮೂಲಕ ತಿಳಿಸಿದರೆ ಮಾತ್ರ ನಮಗೆ ಗೊತ್ತಾಗುತ್ತದೆಯೇ ಹೊರತು ಬೇರೆ ಯಾವುದೂ ಸಹಿತ ಗೊತ್ತಾಗುವುದಿಲ್ಲ. ನಾವು ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಿರತಕ್ಕಂಥದ್ದು ಏನು? ಈಗ ನೀವು ಕ್ರಮ ತೆಗೆದುಕೊಂಡಿದ್ದೀರಾ, ಸಿ.ಓ.ಡಿ.ಗೆ ನಾವು ರೆಫರ್ ಮಾಡಿದ್ದೇವೆಂದು ಹೇಳಿದ್ದೀರಿ. ಈಗ ನಮ್ಮ ಪೋಲೀಸಿನ ಮೇಲ್‌ಮಟ್ಟದ ಅಧಿಕಾರಿಗಳು ಯಾರಿದ್ದಾರೆ, ಅವರ ಬಗ್ಗೆ ನಿಮ್ಮಷ್ಟೇ ನಮಗೂ ಸಹಿತ ಗೌರವವಿದೆ. ಇದರಲ್ಲಿ ಪ್ರಶ್ನೆ ಏನಿದೆಯೆಂದರೆ, ಅಲ್ಲಿ ಜಿಲ್ಲಾಮಟ್ಟದಲ್ಲಿರತಕ್ಕಂಥ ಅಥವಾ ವಿಭಾಗಮಟ್ಟದಲ್ಲಿರತಕ್ಕಂಥ ಅಧಿಕಾರಿಗಳ ತಾತ್ಸಾರ ಮನೋಭಾವ ಅವರ ತಪ್ಪಿದೆ

ಎನ್ನತಕ್ಕಂಥದ್ದು ಇಲ್ಲಿರತಕ್ಕ ಪ್ರಶ್ನೆ. ಈಗ 23 ದಿವಸಗಳ ಕಾಲ ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಅಥವಾ ಅಲ್ಲಿರತಕ್ಕಂಥ ವಿಭಾಗಾಧಿಕಾರಿಗಳು ಇಡೀ ಕುಷ್ಠಗಿ ನಗರದಲ್ಲಿ ಈ ವಿಚಾರ ಗೊತ್ತಿದೆ ಎಂದು ಹೇಳಿದ ಮೇಲೆ ಸೂವೋ ಮೋಟೋ ಒಂದು ಕೇಸನ್ನು ಏತಕ್ಕೆ ರಿಜಿಸ್ಟರ್ ಮಾಡಲಿಲ್ಲ? ಇದು ನಮ್ಮ ಮುಂದಿರತಕ್ಕ ಪ್ರಶ್ನೆ. ಈಗ ಯಾರು ಸಿ.ಓ.ಡಿ. ಎನ್‌ಕ್ವೈರಿ ಮಾಡತಕ್ಕಂಥವರು ಅಂದರೆ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಒಬ್ಬ ಡಿ.ವೈ.ಎಸ್.ಪಿ. ಹೋಗುತ್ತಾರೆ. ಮೇಲ್‌ಮಟ್ಟದ ಒಬ್ಬ ಅಧಿಕಾರಿಯ ಬಗ್ಗೆ ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಎನ್‌ಕ್ವೈರಿ ಮಾಡಲಿಕ್ಕೆ ಸಾಧ್ಯವೇ? ಇದು ನಮ್ಮ ಮುಂದಿರುವ ಪ್ರಶ್ನೆ. ಸಿ.ಬಿ.ಐ.ನಲ್ಲಿರತಕ್ಕಂಥವರೆಲ್ಲಾ ಸರ್ವಶ್ರೇಷ್ಠರು, ಸರ್ವಗುಣಸಂಪನ್ನರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಿ.ಬಿ.ಐ.ನಲ್ಲಿ, ಇರತಕ್ಕಂಥ ಅಧಿಕಾರಿಗಳನ್ನೇ ಸ್ಟೇಟ್ ಕೇಡರ್‌ನಿಂದ ಪೂಲ್ ಮಾಡಿಬಿಟ್ಟು ಎನ್‌ಕ್ವೈರಿ ಮಾಡುತ್ತಾರೆ. ಆದರೆ ರಾಜ್ಯಕ್ಕೆ ಸಂಬಂಧವಿಲ್ಲದವರು ಬೇರೆ ರಾಜ್ಯದವರು ಮಾಡಬಹುದೆಂದು ವಿಚಾರವನ್ನಿಟ್ಟುಕೊಂಡು ನಾವು ಮಾಡಿದೆವು. ಈಗ ತಾವು ಸಿ.ಓ.ಡಿ. ಎನ್‌ಕ್ವೈರಿಯನ್ನು ಏನು ಅನೌನ್ಸ್ ಮಾಡಿದ್ದೀರಿ, ಅಲ್ಲಿರತಕ್ಕಂಥ ಆಫೀಸರ್ಸನ್ನು ನೀವು ಸಸ್ಪೆಂಡ್ ಮಾಡಿದ್ದೀರಿ. ಆದರೆ ನಮ್ಮ ಕಡೆಯಿಂದ ಒತ್ತಾಯವೇನೆಂದರೆ, ಇದು ಇಷ್ಟಕ್ಕೇ ನಿಲ್ಲಬೇಕು. ಈ ಪ್ರಕರಣ ಮತ್ತೆ ಪುನರಾವರ್ತನೆಯಾಗಬಾರದು. We have to create an impression among that section of the people, such things will not repeat. ಆದರಿಂದಾಗಿ ನಾವು ಏನು ಹೇಳುತ್ತಿದ್ದೇವೆಂದರೆ, ಒಂದು ಸದನದ ಸಮಿತಿಯನ್ನು ಮಾಡಿ ಎಂದು ಹೇಳಿದಾಗ ಅವರಿಗೆ ಒಂದು ಕಾನ್‌ಫಿಡೆನ್ಸ್ ಬರುತ್ತದೆ. ರಾಯಚೂರಿಗೆ ಇತ್ತೀಚೆಗೆ ಮಾನ್ಯ ಉಪಮುಖ್ಯಮಂತ್ರಿಗಳು ಹೋಗಿ ಬಂದಿದ್ದೀರಿ. ಅಲ್ಲಿ ಒಂದು ವಿಶೇಷವಾದ, ಪ್ರಕ್ಷುಬ್ಧವಾದ ಒಂದು ವಾತಾವರಣ ಉಂಟಾಗಿದೆ. ನನಗೆ ಇವತ್ತು ಗೊತ್ತಾಯಿತು, ಮಾನ್ಯಿಯ ಸರ್ಕಾರಿ ಆಸ್ಪತ್ರೆಯಲ್ಲಿ ಈ ಒಂದು ಡೌರಿ ಕೇಸ್‌ನಲ್ಲಿ ಒಬ್ಬ ಹೆಣ್ಣು ಮಗಳು ಸತ್ತಿದ್ದಾಳೆ ಎಂದು ಈಗತಾನೆ ನನಗೆ ಸುದ್ದಿ ಬಂದಿತು. ಇಂಥ ಪ್ರಕರಣಗಳು ಬಹಳ ನಡೆಯುತ್ತಿವೆ. ಅಲ್ಲಿರತಕ್ಕಂಥ ಪೋಲೀಸ್, ಕೆಲಸ ಮಾಡುತ್ತಿದೆಯೋ ಇಲ್ಲವೋ ನನಗಂತೂ ಅರ್ಥವಾಗುತ್ತಿಲ್ಲ. ಆ ದೃಷ್ಟಿಯಿಂದ ಸದನದ ಸಮಿತಿಯನ್ನು ಮಾಡಿ ಎಂದು ಹೇಳುತ್ತಿದ್ದೇವೆಯೇ ಹೊರತು, ಬೇರೆ ಯಾವ ದೃಷ್ಟಿಯಿಂದಲೂ, ಇದರಲ್ಲಿ ರಾಜಕೀಯ ಬೆಳೆಸಬೇಕೆಂಬ ದೃಷ್ಟಿಯಿಂದಲೂ ನಾವು ಈ ವಿಚಾರವನ್ನು ಹೇಳಲಿಲ್ಲ. ಆದ್ದರಿಂದ ಪುನರಪಿ ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಸದನಕ್ಕೆ ಮತ್ತು ನಮ್ಮೆಲ್ಲರಿಗೂ ಗೌರವ ಬರಬೇಕಾದರೆ ಒಂದು ಸದನದ ಸಮಿತಿಯನ್ನು ಮಾಡಿ : ಎನ್‌ಕ್ವೈರಿ ಪಾಡಿಗೆ ಎನ್‌ಕ್ವೈರಿ ನಡೆಯಲಿ. ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಅದಾದ ನಂತರ ತಕ್ಷಣ ಅವರನ್ನು ಅರೆಸ್ಟ್ ಮಾಡುತ್ತೀರಿ. ಅದೆಲ್ಲಾ ಒಂದು ಕಡೆ ನಡೆದುಕೊಂಡು ಹೋಗಲಿ. People should have the confidence, particularly that section of the society and in this House in all of us. They have to repose confidence in us. We should also have credibility. ಆದ್ದರಿಂದ ಮತ್ತೊಮ್ಮೆ ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ. ದಯವಿಟ್ಟು ಸದನದ ಸಮಿತಿಯನ್ನು ಮಾಡಬೇಕು ಎನ್ನುವುದು ಒಂದು ಮತ್ತು Who is to own the moral responsibility ? ಇದಕ್ಕೆ who is responsible? ಈಗ ನೀವು ಆಡಳಿತದಲ್ಲಿ ಇದ್ದೀರಿ. ನಿಮಗೆ ಇಂಟೆಲಿಜೆನ್ಸ್ ಇದೆ. ಸಿ.ಓ.ಡಿ. ಇದೆ. ಎಲ್ಲಾ ತರಹದ ಇಂಟೆಲಿಜೆನ್ಸ್ ವಿಂಗ್ ಇದೆ. ಅಧಿಕಾರಿಗಳು ಇದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, ಯಾರು ರಕ್ಷಣೆ ಕೊಡಬೇಕು, ತಾಲ್ಲೂಕ್

ಸೋಶಿಯಲ್ ವೆಲ್‌ಫೇರ್ ಆಫೀಸರ್, ತಾಲ್ಲೂಕು ಮ್ಯಾಜಿಸ್ಟ್ರೇಟ್, ತಾಲ್ಲೂಕು ಪಿ.ಡಬ್ಲುಡಿ ಆಫೀಸರ್, ತಾಲ್ಲೂಕು ರೆವಿನ್ಯೂ ಆಫೀಸರ್, ಇವರೇ ಈ ಕೃತ್ಯ ಮಾಡಿದ್ದಾರೆ. ಇವರು ಮೇಲ್‌ಮಟ್ಟದ ಅಧಿಕಾರಿಗಳ ಒಂದು ಆಶೀರ್ವಾದ ಮತ್ತು ಒಂದು ಶಾಮೀಲು ಇಲ್ಲದೆ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಆ ಕಾರಣದಿಂದ ಇದರ ಬಗ್ಗೆ ನೀವು ಇಲ್ಲಿಂದ ಒಂದು ನಾಲ್ಕು ಜನ ಪೋಲೀಸ್ ಅಧಿಕಾರಿಗಳನ್ನು ಕಳುಹಿಸಿದರೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ನಿಮ್ಮ ಸರ್ಕಾರ ಇವತ್ತು ಇದರ ಎಂಟೈರ್ ಇನ್ಸಿಡೆಂಟಿನ ಮಾರಲ್ ರೆಸ್ಪಾನ್ಸಿಬಿಲಿಟಿಯನ್ನು ಹೊರಬೇಕು. ನೀವು ನೈತಿಕವಾಗಿ ಇದಕ್ಕೆ ಹೊಣೆಯಾಗಿದ್ದೀರಿ. ಇದನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆದರಿಂದ ನಾನು ಹೇಳುತ್ತಿದ್ದೇನೆ, ಈ ಸದನದ ಬಗ್ಗೆ ತಮ್ಮ ಅಭಿಪ್ರಾಯ ನಮಗೆ ಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇವತ್ತು ಪೋಲೀಸ್ ವ್ಯವಸ್ಥೆ ಏನಿದೆ ಅದು ಪೂರ್ತಿಯಾಗಿ ...

(ಗೊಂದಲ)

ಅಧ್ಯಕ್ಷರು : ನಿಮಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ, ಸಾಕು. ಈಗ ಉಪ ಮುಖ್ಯಮಂತ್ರಿಗಳು ಹೇಳಿ.

ಶ್ರೀ ಸಿ. ಬೈರೇಗೌಡ : ಪ್ರತಿ ಹಳ್ಳಿಯಲ್ಲಿ ಕೂಡ ಪೋಲೀಸ್ ಬೀಟ್ ಎಂಬುದು ಇದೆ.....

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಲ್ಲಿ ಜಿಲ್ಲಾ ಮಟ್ಟದಲ್ಲಿರತಕ್ಕ ಎಲ್ಲಾ ಅಧಿಕಾರಿಗಳು ಪೋಲೀಸ್ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿದ್ದಾರೆ.

(ಗೊಂದಲ)

MR. SPEAKER : It will not go into the record. ಅವರು ಹೇಳುವುದು ಕೇಳಿ. ಎಲ್ಲಾ ಸದಸ್ಯರಿಗಿಂತ ಹೆಚ್ಚಿಗೆ ಪ್ರಶ್ನೆ ಕೇಳುವುದಕ್ಕೆ ತಮಗೆ ಅವಕಾಶ ಮಾಡಿಕೊಟ್ಟಿದ್ದೇನೆ. ತಾವು , ಅವರು ಏನು ಹೇಳುತ್ತಾರೆ ಕೇಳಬೇಕು, ಆಮೇಲೆ ಏನು ಮಾಡುವುದು ಎಂದು ಹೇಳುವುದಕ್ಕೆ ಬರುತ್ತದೆ. ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಉಪನಾಯಕರಾದ ಸಿಂಧ್ಯರವರ ಮತ್ತು ವಿರೋಧ ಪಕ್ಷದವರ ನಿಮ್ಮ ಅನುಮಾನ ಏನೆಂದರೆ ರಕ್ಷಕರೇ ರಾಕ್ಷಸರಾದರೆ ಜನರ ಗತಿ ಏನು ಎಂದು? ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದು ರಾಜ್ಯಕ್ಕೆ ಗೊತ್ತಾಗಬೇಕು ಎನ್ನುವುದು. ರಾಯಚೂರಿನಲ್ಲೇ ಆಗಲಿ, ಕೊಡಗಿನಲ್ಲೇ ಆಗಲಿ, ಮೈಸೂರಿನಲ್ಲೇ ಆಗಲಿ ಯಾರು ತಪ್ಪು ಮಾಡುತ್ತಾರೆ ಅವರನ್ನು ನಾವು ಶಿಕ್ಷೆಗೆ ಗುರಿ ಮಾಡುತ್ತೇವೆ. ಈ ಮೆಸೇಜ್ ಏನಿದೆ ಇದು ರಾಜ್ಯದಲ್ಲಿ ಹೋಗುತ್ತದೆ. ಇಂಥ ಘಟನೆಗಳು ಮರುಕಳಿಸದೆ ಇರುವ ರೀತಿಯಲ್ಲಿ ನಾವು ಪೋಲೀಸರಿಗೆ ಮುನ್ನೆಚ್ಚರಿಕೆ ಕೊಡುತ್ತೇವೆ. ಸಿ.ಓ.ಡಿ.ಯವರು ಯಾರೋ ಸಬ್‌ಇನ್ಸ್‌ಪೆಕ್ಟರೋ

ಅಥವಾ ಸರ್ಕಲ್ ಇನ್ಸ್‌ಪೆಕ್ಟರೊ ಹೋಗಿ ಇನ್‌ವೆಸ್ಟಿಗೇಷನ್ ಮಾಡುತ್ತಾರೆಂದು, ಅಲ್ಲ : ಸದನದ ಅತ್ಯಂತ ಗೌರವಾನ್ವಿತ ಸದಸ್ಯರು ಎಲ್ಲಾ ಭಾಗದಿಂದಲೂ ಕೂಡ ಈ ಘಟನೆಯನ್ನು ತೀವ್ರ ಸ್ವರೂಪದಲ್ಲಿ ಖಂಡಿಸಿ, ಇದನ್ನು ನಾವು ಸಿ.ಓ.ಡಿ. ಎನ್‌ಕ್ವೈರಿ ಮಾಡುತ್ತೇವೆಂದರೆ ಸರ್ಕಲ್ ಇನ್ಸ್‌ಪೆಕ್ಟರ್ ಕೈಯಲ್ಲಿ ಅಲ್ಲ : A Senior-most officer from the COD will go to enquire into the incident, and then I would also ask the COD to conclude their investigation at the earliest possible time. On this assurance I would like to request the Hon.Deputy Leader of the Opposition and other Opposition Members, let us wait till the investigation is over. Government has no vested interests in safeguarding anybody, let me make it very clear.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇಂಥ ದುರ್ಘಟನೆ ನಡೆದ 23 ದಿವಸಗಳಾದರೂ ಸರ್ಕಾರಕ್ಕೆ ಯಾವುದೇ ರೀತಿಯ ವಿಷಯ ಸಂಗ್ರಹಿಸುವುದಕ್ಕೆ ಸಾಧ್ಯವಾಗಿಲ್ಲ, ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇವರಿಗೆ ನೈತಿಕವಾಗಿ ಇದರ ಬಗ್ಗೆ ಮಾತನಾಡುವುದಕ್ಕೆ ಹಕ್ಕು ಇಲ್ಲ. ನಾವು ಮನನೊಂದು ಹೇಳುತ್ತಿದ್ದೇವೆ. ಸರ್ಕಾರ ಸಂಪೂರ್ಣ ವಿಫಲವಾಗಿದೆ. ಪ್ರಜಾವಾಣಿ, ಸಂಯುಕ್ತ ಕರ್ನಾಟಕದಲ್ಲಿ ಬರದಿದ್ದರೆ, ನಾವು ಇಲ್ಲಿ ಪ್ರಸ್ತಾಪ ಮಾಡದಿದ್ದರೆ, ಚರ್ಚೆಯಲ್ಲಿ ಭಾಗವಹಿಸದಿದ್ದರೆ, ಈ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. ಉಪ ಮುಖ್ಯಮಂತ್ರಿಯವರು ಹೇಳುತ್ತಾರೆ, ಮೆಸೇಜ್ ಹೋಗುತ್ತದೆ ಎಂದು. 23 ದಿನಗಳ ಕಾಲ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಇದನ್ನು ಪ್ರತಿಭಟಿಸಿ ನಾವು ಇವತ್ತಿನ ಸದನದ ನಡವಳಿಕೆಯನ್ನು ಬಾಯ್‌ಕಾಟ್ ಮಾಡಿ ಸರ್ಕಾರ ಇವತ್ತು ಈ ವಿಚಾರದಲ್ಲಿ ನೈತಿಕತೆಯನ್ನು ಕಳೆದುಕೊಂಡಿದೆ ಎಂದು ಹೇಳಿ ಪ್ರತಿಭಟನೆ ಮಾಡಿ ವಾಕ್‌ಔಟ್ ಮಾಡುತ್ತೇವೆ.

(ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ನಾನು ಸತತವಾಗಿ ಒಂದು ಅಂಶವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದೇನೆಂದರೆ, ಇವತ್ತು ಕೇಸನ್ನು ರಿಜಿಸ್ಟರ್ ಮಾಡಬೇಕಾದರೆ ಯಾವ ಪತ್ರಿಕಾ ವರದಿ ಕಾರಣವೋ ಅದೇ ಪತ್ರಿಕಾ ವರದಿಯಲ್ಲಿ ಡಿ.ವೈ.ಎಸ್.ಪಿ. ಸ್ಥಳಕ್ಕೆ ಹೋಗಿದ್ದಾರೆ. ಪೋಲೀಸರಿಗೆ ಗೊತ್ತಿದೆ, ಎಸ್.ಪಿ.ಗೆ ಗೊತ್ತಿದೆ, ಪೋಲೀಸ್ ವ್ಯವಸ್ಥೆಯಲ್ಲಿ ಜಿಲ್ಲಾ ಮಟ್ಟದಲ್ಲಿರತಕ್ಕ ಎಲ್ಲರಿಗೂ ಗೊತ್ತಿದೆ ಎಂದಿದೆ. ಈ ರೀತಿ ಗೊತ್ತಿದ್ದರೂ ಸಹ 23 ದಿನಗಳ ಕಾಲ ಇವರು ಏನೂ ಕ್ರಮ ತೆಗೆದುಕೊಂಡಿಲ್ಲ. ಅವರ ಮೇಲೆ ಅಂದರೆ ಎಸ್.ಪಿ.ಯನ್ನು ಸಸ್ಪೆಂಡ್ ಮಾಡುವುದಾಗಲಿ, ಅಲ್ಲಿ ಹೋಗಿದ್ದ ಡಿ.ವೈ.ಎಸ್.ಪಿ.ಯನ್ನು ಸಸ್ಪೆಂಡ್ ಮಾಡುವುದಾಗಲಿ.....

(ಗೊಂದಲ)

ಅಧ್ಯಕ್ಷರು : ತಾವು ಇದೇ ರೀತಿ ಭಾಷಣ ಮಾಡಿದರೆ ಯಾವುದೂ ಕಡತಕ್ಕೆ ಹೋಗುವುದಿಲ್ಲ. ಅದನ್ನೆಲ್ಲಾ ಕಡತದಿಂದ ತೆಗೆದುಹಾಕಬೇಕಾಗುತ್ತದೆ. ವಿರೋಧ ಪಕ್ಷದ ಉಪ

ನಾಯಕರು, ವಿವಿಧ ಪಕ್ಷಗಳ ನಾಯಕರು ಮತ್ತು ಸದಸ್ಯರುಗಳು ಸಲ್ಲಿಸಿದ ನಿಲುವಳಿ ಸೂಚನೆಗೆ ಪೂರ್ವಭಾವಿ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಸರ್ಕಾರದವರು ಈ ಬಗ್ಗೆ ಉತ್ತರ ನೀಡಿರುವ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸುತ್ತೇನೆ.

ನಿಯಮ 334 ರ ಮೇರೆಗೆ

ವಿಷಯ : 1) ಮೈಸೂರು, ಬೆಂಗಳೂರು, ಹಾಸನ ಮತ್ತು ಕೋಲಾರ ಜಿಲ್ಲಾ ಆರೋಗ್ಯ ಅಧಿಕಾರಿಗಳು ಯುನಾನಿ ಔಷಧಿಗಳನ್ನು ಅಂಗೀಕೃತ ದರ ಗುತ್ತಿಗೆ ಸಂಸ್ಥೆಗಳಿಂದ ಖರೀದಿ ಮಾಡದೆ ಇರುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅದರಲ್ಲೂ ಮೈಸೂರು, ಬೆಂಗಳೂರು, ಹಾಸನ ಹಾಗೂ ಕೋಲಾರ ಜಿಲ್ಲಾ ಆರೋಗ್ಯ ಅಧಿಕಾರಿಗಳು ಕಳೆದ 2-3 ವರ್ಷಗಳಿಂದ ಯುನಾನಿ ಔಷಧಿಗಳನ್ನು ಅಂಗೀಕೃತ ದರ ಗುತ್ತಿಗೆ ಸಂಸ್ಥೆಗಳಿಂದ (ಆರ್.ಸಿ. ಅಪ್ರೂಡ್) ಖರೀದಿ ಮಾಡದೇ ಇರುವುದರಿಂದ ಸುಮಾರು ಈ ಜಿಲ್ಲೆಗಳಲ್ಲಿರುವ 12 ಯುನಾನಿ ಔಷಧಾಲಯಗಳಲ್ಲಿ ಔಷಧಗಳಿಲ್ಲದೇ ರೋಗಿಗಳಿಗೆ ಬಹಳ ತೊಂದರೆಯುಂಟಾಗಿದೆ. ಆದ್ದರಿಂದ 31ನೇ ಮಾರ್ಚ್ ಒಳಗೆ ಈ ವರ್ಷಕ್ಕೆ ಸಂಬಂಧಪಟ್ಟಂತೆ ಯುನಾನಿ ಔಷಧಿಗಳನ್ನು ಜಿಲ್ಲಾ ಆರೋಗ್ಯ ಅಧಿಕಾರಿಗಳು ಖರೀದಿ ಮಾಡಲು ಆದೇಶ ನೀಡಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿ ಕೋರುತ್ತೇನೆ. ರಾಜ್ಯದಲ್ಲಿರುವ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಔಷಧಾಲಯಗಳು ಆಯಾ ಜಿಲ್ಲೆಗಳ ಜಿಲ್ಲಾ ಪರಿಷತ್ತುಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಆಯಾ ಜಿಲ್ಲೆಗಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಮುಖಾಂತರ ಈ ಔಷಾಧಾಲಯಗಳಿಗೆ ಔಷಧಿಗಳನ್ನು ಖರೀದಿಸಲಾಗುತ್ತಿದೆ. ಈ ಔಷಧಾಲಯಗಳಿಗೆ ಔಷಧಿಗಳನ್ನು ಖರೀದಿಸಲು ಅನುದಾನವನ್ನು ಸರ್ಕಾರದಿಂದ ಆಯಾ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆಯಾಗುತ್ತದೆ. ಔಷಧಿಗಳ ದರ ಗುತ್ತಿಗೆಯನ್ನು ಸರ್ಕಾರದ ಅನುಮತಿಯನ್ನು ಪಡೆದು ನಿಗದಿಗೊಳಿಸಿ ಎಲ್ಲಾ ಜಿಲ್ಲಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಈ ಇಲಾಖೆಯಿಂದ ಕಳುಹಿಸಿಕೊಡಲಾಗುತ್ತದೆ. ಮೈಸೂರು, ಬೆಂಗಳೂರು, ಹಾಸನ ಹಾಗೂ ಕೋಲಾರ ಜಿಲ್ಲೆಗಳಲ್ಲಿ 12 ಯುನಾನಿ ಆಸ್ಪತ್ರೆಗಳಿವೆ. ಪ್ರತಿ ಔಷಾಧಾಲಯಕ್ಕೆ 1992-93ರಿಂದ ರೂ. 12,000-00ಗಳ ಮೌಲ್ಯದ ಔಷಧಿಗಳನ್ನು ಖರೀದಿಸಲು ಅವಕಾಶವಿರುತ್ತದೆ. ಈ ಪೈಕಿ ಶೇ 60ರ ಮೌಲ್ಯದ ಆಯುರ್ವೇದ ಮತ್ತು ಯುನಾನಿ ಔಷಧಿಗಳನ್ನು (ಪ್ಯಾಕೇಜ್ ಪದ್ಧತಿಯಂತೆ) ಇಲಾಖೆಯ ಕೇಂದ್ರೀಯ ಔಷಾಧಾಗಾರದಲ್ಲಿ ತಯಾರಿಸಿ ಎಲ್ಲಾ ಆಯುರ್ವೇದ ಮತ್ತು ಯುನಾನಿ ಔಷಾಧಾಲಯಗಳಿಗೆ ಪ್ರತಿ ವರ್ಷವೂ ಸರಬರಾಜು ಮಾಡಲಾಗಿದೆ. ಉಳಿದ ಶೇಕಡಾ 40ರ ಮೌಲ್ಯದ ಔಷಧಿಗಳನ್ನು ದರ ಗುತ್ತಿಗೆ ಮುಖಾಂತರ ಕೊಂಡುಕೊಳ್ಳಲು, 1990-91 ಮತ್ತು 1991-92 ನೇ ಸಾಲಿಗೆ ಸರ್ಕಾರಿ ಆದೇಶ ಸಂಖ್ಯೆ ಹೆಚ್.ಎಫ್.ಡಬ್ಲ್ಯೂ. 90 ದಿನಾಂಕ 1.1.1991ರಲ್ಲಿ ದರ ಗುತ್ತಿಗೆ ನಿಗಧಿಪಡಿಸಿ ಆದೇಶ ಹೊರಡಿಸಲಾಗಿದೆ. ಹಾಗೆಯೇ 1992-93 ನೇ ಸಾಲಿಗೆ ಸರ್ಕಾರಿ ಆದೇಶ ಸಂಖ್ಯೆ ಹೆಚ್.ಎಫ್.ಡಬ್ಲ್ಯೂ. 206 ಹೆಚ್.ಪಿ.ಸಿ. 92 ದಿನಾಂಕ